32nd Year of Publication Phone: 3728.

ವಾರ್ಷಿಕ ಚಂದಾ
ಸ್ಥಳೀಯರಿಗೆ— ರೂ. 6-00.
ಪರಸ್ಥಳೀಯರಿಗೆ— (ಅಂಚೆ ಖರ್ಚು ಕೂಡಿ) ರೂ. 7-00.

# ಪ್ರಭಾತ
PRABHAT WEEKLY

ಬೆಲೆ 12 ಪೈಸೆ.

ಸಂಪುಟ: ೩೨. ಸಂಚಿಕೆ: ೨೨. | ಸಂಪಾದಕ: ಕುಡ್ವಿ ವಾಸುದೇವ ಶೆಣೈ. ರವಿವಾರ ತಾ. 3-7-1966. | VOL XXXII.. NO.22

# "ಕೊಂಗ್ರೆಸ್ಸು ಅಧಿಕಾರದಿಂದ ಹೋಗಲೇ ಬೇಕು!"

## ಕೊಂಗ್ರೆಸ್ಸು ನಮ್ಮ ಜನತೆಯನ್ನು ರಕ್ಷಿಸಲು ಅಸಮರ್ಥವಾಗಿದೆ— ಪ್ರತಿಯೊಂದು ರಂಗದಲ್ಲಿ ಕೊಂಗ್ರೆಸ್ಸು ಸೋತಿದೆ!

"ಕೊಂಗ್ರೆಸ್ಸು ಅಧಿಕಾರದಿಂದ ಹೋಗಲೇ ಬೇಕು!—ಸ್ವಾತಂತ್ರ್ಯ ದೊರೆತು ಹದಿನೆಂಟು ವರ್ಷಗಳಾದರೂ ಜನರ ಸ್ಥಿತಿ ಸುಧಾರಣೆಯಾಗುವ ಬದಲು ಸಂಕಷ್ಟಗಳು ಹೆಚ್ಚುವಂತೆ ಮಾಡಿದ ಈ ಪ್ರಭುತ್ವವನ್ನು ಪದಚ್ಯುತಗೊಳಿಸಿ ಜನತೆ ಯೋಗ್ಯ ಉತ್ತರ ಕೊಡಬೇಕು!"—

—ಎಂದು, ಮೂವರು ಭಾಷಣಕಾರರು, ಮೊನ್ನೆ (ತಾ. 30—6—66ನೇ ಗುರುವಾರ) ಮಂಗಳೂರು ಪುರಭವನದಲ್ಲಿ, ಸ್ಥಳೀಯ ಜನಸಂಘದ ಆಶ್ರಯದಲ್ಲಿ ಜರಗಿದ ಸಭೆಯಲ್ಲಿ ಜನತೆಗೆ ಕರೆ ಕೊಟ್ಟರು. ಭಾರತೀಯ ಜನಸಂಘದ ಅಧ್ಯಕ್ಷರಾಗಿರುವ ಶ್ರೀ| ಬಲರಾಜ್ ಮಧೋಕ್‌ರವರು ಪ್ರಧಾನ ಭಾಷಣಕರ್ತರಾಗಿರುವ ಈ ಸಭೆಯ ಅಧ್ಯಕ್ಷತೆಯನ್ನು ಡಾ| ಎಂ. ಸಿ. ಶಾಸ್ತ್ರಿಯವರು ವಹಿಸಿದ್ದರು. ಒಬ್ಬರಮೇಲಿನ್ನೊಬ್ಬರಂತೆ ಮೂವರು ಭಾಷಣಕಾರರೂ ಕೊಂಗ್ರೆಸ್ಸಿನ ಧೋರಣೆಗಳನ್ನು, ಚಬುಕಿನ ಹೊಡೆತಗಳಂತೆ ಚುರುಕು ಮಾತುಗಳಿಂದ ಥಳಿಸಿ ಟೀಕಿಸಿ, ಬಡ ಜನತೆ ದಿಕ್ಕುಗಾಣದಂತಾಗಿರುವ ಈ ದುಸ್ಥಿತಿಗೆ ಕಾರಣವಾದ ಕೊಂಗ್ರೆಸ್ಸನ್ನು ಅಧಿಕಾರದಿಂದಿಳಿಸಲೇ ಬೇಕೆಂದು ಜನತೆಯೊಡನೆ ವಿನಂತಿಸಿಕೊಂಡರು.

ಸ್ವಾಗತಭಾಷಣಮಾಡುತ್ತ ಶ್ರೀ|ಬೋಳ ರಘುರಾಮ ಶೆಟ್ಟರು,ಜನತೆಯ ಹಕ್ಕು ಬಾಧ್ಯತೆಗಳಿಗಾಗಿ ಹೋರಾಡುತ್ತಿರುವ ಶ್ರೀ| ಬಲರಾಜ ಮಧೋಕರವರು ದೇಶಕ್ಕಾಗಿ ತ್ಯಾಗಮಾಡಿದವರೂ, ಅವಿಶ್ರಾಂತವಾಗಿ ಶ್ರಮಿಸುವವರೂ, ಶ್ರೇಷ್ಠ ವಾಗ್ಮಿಗಳೂ ಆಗಿದ್ದು, ಜನಪ್ರಿಯರಾಗಿರುವರೆಂದು, ಸಭಿಕರಿಗೆ ಪರಿಚಯಮಾಡಿಕೊಟ್ಟರು. ಸ್ವಾತಂತ್ರ್ಯ ದೊರೆತು ಹದಿನೆಂಟು ವರ್ಷಗಳಾದರೂ ದೇಶವು ಯಾವ ರಂಗದಲ್ಲೂ ಸ್ವಯಂಪೂರ್ಣತೆಹೊಂದಿಲ್ಲವೆಂದೂ, ದಿನೇದಿನೇ ಸಂಕಷ್ಟಗಳು ಹೆಚ್ಚುತ್ತಿರುವ ಜನತೆಯು ಈಗ ರೂಪಾಯಿಯ ಮೌಲ್ಯಛೇದನದಿಂದ ಮತ್ತಿಷ್ಟು ಸಂಕಷ್ಟಕ್ಕೀಡಾಗಿದೆಯೆಂದೂ, ಅತ್ತ ನಮ್ಮ ದೇಶದ ಮೇಲೆ ಯಾವಾಗ ಆಕ್ರಮಣ ನಡೆದೀತೋ ಎಂದು ಹೇಳಲು ಬರುವುದಿಲ್ಲವೆಂದೂ ಹೇಳುತ್ತ, ಜನಸಂಘವು ಜನತಾಹಿತದ ಬಗ್ಗೆ ದುಡಿವ ಜನಪ್ರೀತಿ ಸಂಸ್ಥೆಯಾಗಿದೆಯೆಂದೂ, ಈ ಜಿಲ್ಲೆಯಲ್ಲಿ ಜನಸಂಘವು ವಿಜಯಗಳಿಸುವುದೆಂದು ತಾನು ಶ್ರೀ| ಮಧೋಕ್‌ರವರಿಗೆ ಭರವಸೆಕೊಡಬಲ್ಲೆನೆಂದೂ ತಿಳಿಸಿದರು.

ಅಧ್ಯಕ್ಷಭಾಷಣಮಾಡುತ್ತ ಡಾ| ಎಂ. ಸಿ. ಶಾಸ್ತ್ರಿಗಳವರು, ಕೊಂಗ್ರೆಸ್ ಪ್ರಭುಗಳ ಹದಿನೆಂಟು ವರ್ಷಗಳ ದುರಾಡಳಿತವೇ ಜನತೆಯ ಇಂದಿನ ಅಸಹನೀಯ ಸಂಕಷ್ಟದ ಚರಿತ್ರವೆಂಬುದನ್ನು, ಒಂದೊಂದೇ ಉದಾಹರಣೆಯಿಂದ ,ಸಭಿಕರ ಮುಂದೆ ಅರಳಿಸಿದರು: 'ಉತ್ತಿಷ್ಠ ಜಾಗ್ರತ ಪ್ರಾಪ್ಯವರಾನ್ನಿ ಬೋಧತ:' ಎಂಬ ದಿವ್ಯ ಶ್ಲೋಕವನ್ನೆತ್ತಿ ಸ್ವಾಮಿ ವಿವೇಕಾನಂದರು, ಬ್ರಿಟಿಷರ ಕಾಲದಲ್ಲಿ–ಜನಜಾಗೃತಿಯುಂಟುಮಾಡಿದರು. ಇವತ್ತು ನಾವು ಸ್ವತಂತ್ರರಾಗಿ ಹದಿನೆಂಟು ವರುಷಗಳಾದುವು. ಇಂದು ನಮಗೆ ಪ್ರಪಂಚದಲ್ಲಿ ಸ್ನೇಹಿತರೆಂಬವರೇ ಇಲ್ಲ! ಭಾರತದ ಇಂದಿನ ಈ ದುಸ್ಥಿತಿ, ಈ ಮೊದಲೆಂದೂ ಇರಲಿಲ್ಲ. ಹಿಂದಿನ ಕಾಲದಲ್ಲಿದ್ದವರು ರಾಕ್ಷಸರೆನ್ನುತ್ತೇವೆ. ಅವರು ಪ್ರಗತಿಯ ವಿರೋಧಿಗಳೆಂದೂ ಹೇಳುತ್ತೇವೆ. ಇಂದಿನ ರಾಕ್ಷಸ ಎಂದರೆ ಕೊಂಗ್ರೆಸ್ಸು ಅನ್ನುತ್ತೇನೆ. ಈ ರಾಕ್ಷಸನನ್ನು ನಾವು ಓಡಿಸಲೇ ಬೇಕು!"

"ನಮ್ಮ ಶಿಕ್ಷಣ ವಿಚಾರವನ್ನು ತೆಗೆದುಕೊಳ್ಳಿರಿ ನಮಗೆ ಭಾಷೆ ಯಾವುದು,–ಇಂಗ್ಲಿಷೋ ಹಿಂದಿಯೋ ಎಂದು ಇನ್ನೂ ನಾವು ನಿಶ್ಚಯಿಸಿಲ್ಲ. ಪಠ್ಯಪುಸ್ತಕಗಳು, ತರಗತಿ ಆರಂಭವಾಗಿ ತಿಂಗಳುಗಳು ಕಳೆದರೂ ದೊರೆಯುತ್ತಿಲ್ಲ. ನೀತಿ ಮತ್ತು ತತ್ವದ ಹೆಸರಿನಲ್ಲಿ ಮದ್ಯನಿಷೇಧವನ್ನು ತಂದು—ದೊಡ್ಡ ತಮಾಷೆಯನ್ನ ನೋಡುತಿದ್ದೇವೆ. ಕುಡಿತತನ ಮತ್ತು ಭ್ರಷ್ಟಾಚಾರವು ಇದರಿಂದ ಮಿತಿಮೀರಿದೆ. ಎಷ್ಟು ಕೊಂಗ್ರೆಸ್ ಸರಕಾರಗಳು ಬಂದರೂ ಮದ್ಯಪಾನವನ್ನು ನಿಲ್ಲಿಸಲು ಸಮರ್ಥವಾಗಲಾರವೆಂದು ನಾನು ಖಡಾಖಂಡಿತವಾಗಿ ಹೇಳುತ್ತೇನೆ."

"ಸ್ವರ್ಣನಿಯಂತ್ರಣವನ್ನು ತಂದರು ಇದರ ಫಲವೋ? 'ಕೆರೆಟ್' ಎಂದರೇನೆಂಬ ವಿಷಯವು ಹೆಂಗಸರಿಗೂ ಸರಿಯಾಗಿ ತಿಳಿದು, ಬಂಗಾರದ ಧಾರಣೆಯೂ ಹೆಚ್ಚಿತು, ಮಜೂರಿಯೂ ಹೆಚ್ಚಿತು, ಕಾನೂನು ಉಲ್ಲಂಘನೆಗಳು ಧಾರಾಳವಾದುವು. ಈಗ ಎಲ್ಲರೂ 22 ಕೆರೆಟ್ ಬೇಕೆನ್ನುವವರೇ!"

"ರೂಪಾಯಿ ಅಪಮೌಲ್ಯನ ತಂದರು. ನಿರ್ಯಾತ ಹೆಚ್ಚಿಸಿದರೆ ನಮಗೆ ಪ್ರಯೋಜನವಿದೆಯೆಂದು ಹೇಳಲಾಗುತ್ತಿದೆ. ಆದರೆ, ನಮ್ಮೊಡನೆ ನಿರ್ಯಾತಮಾಡುವಂಥದ್ದೇನು ಮತ್ತು ಎಷ್ಟು? ನಮ್ಮಲ್ಲಿ ಧಾರಾಳವಾಗಿರುವವರೆಂದರೆ ಮಂತ್ರಿಗಳು, ಪ್ರತಿಯೊಂದು ರಾಜ್ಯದಿಂದ ಇಬ್ಬರಂತಾದರೂ ಮಂತ್ರಿಗಳನ್ನು ಪರದೇಶಗಳಿಗೆ ನಿರ್ಯಾತಮಾಡಬಹುದೆಂದೆನಿಸುತ್ತದೆ."

"ಔಷಧಿಯನ್ನೂ ಅನ್ನವನ್ನೂ ವಿಕ್ರಯಿಸಬೇಡ – ಎಂದು ನಮ್ಮ ಹಿರಿಯರು ಬೋಧಿಸಿದರು. ನಮ್ಮ ಹಿರಿಯರು ಇವೆರಡನ್ನೂ ಈ ಮೊದಲು ದಾನ ತೆಗೆದುಕೊಂಡಿರಲಿಲ್ಲ. ಕೊಂಗ್ರೆಸ್ಸು ಅಧಿಕಾರಕ್ಕೆ ಬಂದ ನಂತರವೇ ದಾನ ಬೇಡಲಾರಂಭಿಸಿತು."

"ನಾವು ಕೊಂಗ್ರೆಸ್ಸನ್ನು ಸೋಲಿಸಲೇ ಬೇಕು. ಒಂದುವೇಳೆ ಪೂರ್ಣ ಸೋಲಿಸಲಾಗದಿದ್ದರೆ, ಬಲವಾದ ಪ್ರತಿಪಕ್ಷವನ್ನಾದರೂ ಕಟ್ಟಬೇಕು.

"ಸರಸ್ವತಿ ಸ್ತೋತ್ರವು 'ಕಾಶ್ಮೀರ ಪುರವಾಸಿನಿ' ಎನ್ನುತ್ತಿದೆ. ಭಾರತೀಯ ಸಂಸ್ಕೃತಿ ಅಲ್ಲಿಂದಲೇ ಇಳಿದುಬಂತು. ಕಾಶ್ಮೀರ ಹೋದರೆ ಭಾರತದ ತಲೆಯೇ ಹೋದಂತೆ."

— ಮುಂತಾಗಿ, ಡಾ| ಶಾಸ್ತ್ರಿಗಳವರು, ಅರ್ಥವತ್ತಾಗಿ ಮಾತಾಡಿದರು.

ಶ್ರೀ| ಬಲರಾಜ್ ಮಧೋಕ್‌ರವರು ಹಿಂದಿಯಲ್ಲಿ ಭಾಷಣಕೊಡುತ್ತ, "ಶಾಂತಿ, ಶಾಂತಿ ಎಂದೇ ಮೆರೆಯಲು ನೋಡುತ್ತೇವೆ. ಯಾವ ಶಾಂತಿ? ಎಲ್ಲಿಯ ಶಾಂತಿ? ಭಾರತೀಯ ಪರಂಪರೆಯಲ್ಲಿ ಶಾಂತಿಯೆಂಬುದೇ ಇರಲಿಲ್ಲ. ನಮ್ಮದು ವೀರಪರಂಪರೆ, ರಾಮಾಯಣವು ಅದನ್ನು ಬೋಧಿಸಿದೆ; ಮಹಾಭಾರತವೂ ಅದನ್ನು ಸ್ಪಷ್ಟ ವಿವರಿಸಿದೆ. ಕೊಂಗ್ರೆಸ್ಸು ತನ್ನ ಹೇಡಿತನವನ್ನು ಮುಚ್ಚಿಡುವ ಸಲುವಾಗಿ 'ನಮ್ಮದು ಶಾಂತಿ; ನಾವು ಶಾಂತಿಪಾಲಕರು' ಎನ್ನುತ್ತಿದೆ." ಎಂದರು.

"ನಮ್ಮ ಜವಾನರು ವೀರಾವೇಶದಿಂದ ಕಾದಾಡಿ, ಅಸಾಧ್ಯವೆನಿಸುವ ಪಟ್ಟನ್ ಟ್ಯಾಂಕ್‌ಗಳನು, ಧ್ವಂಸಗೊಳಿಸಿ, ಶತ್ರುವನ್ನು ಕಂಗಾಲುಗೊಳಿಸಿದರು. ಅಜೇಯ ಪಟ್ಟನ್ ಟ್ಯಾಂಕ್‌ಗಳನ್ನು ಹೊಂದಿರುವೆನೆಂಬ ದರ್ಪದಿಂದ ಅಯೂಬರು, "ನಾವು ಧಿಲ್ಲಿವರೆಗೆ ವಿಹರಿಸಲು ಹೋಗುತಿದ್ದೇವೆ" ಎಂದು ಗೇಲಿ ಮಾಡಿ ನುಡಿದರು. ನಮ್ಮ ಜವಾನರು ಕೆನ್ನೆಗೆ ಬಡಿದಂತೆ ಉತ್ತರವಿತ್ತರು. ಶತ್ರುಸೇನೆಯು ನುಚ್ಚುನೂರಾಗಿ, ಹಿಂದಡಿಯಿಡುತಿದ್ದಾಗ, ನಾವು ತಾಷ್ಕೆಂಟ್ ಮಾತುಕತೆಗೆ ಒಪ್ಪಿಗೆಯಿತ್ತೆವು. ಇದರಿಂದ ನಾವು, ಹಿಂದಿನ ತ್ಯಾಗ ಮತ್ತು ಶ್ರಮಗಳನ್ನು ವ್ಯರ್ಥಗೊಳಿಸಿದಂತಾಯಿತು. ಈಗಲೂ ಪಾಕಿಸ್ತಾನವೇ ತಾಷ್ಕೆಂಟ್ ಒಪ್ಪಂದವನ್ನು ಅಗಣಿಸಿ ನಡೆಯುತ್ತಿದೆ ಕಾಶ್ಮೀರದ ಪಟ್ಟು ಹಿಡಿದು ಕುಳಿತಿದೆ. ಈ ನಡುವೆ ಜಯಪ್ರಕಾಶ ನಾರಾಯಣರೊಬ್ಬರು, ಪ್ರಧಾನ ಸಚಿವೆಗೆ ಕಾಶ್ಮೀರದ ಕುರಿತು ಪತ್ರಬರೆದು, ವಿದೂಷಕನಂತೆ ವರ್ತಿಸುತ್ತಿದ್ದಾರೆ.



"ಭಾರತವು ಬಲಿಷ್ಠವಾದರೆನೇ ಪ್ರತಿಯೊಬ್ಬರೂ ಭಾರತವನ್ನು ಗೌರವಿಸುವರು ಮತ್ತು ನಮ್ಮ ಕಡೆಗೆ ಒಲಿವರು. ಭಾರತವು ಅಬಲಿಯಾದರೆ ನಮ್ಮ ಕಡೆ ಯಾರೂ ನಿಲ್ಲಲಾರರು.

"ನಾನು ನನ್ನ ಸ್ವರವೆತ್ತಿ ಹೇಳುತ್ತೇನೆ–ಈ ಕೊಂಗ್ರೆಸ್ಸು ಜನತೆಯ ರಕ್ಷಣೆ ಮಾ

(4ನೇ ಪುಟ ನೋಡಿ)

"ಯುಧಿಷ್ಠಿರ! ಆ ವೇಳೆ ಉಪಮನ್ಯುವು ದೇವೇಂದ್ರನೊಡನೆ ಈ ಪ್ರಕಾರವಾಗಿ ನುಡಿದನೆಂದು ಹೇಳಿದನು. ಶಕ್ರನೆ! ನಾನು ಸದಸದ್ ಸ್ವರೂಪನೂ, ವ್ಯಕ್ತಾವ್ಯಕ್ತನೂ, ನಿತ್ಯನೂ, ಏಕನೂ, ಅನೇಕನೂ ಆಗಿರುವ ಶಂಕರನಿಂದ ಮಾತ್ರ ವರವನ್ನು ಅಪೇಕ್ಷಿಸುತ್ತೇನೆ.

ಅನಾದಿಮಧ್ಯಪರ್ಯಂತಂ
ಜ್ಞಾನೈಶ್ವರ್ಯಮಚಿಂತಿತಮ್ ।
ಆತ್ಮಾನಂ ಪರಮಂ ಯಸ್ಮಾದ್ ವರಂ
ತಸ್ಮಾದ್ ವೃಣೀಮಹೇ ॥೧೯೪॥

ಐಶ್ವರ್ಯಂ ಸಕಲಂ ಯಸ್ಮಾ
ದನುತ್ಪಾದಿತಮವ್ಯಯಮ್ ।
ಅಬೀಜಾದ್ ಬೀಜಸಂಭೂತಂ ವರಂ
ತಸ್ಮಾದ್ ವೃಣೀಮಹೇ ॥೧೯೫॥

ತಪಸಃ ಪರಮಂ ಜ್ಯೋತಿಸ್ತ
ಪಸ್ತದ್ವೃತ್ತಿನಂ ಪರಮ್ ।
ಯಂ ಜ್ಞಾತ್ವಾನಾನು ಶೋಚಂತಿ ವರಂ
ತಸ್ಮಾದ್ ವೃಣೀಮಹೇ ॥೧೯೬॥

ಭೂತಭಾವನಭಾವಜ್ಞಂ ಸರ್ವ
ಭೂತಾದಿ ಭಾವನಮ್ ।
ಸರ್ವಗಂ ಸರ್ವದಂ ದೇವಂ
ಪೂಜಯಾಮಿ ಪುರಂದರ ॥೧೯೭॥

ಆದಿ, ಮಧ್ಯ ಮತ್ತು ಅಂತ್ಯಗಳಿಲ್ಲದವನು, ಜ್ಞಾನ ಮತ್ತು ಐಶ್ವರ್ಯಸ್ವರೂಪನು, ಅಚಿಂತ್ಯನು ಆಗಿರುವ ಪರಮಾತ್ಮಸ್ವರೂಪನಿಂದ ಮಾತ್ರ ನಾನು ವರಗಳನ್ನು ಬಯಸುತ್ತೇನೆ. ಯಾರು ಅವ್ಯಯನು ಯಾರಿಂದ ಈ ಸಕಲ ಐಶ್ವರ್ಯಾದಿಗಳು ಉಂಟಾಗಿವೆಯೋ, ಈ ವಿಶ್ವಕ್ಕೆ ಬೀಜಸ್ವರೂಪನಾಗಿರುವನೋ ಅಂತಹರಿಂದ ಮಾತ್ರ ನಾನು ವರಗಳನ್ನು ಪಡೆಯಬೇಕೆಂದು ತಪಸ್ಸನ್ನಾಚರಿಸಿದ್ದಾಗಿದೆ. ತಪಸ್ಸಿನಿಂದ ಅತೀತನಾಗಿರುವವನು ಪರಮಜ್ಯೋತಿಸ್ವರೂಪನು; ಎಲ್ಲಾ ತಪಸ್ಸುಗಳ ಸಾರಸ್ವರೂಪನು; ಯಾರನ್ನು ಅರಿತರೆ ಶೋಕಸಾಗರವನ್ನು ಉತ್ತರಿಸಬಹುದಾಗಿದೆಯೋ ಅಂತಹ ಮಹದೇವನಿಂದ ಮಾತ್ರ ನಾನು ವರಗಳನ್ನು ಅಪೇಕ್ಷಿಸುವುದಾಗಿದೆ. ಪುರಂದರ! ಉತ್ಪತ್ತಿಸ್ಥಿತಿಲಯಗಳನ್ನು ಅರಿತವನು ಎಲ್ಲ ಭೂತಾದಿಗಳನ್ನು ಸೃಷ್ಟಿಸುವವನು, ಸರ್ವವ್ಯಾಪಿಯು, ಸರ್ವಗಳನ್ನು ಅನುಗ್ರಹಿಸುವ ಶಕ್ತಿಸಂಪನ್ನನು ಆಗಿರುವ ದೇವಾದಿದೇವನನ್ನು ಮಾತ್ರ ನಾನು ಆರಾಧಿಸುತಿದ್ದೇನೆ.

ವೇದಾದಿಗಳಿಂದ ಜಯಿಸಲ್ಪಡಲಾರದವನು, ಸಾಂಖ್ಯ ಮತ್ತು ಯೋಗಶಾಸ್ತ್ರಗಳ ಧ್ಯೇಯಗಳ ಮೂರ್ತಿಮಂತಸ್ವರೂಪನು, ತತ್ವಜ್ಞರೆಲ್ಲರೂ ಉಪಾಸಿಸುವ, ಅಗ್ನಿ, ಅಪ, ಅನಿಲ, ಪೃಥ್ವಿ, ಆಕಾಶ ಎಂಬ ಈ ಪಂಚಭೂತಗಳನ್ನು, ಬುದ್ಧಿ, ಮನಸ್ಸು, ಮಹತ್ತುಗಳೆಲ್ಲಾ ಸೃಷ್ಟಿಸಿದವನೂ ಆಗಿರುವ ಪರಾತ್ಪರ ಪರಮೇಶ್ವರನನ್ನು ಪೂಜಿಸುತಿದ್ದೇನೆ.

ಭಗವತ್ಕೃತ್ತವೈಶ್ವರ್ಯಂ
ಬ್ರಹ್ಮವಿಷ್ಣುಪುರೋಗಮಮ್ ।
ವಿದ್ಯತೇಽನ್ಯೈ ಮಹಾದೇವಾದ್
ಬ್ರುಹಿಕಃ ಪರಮೇಶ್ವರಮ್ ॥೨೦೪॥

ಸೃಷ್ಟಿಸ್ಥಿತಿಪಾಲಕರಾದ ಬ್ರಹ್ಮ, ವಿಷ್ಣು ಮತ್ತು ರುದ್ರರಲ್ಲಿ ನೆಲಸಿರುವ ಭಗವಂತನು ಐಶ್ವರ್ಯಸಂಪನ್ನನು ಆದ ಮಹಾದೇವನಿಂದ ಪ್ರತ್ಯಕ್ಷನಾದ ಪರಾತ್ಪರ ದೇವಾದಿದೇವನು ಇರುವನೆ? ದೈತ್ಯ,ದಾನವರನ್ನು ಮರ್ದನಮಾಡಿದ ತ್ರಿಪುರಧ್ವಂಸಕ ಮಹಾದೇವನಲ್ಲದೆ ಅನ್ಯರಾರು ಜಗವಂದ್ಯರಿರುವರು? ಯೋಗಿಗಳಿಂದಲೂ, ಗಂಧರ್ವ ಸಿದ್ಧರಿಂದಲೂ, ದೇವತೆಗಳಿಂದಲೂ ಸದಾ ವಂದಿಸಲ್ಪಡುವ ಶಂಕರನಿಗಿಂತ ಅದ್ವಿತೀಯ ದೇವರಿರುವರೆ?



# ಮಹಾಭಾರತ ಕಥಾಮೃತ

ಲೇಖಕ: ಶ್ರೀ ಕೋ. ಶ. ಕಾರಂತ, ಬಿ.ಎ.,ಬಿ.ಎಲ್., ಎಡ್ವೊಕೇಟ್, ಮಂಗಳೂರು.

## ಅನುಶಾಸನಪರ್ವ

### ಶಿವಮಾಹಾತ್ಮ್ಯ—೪

ತನು ಐಶ್ವರ್ಯಸಂಪನ್ನನು ಆದ ಮಹಾದೇವನಿಂದ ಪ್ರತ್ಯಕ್ಷನಾದ ಪರಾತ್ಪರ ದೇವಾದಿದೇವನು ಇರುವನೆ? ದೈತ್ಯ,ದಾನವರನ್ನು ಮರ್ದನಮಾಡಿದ ತ್ರಿಪುರಧ್ವಂಸಕ ಮಹಾದೇವನಲ್ಲದೆ ಅನ್ಯರಾರು ಜಗವಂದ್ಯರಿರುವರು? ಯೋಗಿಗಳಿಂದಲೂ, ಗಂಧರ್ವ ಸಿದ್ಧರಿಂದಲೂ, ದೇವತೆಗಳಿಂದಲೂ ಸದಾ ವಂದಿಸಲ್ಪಡುವ ಶಂಕರನಿಗಿಂತ ಅದ್ವಿತೀಯ ದೇವರಿರುವರೆ?

ಆದ್ದರಿಂದ ದೇವೇಂದ್ರ! ನಾನು ಮಹದೇವನಿಂದ ವರಗಳನ್ನು ಪ್ರಾರ್ಥಿಸುತ್ತೇನೆ. ನಿನ್ನ ಕೊಡುಗೈಯ ವರಗಳನ್ನು ಅಪೇಕ್ಷಿಪವನಲ್ಲ.

ತಸ್ಮಾದ್ ವರಮಹಂ ಕಾಂಕ್ಷೇ
ನಿಧನಂ ವಾಪಿ ಕೌಶಿಕ ।
ಗಚ್ಛ ವಾ ತಿಷ್ಠ ವಾ ಶಕ್ರ
ಯಥೇಷ್ಟಂ ಬಲಸೂದನ ॥೨೪೮॥

ಕಾಮಮೇಷ ವರೋ ಮೇಽಸ್ತು
ಶಾಪೋವಾಥ ಮಹೇಶ್ವರಾತ್ ।
ನ ಚಾನ್ಯಾಂ ದೇವತಾಂ ಕಾಂಕ್ಷೇ
ಸರ್ವಕಾಮ ಫಲಾನಪಿ ॥೨೪೯॥

ಆದ್ದರಿಂದ ಕೌಶಿಕ! ನಾನು ಪರಮಶಿವನಿಂದ ಮಾತ್ರ ವರಗಳನ್ನು ಅಪೇಕ್ಷಿಸುವುದಕ್ಕಾಗಿ ತಪಸ್ಸನ್ನಾಚರಿಸುವುದು. ಭಗವಂತನಿಗೆ ವರಗಳನ್ನು ಕರುಣಿಸಲು ಇಷ್ಟವಿಲ್ಲದಿದ್ದರೆ ನನಗೆ ವಿನಾಶವೇ ಶ್ರೇಯಸ್ಕರವು. ಆದ್ದರಿಂದ ಅನ್ಯರಿಂದಲೂ ವರಗಳನ್ನು ನಾನು ಬಯಸುವುದಿಲ್ಲ. ಆದ್ದರಿಂದ ದೇವೇಂದ್ರ! ತಾವು ಹೋಗಬಹುದು; ಇಲ್ಲದಿದ್ದರೇ ಇಚ್ಛೆಯೋ ನಿಂತಿರಲಿ. ಮಹಾದೇವನಿಂದ ವರ ಅಥವಾ ಶಾಪವೇ ನನ್ನ ಮಹತ್ವಾಕಾಂಕ್ಷೆಗಳಾಗಿವೆ. ಅನ್ಯ ದೇವತೆಗಳನ್ನು ಸರ್ವ ಕಾಮಫಲಗಳನ್ನು ಅನುಗ್ರಹಿಸುವುದಿದ್ದರೂ ನಾನು ಪ್ರಾರ್ಥಿಸುವುದಿಲ್ಲ ಎಂದು ನಿವೇದಿಸಿ ತಾನು ಪರಶಿವನ ದರ್ಶನವಾಗಲಿಲ್ಲ ಎಂದು ಚಿಂತಾಪರನಾದನು. ಆಗ ಕ್ಷಣಾರ್ಧದಲ್ಲಿ ಇಂದ್ರನೇರಿದ್ದ ಐರಾವತವು ವೃಷಭವಾಯಿತು. ದೇವೇಂದ್ರನು ಅದೃಶ್ಯನಾಗಿ ಕರುಣಾಮಯನ ಪರಂಜ್ಯೋತಿಸ್ವರೂಪರಾದ ಉಮಾಮಹೇಶ್ವರರು ಗೋಚರರಾದರು. ಆ ದಿವ್ಯ ಮಂಗಳ ಮೂರ್ತಿಗಳನ್ನು ನಾನೆಂತು ಬಣ್ಣಿಸಲಾಪೆನು?

ಗೋವಿಂದ! ನನ್ನ ಈ ನಾಲಗೆಯಿಂದ ಆ ಪರಮಮಂಗಳಮೂರ್ತಿಗಳನ್ನು ವರ್ಣಿಸಲು ಅಸದಳವು. ಉಪಮನ್ಯುವು ಹೇಳಿದ ಕೆಲವು ದಿವ್ಯ ಶ್ಲೋಕಗಳನ್ನು ಸೂಚಿಸುವುದೇ ಪ್ರಶಸ್ತವೆಂದು ನನಗನ್ನಿಸುತ್ತಿದೆ. ಧರ್ಮಪುತ್ರ! ಆ ದಿವ್ಯ ಶ್ಲೋಕಗಳನ್ನು ಸ್ತೋತ್ರಗಳನ್ನು ಅವಧರಿಸುವವನಾಗು.

ನೀಲಕಂಠಂ ಮಹಾತ್ಮಾನಮಸಕ್ತಂ
ತೇಜಸಾಂನಿಧಿಮ್ ।
ಅಷ್ಟದಶಭುಜಂ ಸ್ಥಾಣುಂ
ಸರ್ವಾಭರಣಭೂಷಿತಮ್ ॥೨೫೦॥

ಶುಕ್ಲಾಂಬರಧರಂ ದೇವಂ
ಶುಕ್ಲಮಾಲ್ಯಾನುಲೇಪನಮ್ ।
ಶುಕ್ಲಧ್ವಜಮನಾದ್ಯಂತಂ
ಶುಕ್ಲಯಜ್ಞೋಪವೀತನಮ್ ॥೨೫೧॥

ಗಾಯದ್ಭಿರ್ನೃತ್ಯಮಾನೈಶ್ಚ
ವಾದಯದ್ಭಿಶ್ಚ ಸರ್ವಶಃ ।
ವೃತಂ ಪಾರ್ಶ್ವಚರೈರ್ದಿವ್ಯೈರಾತ್ಮ
ತುಲ್ಯಪರಾಕ್ರಮೈಃ ॥೨೫೨॥

ಬಾಲೇಂದುಮುಕುಟಂ ಪಾಂಡುಂ
ಶರಚ್ಚಂದ್ರಮಿವೋದಿತಮ್ ।
ತ್ರಿಭಿರ್ನೇತ್ರೈಃ ಕೃತೋದ್ಯೋತಂ
ತ್ರಿಭಿಃ ಸೂರ್ಯೈರಿವೋದಿತೈ ॥೨೫೩॥

೦ ೦ ೦

ಶರಚ್ಚ ಸೂರ್ಯಸಂಕಾಶಃ
ಕಾಲಾನಲಸಮದ್ಯುತಿಃ ।
ಏಕದಸ್ತ್ರಂ ಮಹಾಘೋರಂ
ದಿವ್ಯಂ ಪಾಶುಪತಂ ಮಹತ್ ॥೨೫೪॥

ಅದ್ವಿತೀಯಮನಿರ್ದೇಶ್ಯಂ ಸರ್ವಭೂತ
ಭಯಾವಹಮ್ ।
ಸಸ್ಫುಲಿಂಗಂ ಮಹಾಕಾಯಂ
ವಿಸೃಜಂತಮಿವಾನಲಮ್ ॥೨೫೫॥

ಏಕಪಾದಂ ಮಹಾದಂಷ್ಟ್ರಂ
ಸಹಸ್ರಶಿರಸೋದರಮ್ ।
ಸಹಸ್ರಭುಜ ಜಿಹ್ವಾಕ್ಷಮುದ್ಗಿರಂತ
ಮಿವಾನಲಮ್ ॥೨೬೦॥

ಈ ಪ್ರಕಾರ ದಿವ್ಯ ಪರಂಜ್ಯೋತಿಸ್ವರೂಪನಾಗಿರುವ ಮಹಾದೇವನು ಶತರುದ್ರರು, ಬ್ರಹ್ಮ, ನಾರಾಯಣ, ದೇವರಾಜ ಕೌಶಿಕ, ದೇವ ಮತ್ತು ಭೂತಗಣಗಳಿಂದ ಆವೃತನಾಗಿ ಆವಿರ್ಭವಿಸಿದನು. ವಿಶ್ವದ ಪತಿಯಾದ ಮಹೇಶ್ವರನನ್ನು ಉಪಮನ್ಯುವು ಈ ಪ್ರಕಾರ ದಿವ್ಯ ಸ್ತೋತ್ರಗಳಿಂದ ಸ್ತುತಿಸಿದನು.

ನಮೋ ದೇವಾಧಿದೇವಾಯ
ಮಹಾದೇವಾಯ ತೇ ನಮಃ ॥೨೬೬॥
ಶಕ್ರರೂಪಾಯ ಶಕ್ರಾಯ
ಶಕ್ರವೇಷ ಧಾರಾಯಚ ।
ನಮಸ್ತೇ ವಜ್ರಹಸ್ತಾಯ
ಪಿಂಗಲಾಯಾರುಣಾಯಚ ॥೨೬೮॥

ಪಿನಾಕಪಾಣಯೇ ನಿತ್ಯಂ
ಶಂಖಶೂಲ ಧರಾಯಚ ।
ನಮಸ್ತೇ ಕೃಷ್ಣವಾಸಾಯ
ಕೃಷ್ಣ ಕುಂಚಿತಮೂರ್ಧತೇ ॥
ಕೃಷ್ಣಾಜಿನೋತ್ತರೀಯಾಯ
ಕೃಷ್ಣಾಷ್ಟಮಿರತಾಯ ಚ ।
ಶುಕ್ಲವರ್ಣಾಯ ಶುಕ್ಲಾಯ
ಶುಕ್ಲಾಂಬರಧರಾಯ ಚ ॥೨೯೦॥

ಶುಕ್ಲಭಸ್ಮಾವಮತ್ತಾಯ
ಶುಕ್ಲಕರ್ಮರತಾಯ ಚ ।
ನಮಸ್ತೇಽಸ್ತು ರಕ್ತವರ್ಣಾಯ
ಶುಕ್ಲಾಂಬರಧರಾಯ ಚ ॥೧೯೧॥

ರಕ್ತಧ್ವಜಪತಾಕಾಯ
ರಕ್ತಸ್ರಗನುಲೇಪಿನೇ ।
ನಮೋಽಸ್ತು ಪೀತವರ್ಣಾಯ
ಪೀತಾಂಬರಧರಾಯ ಚ ॥
ನಮೋಽಸ್ತು ಚ್ಛ್ರಿತಚ್ಛತ್ರಾಯ
ಕಿರೀಟವರಧಾರಿಣೇ ॥೨೯೨॥

ಅರ್ಧಹಾರಾರ್ಧಕೇಯೂರ
ಅರ್ಧಕುಂಡಲಕರ್ಣಿನೇ ॥೧೯೩॥
ನಮಃ ಪವನವೇಗಾಯ
ನಮೋ ದೇವಾಯವೈ ನಮಃ ।
ಸುರೇಂದ್ರಾಯ ಮುನೀಂದ್ರಾಯ
ಮಹೇಂದ್ರಾಯ ನಮೋಽಸ್ತು ತೇ
॥೨೯೪॥

(ಸಶೇಷ)

# ಪ್ರಭಾತ

ಸಂಪುಟ: 32. ಸಂಚಿಕೆ: 22. 3—7—1966 Vol. XXXII. No. 22

## ಮೈಸೂರು ಚಳವಳ: ವರಿಷ್ಠರಿಗೆ ತಲೆಶೂಲೆ

ಮೈಸೂರು—ಮಹಾರಾಷ್ಟ್ರ ಮತ್ತು ಮೈಸೂರು—ಕೇರಳ ಗಡಿಗಳ ವಿವಾದಗಳನ್ನು ಪರಿಹರಿಸುವುದಕ್ಕೆ ಏಕಸದಸ್ಯ ಆಯೋಗದ ನೇಮಕದ ವಿರುದ್ಧ ಮೈಸೂರು ರಾಜ್ಯದ ಹಲವು ಕಡೆಗಳಲ್ಲಿ ಬಹುಮಟ್ಟಿಗೆ ಶಾಂತಯುತವಾಗಿ ನಡೆಯುತ್ತಿದ್ದ ಚಳವಳವು ಕಳೆದ ತಿಂಗಳ ತಾ 24ರಂದು ಹಿಂಸಾರೂಪವನ್ನು ತಾಳಿತು. ಅಂದು ಗುಲ್ಬರ್ಗದಲ್ಲಿ ಜನರು ರೈಲುಬಂಡಿಗಳಿಗೆ ಕಲ್ಲುಗಳನ್ನು ಎಸೆದು ಹಾನಿ ಮಾಡಿದರು. ನೆರೆದಿದ್ದ ಸಾವಿರಾರು ಜನರು ಬಂಡಿಯೊಳಗೆ ನುಗ್ಗಿ ಪ್ರಯಾಣಿಕರ ಸಾಮಾನುಗಳನ್ನು ಲುಟಾಯಿಸಿದರೆಂದು ಮೊದಲು ಬಂದಿದ್ದ ವರದಿಗಳು "ಸುಳ್ಳು ಮತ್ತು ನಿರಾಧಾರದವುಗಳು" ಎಂದು, ಗುಲ್ಬರ್ಗ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಶ್ರೀ। ಕಲ್ಯಾಣರಾವ್ ಗೋಗಿಯವರು ಹೇಳಿ, ಇದಕ್ಕೆ ಆಧಾರವಾಗಿ, ಸೆಂಟ್ರಲ್ ರೈಲ್ವೇಯ ಅಧಿಕಾರಿಗಳು ಹೊರಡಿಸಿದ ಪ್ರಕಟನೆಯಲ್ಲಿ ಹಾನಿಯನ್ನು ಮಾತ್ರ ಪ್ರಸ್ತಾಪಿಸಲಾಗಿದ್ದು, ಲುಟಾಯಿಸಿದುದನ್ನು ಪ್ರಸ್ತಾಪಿಸದೆ ಇರುವುದನ್ನು ಉದಾಹರಿಸಿದ್ದರೂ, ಕೆಲವು ಟೊಮೇಟೊ ಬುಟ್ಟಿಗಳನ್ನು ಕೊಂಡು ಹೋಗಲಾಗಿದೆಯೆಂಬುದನ್ನು ಒಪ್ಪಿದ್ದಾರೆ. ಕಳೆದ ತಾ 27ರಂದು ಹರಿಹರ ಮತ್ತು ದಾವಣಗೆರೆಗಳಲ್ಲಿ ಪೋಲೀಸಿನವರು ಗುಂಡು ಹಾರಿಸಬೇಕಾಯಿತು ಮತ್ತು ಅದರ ಪರಿಣಾಮವಾಗಿ ಐವರು ವ್ಯಕ್ತಿಗಳು ಮೃತ್ಯುವಿಗೀಡಾದರು ಮತ್ತು ಹಲವರು ಗಾಯಗೊಂಡರು. ಇದೆಲ್ಲ ಅತಿವಿಷಾದಕರವಾಗಿದ್ದು ಖಂಡನಾರ್ಹವಾಗಿದೆ.

ಚಳವಳವು ಹಿಂಸಾರೂಪಕ್ಕೆ ತಿರುಗುವ ಸಂಭವವಿರುವುದರಿಂದ ಅದನ್ನು ಅಂತ್ಯಗೊಳಿಸಬೇಕೆಂದು ಮುಖ್ಯಮಂತ್ರಿ ಶ್ರೀ। ಎಸ್. ನಿಜಲಿಂಗಪ್ಪನವರು ಕರೆಕೊಟ್ಟಂತೆ, ಭದ್ರಾವತಿ ಮತ್ತು ಸಾಗರಗಳಲ್ಲಿ ಚಳವಳವನ್ನು ನಿಲ್ಲಿಸಲಾಗಿದೆ. ಕೆಲವು ಕಡೆಗಳಲ್ಲಿ ಕಾಂಗ್ರೆಸ್ಸಿಗರು ಚಳವಳವನ್ನು ನಿಲ್ಲಿಸಿದರೂ ಕೆಲವು ಕಾಂಗ್ರೆಸ್ಸೇತರರು ಅದನ್ನು ಮುಂದುವರಿಸುವರೆಂದು ಹೇಳಿದ್ದಾರೆ. ಬೆಳಗಾಂವಿ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಚಳವಳದ ನೇತೃತ್ವವನ್ನು ವಹಿಸಿರುವ ಶ್ರೀ। ಜಿ. ವಿ. ಹಳ್ಳಿಕೇರಿಯವರು, ಸತ್ಯಾಗ್ರಹವು ಮುಂದುವರಿಯುವುದೆಂದಷ್ಟೇ ಅಲ್ಲದೇ, ಇದೇ ೬ ೮ರಂದು ಸಭೆಸೇರಲಿರುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ತನ್ನ ಕಳೆದ ಮೇ 23ರ ನಿರ್ಣಯವನ್ನು ರದ್ದುಮಾಡದಿದ್ದರೆ ಸತ್ಯಾಗ್ರಹವು ಸರ್ವ—ಪಕ್ಷ ವೈಶಿಷ್ಟ್ಯವನ್ನು ತಾಳುವುದೆಂದೂ ಹೇಳಿದ್ದಾರೆ. ಅಂದ ಮೇಲೆ ಚಳವಳವು ಅಂತ್ಯವಾಗಬೇಕಾದರೆ ಕಾರ್ಯಕಾರಿ ಸಮಿತಿಯು ತನ್ನ ಮೊದಲಿನ ನಿರ್ಧಾರವನ್ನು ರದ್ದುಮಾಡಬೇಕೆಂದಾಯಿತು.

ಕಾರ್ಯಕಾರಿ ಸಮಿತಿಗೆ ತನ್ನ ಮೊದಲಿನ ನಿರ್ಣಯವನ್ನು ರದ್ದುಮಾಡುವುದಾಗಲೀ, ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರಿಗೆ ಆ ನಿರ್ಣಯಕ್ಕನುಸಾರವಾಗಿ ಮತ್ತು ಅವರು ಇತ್ತಿದ್ದ ಆಶ್ವಾಸನೆಗನುಸಾರವಾಗಿ ಆಯೋಗವನ್ನು ನೇಮಿಸದೆ ಇರುವುದಾಗಲೀ ಸುಲಭ ಸಾಧ್ಯವಾಗಿಲ್ಲ. ಅದೊಂದು ಪ್ರತಿಷ್ಠೆಯ ಮಾತಾಗಲೂ ಬಹುದು. ವಸ್ತುಸ್ಥಿತಿಯಲ್ಲಿ, ಒಂದು ತಿಂಗಳೊಳಗೆ ಏಕಸದಸ್ಯ ಆಯೋಗವನ್ನು ನೇಮಿಸಲಾಗುವುದೆಂಬ ಶ್ರೀಮತಿ ಗಾಂಧಿಯವರ ಆಶ್ವಾಸನೆಯನ್ನು ಅವರಿಗೆ ಸೇನಾಪತಿ ಬಾಪಟರು ನೆನಪುಮಾಡಿಕೊಟ್ಟು, ಆಯೋಗದ ನೇಮಕವನ್ನು ಹಾರೈಸಿದ್ದಾರೆ. ಕಾರ್ಯಕಾರಿ ಸಮಿತಿಯು ಒಂದು ವೇಳೆ ತನ್ನ ಮೊದಲನೆಯ ನಿರ್ಣಯವನ್ನು ರದ್ದುಮಾಡಿದರೆ ಮಹಾರಾಷ್ಟ್ರದಲ್ಲಿ ಅದಕ್ಕೆ ತಾವು ಪ್ರತಿಕ್ರಿಯೆಯಾಗುವುದು ಖಂಡಿತವೆಂದು ಹೇಳಬಹುದು. ಮೈಸೂರು — ಮಹಾರಾಷ್ಟ್ರ ಗಡಿ ವಿವಾದದ ತೀವ್ರ ಬಗೆಹರಣಕ್ಕೆ ಕೇಂದ್ರ ಸರಕಾರವನ್ನು ಒತ್ತಾಯಿಸಲು ಮಹಾರಾಷ್ಟ್ರದ ಮುಖ್ಯ ಮಂತ್ರಿ ಶ್ರೀ। ವಿ. ಪಿ. ನಾಯ್ಕರು ರಾಜಿನಾಮೆಕೊಡಬೇಕೆಂದು, ಮಹಾರಾಷ್ಟ್ರ ವಿಧಾನ ಸಭೆಯಲ್ಲಿ ಪ್ರತಿಪಕ್ಷದ ನಾಯಕ, ಶ್ರೀ। ಕೆ. ಎನ್. ಧುಲೂಪರು ಈಗಾಗಲೇ ಕೇಳಿಕೊಂಡಿದ್ದಾರೆ.

ಹೀಗೆ ಮೈಸೂರಿನ ಚಳವಳವು ಕಾಂಗ್ರೆಸ್ಸಿನ ಅಧಿನಾಯಕರಿಗೆ ಒಂದು ತಲೆಶೂಲೆಯಾಗಿದೆ. ಮೈಸೂರಿನವರಿಗೂ ಮಹಾರಾಷ್ಟ್ರದವರಿಗೂ ಸಮಾಧಾನಕರವಾಗುವಂಥ ವಿಧಾನವೊಂದನ್ನು ಕಂಡುಹಿಡಿಯುವುದು ಕಾರ್ಯಕಾರಿ ಸಮಿತಿಗೆ ಬಹಳ ಕಠಿಣವಾಗಬಹುದಾದರೂ ಅದು ಅನಿವಾರ್ಯವಾಗಿದೆ.

---

## ಕುಟುಂಬ ಯೋಜನೆಯೆತ್ತ?

ಕಳೆದ ತಿಂಗಳ ಕೊನೆಯ ವಾರದಲ್ಲಿ ಕೇರಳದ ಎರ್ನಾಕುಳಮಿನಿಂದ ಬಂದ ಒಂದು ವರದಿಯ ಕಾರಣದಿಂದ, ಕುಟುಂಬ ಯೋಜನೆಯೆತ್ತ, ಎಂದು ಕೇಳಬೇಕಾಗಿದೆ. ಈ ವರದಿಗನುಸಾರವಾಗಿ, ಎರ್ನಾಕುಳಮಿನ ಸಮೀಪದ ಎಡಪ್ಪಳ್ಳಿಯ ಹೆರಿಗೆಯ ಮತ್ತು ಶಿಶು ಆರೋಗ್ಯ ಕೇಂದ್ರದಲ್ಲಿ ಸೂಲಗಿತ್ತಿಯಾಗಿರುವ ಶ್ರೀಮತಿ ಕೆ. ಜೆ. ಸರಸ್ವತಿ ಅಮ್ಮ ಅವರು ಕಳೆದ ಮಾರ್ಚ್ ತಿಂಗಳಲ್ಲಿ ಕನಿಷ್ಠ ಪಕ್ಷ ಐದು ಹೆಂಗಸರನ್ನಾದರೂ ಕುಣಿಕೆ ಜೋಡಣೆಯ ಬಗ್ಗೆ ತರಲು ತಪ್ಪಿದ್ದಕ್ಕಾಗಿ ಅವರ ವೇತನದ ಒಂದು ಬಡತಿಯನ್ನು ತಡೆದು ಅವರನ್ನು ಶಿಕ್ಷಿಸಲಾಗಿದೆ. ತಾನು ಕೆಲಸ ಮಾಡುವ ಪ್ರದೇಶದಲ್ಲಿ ಮುಸ್ಲಿಮರು ಪ್ರಧಾನವಾಗಿ ಅಧಿಕಾಂಶದವರಾಗಿದ್ದಾರೆಂದೂ, ಮುಸ್ಲಿಮರು ಪೂರ್ಣವಾಗಿ ಈ ಕ್ರಮಕ್ಕೆ ವಿರುದ್ಧರಾಗಿರುವುದರಿಂದ ಇಬ್ಬರು ಹೆಂಗಸರನ್ನು ಕೂಡ ತರುವುದು ತನಗೆ ಅಸಾಧ್ಯವಾಗಿ ಕಂಡುಬಂದಿದೆಯೆಂದೂ ಈ ಸೂಲಗಿತ್ತಿಯು ಅಧಿಕಾರಿಗಳಿಗೆ ಉದಾಹರಣೆಕೊಟ್ಟಿದ್ದಾಳೆ. ಪ್ರಾಯಶ: ಈ ಉದಾಹರಣೆಯು ಆ ಅಧಿಕಾರಿಗಳಿಗೆ ತೃಪ್ತಿಕರವಾಗಿ ಕಂಡುಬರಲಿಲ್ಲ; ಅಥವಾ ಅದು ಅವರ ಅಧಿಕಾರದ ನಿರ್ವಹಣದ ಹುರುಪಿನ ದ್ಯೋತಕವಾಗಿರಲೂ ಬಹುದು.

ಜನಸಂಖ್ಯೆಯ ಬೆಳವಣಿಗೆಯನ್ನು ಕಡಮೆ ಮಾಡಬೇಕಾದರೆ ವಿಶೇಷ ಕ್ರಮಗಳು ಅವಶ್ಯವಿವೆಯೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಸರಕಾರದ ಈ ಸಂಬಂಧದ ಉತ್ತೇಜಕ ಯೋಜನೆಯಂತೆ ಜನರು ಕುಟುಂಬ ಯೋಜನಾಕ್ರಮಗಳನ್ನು ಅಂಗೀಕರಿಸುವಂತೆ, ಅವರಿಗೆ ಆರ್ಥಿಕಬಹುಮಾನ ಕೊಟ್ಟು, ಪ್ರೇರಿಸುವ ಯತ್ನಮಾಡಲಾಗುತ್ತಿದೆ. ಅದೇ ಪ್ರಕಾರ ವೈದ್ಯಕೀಯ ಮತ್ತು ಆರೋಗ್ಯ ಇಲಾಖೆಯವರಿಗೆ ಗರ್ಭ ನಿರೋಧಕ್ಕೆ ಉತ್ತೇಜನ ಕೊಡಲು ವಿಶೇಷ ಪ್ರೋತ್ಸಾಹಕಗಳನ್ನು ಕೊಡಲಾಗುತ್ತದೆ. ಕುಟುಂಬ ಯೋಜನೆಯನ್ನು ಜನಪ್ರಿಯಗೊಳಿಸುವುದಕ್ಕಾಗಿ ಕೇಂದ್ರ ಸರಕಾರವು ಒಂದು ಹೊಸ ಯೋಜನೆಯ ಕುರಿತು ಆಲೋಚಿಸುತ್ತಿದೆಯೆಂದೂ, ಕುಣಿಕೆಯನ್ನು ಜೋಡಿಸಿಕೊಂಡ ಹೆಂಗಸರಿಗೆ ಪ್ರತಿಫಲವನ್ನು ಕೊಡುವುದು ಇದರಲ್ಲಿ ಸೇರಿದೆಯೆಂದೂ ವರದಿಯಾಗಿದೆ. ವಿಶೇಷ ಪ್ರಯತ್ನಕ್ಕೆ ಹುರಿದುಂಬಿಸುವುದೇ ಈ ಯೋಜನೆಗಳ ಉದ್ದೇಶವಾಗಿದೆ.

ಆದರೆ ಅಂಥ ಪ್ರಯತ್ನವನ್ನು ಒಂದು ಹಕ್ಕಿನಂತೆ ನಿರೀಕ್ಷಿಸಬೇಕೆಂದಾಗಲೀ, ಮೊದಲೇ ನಿಶ್ಚಯಿಸಿಕೊಂಡಿರುವ ಕೆಲವು ಕೇಳಿಕೆಗಳನ್ನು ಸಲ್ಲಿಸಲು ಒಂದು ಅಥವಾ ಇನ್ನೊಂದು ಕಾರಣದಿಂದ ಅಸಮರ್ಥರಾದವರನ್ನು ದಂಡನೆಗೆ ಗುರಿಮಾಡಬೇಕೆಂದಾಗಲೀ ಇದರಿಂದ ಸಿದ್ಧವಾಗುವುದಿಲ್ಲ. ಕುಟುಂಬ ಯೋಜನೆಯನ್ನು ಜನತೆಯು ಇನ್ನೂ ಆದರದಿಂದ ಅಂಗೀಕರಿಸಿಲ್ಲ. ಅದಕ್ಕೆ ಕೆಲವು ದೊಡ್ಡ ಪ್ರತಿಕೂಲಗಳಿವೆ. ಇಂಥ ಪ್ರತಿಕೂಲಗಳನ್ನು ಎದುರಿಸಿ, ಅದು ಅಂಗೀಕರಿಸಲ್ಪಡುವಂತೆ ಕೆಲಸಮಾಡುವವರನ್ನು ಶಿಕ್ಷಿಸುವುದರಿಂದ ಅವರನ್ನು ಹುರಿದುಂಬಿಸುವ ಬದಲಿಗೆ ಎದೆಗುಂದಿಸಿದಂತಾಗುತ್ತದೆ. ಎಡಪಳ್ಳಿಯ ಸೂಲಗಿತ್ತಿಗೆ ವಿಧಿಸಲಾದ ಶಿಕ್ಷೆಯು ಕೂಡಲೇ ರದ್ದುಮಾಡಲ್ಪಡುವುದೆಂದೂ ಹಾರೈಸಬೇಕಾಗಿದೆ.

ಈ ಸಂದರ್ಭದಲ್ಲಿ ಇನ್ನೊಂದು ವಿಚಾರದ ಕುರಿತು ಸಹ ಪ್ರಸ್ತಾಪಿಸಬೇಕಾಗಿದೆ. ಕೆಲವು ತಿಂಗಳುಗಳ ಹಿಂದೆ ಒಬ್ಬರು ಕುಟುಂಬ ಯೋಜನೆಯನ್ನು ವಿರೋಧಿಸುತ್ತ, ಈ ಯೋಜನೆಯ ಕಾರಣದಿಂದ ಮತ್ತು ಸರಕಾರವು ಇದನ್ನು ಕಾರ್ಯಗತಗೊಳಿಸುವ ರೀತಿಯಿಂದ, ಹಿಂದೂಗಳ ದೇಶವೆಂದು ಇಷ್ಟರ ವರೆಗೆ ತಿಳಿಯಲಾಗಿರುವ ಭಾರತವು ಕ್ರಮೇಣ, ಭವಿಷ್ಯದಲ್ಲಿ, ಹಿಂದೂಯೇತರರ ದೇಶವೆಂದು ಪರಿಗಣಿಸಲಾಗುವ ಸಂಭವವಿದೆಯೆಂದು ವಾದಿಸಿದ್ದರು. ಅಂದರೆ ಈ ಯೋಜನೆಯ ಕಾರಣದಿಂದ ದೇಶದಲ್ಲಿ ಹಿಂದೂಗಳ ಜನಸಂಖ್ಯೆಯು ತುಲನಾತ್ಮಕವಾಗಿ ಕಡಿಮೆಯಾಗುವುದೆಂದೂ, ಅದೇ ಸಮಯದಲ್ಲಿ ಹಿಂದೂಯೇತರರ ಸಂಖ್ಯೆಯು ಅಧಿಕವಾಗುವುದೆಂದೂ, ಈ ಮಾತಿನ ಅರ್ಥವಾಗಿತ್ತು. ಇದು ಕೋಮುವಾರು ಭಾವನೆಯೆಂದು ಅನಿಸಬಹುದಾದರೂ ಇದನ್ನು ನಿರ್ಲಕ್ಷಿಸಲಾಗುವುದಿಲ್ಲ.

ಇತರ ದೇಶಗಳಂತೆ ಭಾರತದಲ್ಲಿಯೂ ಕೆಥೋಲಿಕರು—ಕ್ರೈಸ್ತರು—ಸಂತತಿ ನಿಯಂತ್ರಣಕ್ಕೆ, ಅರ್ಥಾತ್ ಕುಟುಂಬ ಯೋಜನೆಗೆ, ವಿರೋಧವಿದ್ದಾರೆ. ಇದೀಗ ಎಡಪ್ಪಳ್ಳಿಯ ಸೂಲಗಿತ್ತಿಯು ಹೇಳಿರುವಂತೆ, ಮುಸ್ಲಿಮರೂ ಈ ಕ್ರಮಕ್ಕೆ ವಿರೋಧವಿದ್ದಾರೆ. ಜಾತ್ಯಾತೀತತೆಯ ಹೆಸರಿನಲ್ಲಿ, ಎಲ್ಲ ಮತಗಳವರಿಗೂ ಸಮಾನ ಹಕ್ಕುಗಳಿರಬೇಕೆಂಬ ಉದ್ದೇಶದಿಂದ, ಹಿಂದೂಯೇತರರ ಮತೀಯ, ಸಾಮಾಜಿಕ ವಿಚಾರಗಳಲ್ಲಿ ಕೈಹಾಕದೆ ಇರುವುದೂ, ಇಂಥ ವಿಚಾರಗಳಲ್ಲಿ ಮಾಡಲಾಗುವ ಸುಧಾರಣಾ ಕಾನೂನುಗಳನ್ನು ಹಿಂದೂಗಳಿಗೆ ಮಾತ್ರ ಮೀಸಲಾಗಿರಿಸುವುದೂ ಭಾರತ ಸರಕಾರದ ಪದ್ಧತಿಯಾಗಿದೆ. ಬಹುಮತದವರ ಅಭಿಪ್ರಾಯವನ್ನು ಅಲ್ಪಮತೀಯರ ಮೇಲೆ ಅವರ ಅಭಿಪ್ರಾಯಕ್ಕೆ ವಿರೋಧವಾಗಿ ಹೊರಿಸಬೇಕೆಂಬುದು ನಮ್ಮ ವಾದವಲ್ಲ. ಇಂಥ ಸುಧಾರಣೆಗಳನ್ನು ಅಂಥವರ ಕೇಳಿಕೆಗಳಿಗನುಸಾರವಾಗಿ ಅವರ ಸಮ್ಮತಿಯಿಂದಮಾತ್ರ ಮಾಡಬೇಕೆಂಬುದನ್ನೂ ಒಪ್ಪಿಕೊಳ್ಳಬಹುದು. ಆದರೆ ಅಂಥ ಕೇಳಿಕೆಗಳು ಕಾಣಬಹುದಾದ ಭವಿಷ್ಯದಲ್ಲಿ ಮುಂದೆ ಬರಲಾರವೆಂದೇ ಅನುಭವದಿಂದ ಹೇಳಬೇಕಾಗಿದೆ.

ಕುಟುಂಬ ಯೋಜನೆಯು ಒಂದು ಕಾನೂನು ಆಗಿಲ್ಲ, ಆಗುವ ಸಂಭವವೂ ಇಲ್ಲ. ಒಂದು ವೇಳೆ ಅದೊಂದು ಕಾನೂನಾದರೂ, ಅದನ್ನು ಜ್ಯಾರಿಗೊಳಿಸುವುದು ಬಹುಮಟ್ಟಿಗೆ ಅಸಾಧ್ಯವೆಂದೇ ಹೇಳಬೇಕು. ಆದರೆ ಆ ಮಾತು ಬೇರೆ. ಹಿಂದೂಯೇತರರು ಮತೀಯ ಕಾರಣವನ್ನು ಮುಂದಿಟ್ಟು, ಕುಟುಂಬ ಯೋಜನೆಯನ್ನು ಅಂಗೀಕರಿಸದಿದ್ದರೆ, ಅವರು ಅದನ್ನು ಅಂಗೀಕರಿಸುವಂತೆ ಮಾಡುವುದು ಸುಲಭ ಸಾಧ್ಯವಲ್ಲ. ಅವರ ಮೇಲೆ ಒತ್ತಡ ಹಾಕುವ ಮಾತಂತಿರಲಿ, ವಿಶೇಷ ಪ್ರೇರಣೆ ಹಾಕಿದರೂ, ಅದು ಅವರ ಮತಕ್ಕೆ ಅನ್ಯಾಯ, ವಿರೋಧ ಎಂಬ ದೂರು ಮುಂದೆ ಬರುವ ಸಂಭವವಿದೆ. ಇದಕ್ಕೆ ಹೆದರಿ ಭಾರತ ಸರಕಾರವು ಈ ವಿಚಾರದಲ್ಲಿ ಏನನ್ನೂ ಮಾಡಲಾರದು. ಆದರೆ ಹಿಂದೂಗಳ ಮಟ್ಟಿಗೆ ಪರಿಸ್ಥಿತಿಯು ಇದಕ್ಕೆ ತೀರ ವಿರುದ್ಧವಾಗಿದೆ. ಆದುದರಿಂದ ಈ ಯೋಜನೆಯ ಕಾರಣದಿಂದ, ಭವಿಷ್ಯದಲ್ಲಿ ಭಾರತದಲ್ಲಿ ಹಿಂದೂಗಳು ಅಲ್ಪಸಂಖ್ಯಾಕರಾಗುವ, ಅಥವಾ ಹಿಂದೂಯೇತರರು ಬಹುಸಂಖ್ಯಾಕರಾಗುವ ಸಾಧ್ಯತೆಯಿದೆ ಎಂಬ ವಾದವನ್ನು ಕ್ಷುಲ್ಲಕವೆಂದು ನಿರ್ಲಕ್ಷಿಸಲಾಗುವುದಿಲ್ಲ.

---

## ಶ್ರೀ! ಉಳ್ಳಾಲ ನಾರಾಯಣ ಮಲ್ಯರು ದೈವಾಧೀನರಾದರು

ಮಂಗಳೂರಿನ ಸುಪ್ರಸಿದ್ಧ ವರ್ತಕ ಪ್ರಮುಖ ಶ್ರೀ! ಉಳ್ಳಾಲ ನಾರಾಯಣ ಮಲ್ಯರವರು, ಇದೇ ತಾ. 1ನೇ ಶುಕ್ರವಾರ ಅಪರಾಹ್ನ ಸುಮಾರು 4-30ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುವೆವು. ಗುರುವಾರದಂದು ರಕ್ತದ ಒತ್ತಡಕ್ಕೆ ಸಂಬಂಧಿಸಿದ ಅಸ್ವಸ್ಥ ಕಾಣಿಸಿಕೊಂಡಾಗ ಅವರನ್ನು ಕೂಡಲೇ ಕಂಕನಾಡಿಯ ಫಾದರ್ ಮುಲ್ಲರ್ಸ್ ಆಸ್ಪತ್ರೆಗೊಯ್ದು ಚಾಣಾಕ್ಷರ ಚಿಕಿತ್ಸೆಗೊಳಪಡಿಸಿದರೂ, ಪ್ರಯೋಜನವಾಗದೆ, ಮರುದಿನ ಅಪರಾಹ್ನ 4-30ಕ್ಕೆ ಇಹವನ್ನು ತೊರೆದರು. ಮರಣ ಕಾಲದಲ್ಲಿ ಅವರ ವಯಸ್ಸು 67.

ಮಂಗಳೂರಿನ ಪ್ರಸಿದ್ಧ ಮಲ್ಯ ಮನೆತನದವರಾದ ಶ್ರೀ! ನಾರಾಯಣ ಮಲ್ಯರು, ಕಳೆದ ನಾಲ್ಕು ದಶಕಗಳಿಂದ, ವಾಣಿಜ್ಯವಲಯಗಳಲ್ಲಿ ಹೆಸರುವಾಸಿಯಾಗಿದ್ದವರು. ನಗರದ ಸುಪಾರೀ ವ್ಯಾಪಾರ ವಲಯದಲ್ಲಿ ಅತ್ಯಂತ ಗೌರವಾನ್ವಿತ ವ್ಯಕ್ತಿಯಾಗಿದ್ದವರು. ಕಳೆದ ಕಾಲು ಶತಮಾನಕ್ಕಿಂತಲೂ ಹೆಚ್ಚಿನ ಕಾಲದಿಂದ ಗೇರುಬೀಜ ಕಾರ್ಖಾನೆ ನಡೆಸಿಕೊಂಡು ಬರುತಿದ್ದರು. ಇಲ್ಲಿಯ ಮಾರ್ಕೆಟಿಂಗ್ ಸೊಸೈಟಿಯ ಅಧ್ಯಕ್ಷರು ಚೆಯರ್ಮನರು.

ಶಿಕ್ಷಣ ಸಂಸ್ಥೆಗಳಿಗೂ ಧರ್ಮಕಾರ್ಯಗಳಿಗೂ ಶ್ರೀ! ನಾರಾಯಣ ಮಲ್ಯರು ಉದಾರ ಧನಸಹಾಯವಿತ್ತವರು

ಶ್ರೀ! ನಾರಾಯಣ ಮಲ್ಯರಿಗೆ ಶ್ರೀ! ಯು. ರಾಮಕೃಷ್ಣ ಮಲ್ಯ, ಶ್ರೀ! ಯು. ರಮೇಶಮಲ್ಯರಾದಿಯಾಗಿ ಐವರು ಪುತ್ರರಿದ್ದಾರೆ. ಇವರೆಲ್ಲರೂ ವ್ಯಾಪಾರ ಕ್ಷೇತ್ರದಲ್ಲಿ ಪ್ರಸಿದ್ಧರಾಗಿದ್ದಾರೆ. ಮೂವರು ಪುತ್ರಿಯರಿರುವರು.

ಮೃತರ ಗೌರವಾರ್ಥ ಮಂಗಳೂರು ಬಂದರದ ಸಾಹುಕಾರರೆಲ್ಲರೂ ಮರುದಿನ (ಶನಿವಾರ) ತಮ್ಮ ಭಂಡಸಾಲೆಗಳನ್ನು ಮುಚ್ಚಿದ್ದರು.

—೦—

## ಹೊಸ ಕಟ್ಟಡದ ಉದ್ಘಾಟನಾ ಸಮಾರಂಭ

ಸ್ಥಳೀಯ ಹಳೇಕೆಂಟ್ ರಸ್ತೆಯಲ್ಲಿ "ಹೊಟೇಲ್ ರೊಯಲ್"ನ ಹೊಸ ಕಟ್ಟಡ "ಶೆಟ್ಟಿ ಬಿಲ್ಡಿಂಗ್ಸ್"ನ ಪ್ರವೇಶ ಸಮಾರಂಭವು ತಾ 30—6—66 ನೇ ಗುರುವಾರ ಸಾಯಂಕಾಲ 6-30ಕ್ಕೆ, ಶ್ರೀ! ಮಣೇಲ ಶ್ರೀನಿವಾಸ ನಾಯ್ಕ ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ, ಡಾ! ಎಮ್. ವಿ. ಶೆಟ್ಟಿರವರಿಂದ ನೆರವೇರಿತು. ಡಾ! ಎಂ. ವಿ. ಶೆಟ್ಟಿಯವರೂ, ಅವರನ್ನನುಸರಿಸಿ ಡಾ! ಬಾಳಪ್ಪ ಶೆಟ್ಟರವರೂ ಭಾಷಣ ಮಾಡುತ್ತ, ಪಾಕಶಾಲೆಯಿಂದ ಭೋಜನ ಶಾಲೆಯ ವರೆಗೆ ನೈರ್ಮಲ್ಯ ಪಾಲಿಸಬೇಕಾದ ಅವಶ್ಯಕತೆಯನ್ನೊತ್ತಿ ಹೇಳಿದರು.

ಲಘು ಉಪಾಹಾರಾನಂತರ, ಅಧ್ಯಕ್ಷಸ್ಥಾನದಿಂದ ಭಾಷಣ ಮಾಡುತ್ತ ಶ್ರೀ! ಮಣೇಲ ಶ್ರೀನಿವಾಸ ನಾಯ್ಕರು, ಇಂಥ (ನೊನ್ ವೆಜಿಟೇರಿಯನ್) ಹೊಟೇಲುಗಳ ಹೆಚ್ಚಳ-ಅವಶ್ಯಕತೆ ಮುಂತಾದುವನ್ನು ವಿವರಿಸಿ, ಹೊಟೇಲಿಗೆ ಅಭಿವೃದ್ಧಿಯನ್ನು ಕೋರಿದರು. ಸಭಾಂತ್ಯದಲ್ಲಿ ಶ್ರೀ! ಗಂಗಾಧರದಾಸ್ ರವರು ಹೊಟೇಲ್ ಮ್ಹಾಲಕರ ಪರವಾಗಿ ವಂದನಾರ್ಪಣೆ ಮಾಡಿದರು.

—೦—

## ಮಂಗಳೂರು ರೋಟರಿ ಕ್ಲಬ್

ಮಂಗಳೂರು ರೋಟರಿ ಕ್ಲಬ್ಬಿನ ಸಾಪ್ತಾಹಿಕ ಸಭೆಯು ತಾ 30-6-66 ರಲ್ಲಿ ಸೇರಿ, 1966—67ನೇ ವರ್ಷಕ್ಕೆ ಆಯ್ಕೆಗೊಂಡ ಹೊಸ ಅಧಿಕಾರಿಗಳಿಗೆ, ಅಧಿಕಾರವನ್ನೊಪ್ಪಿಸಿ ಕೊಡಲಾಯಿತು. ಪ್ರಚಲಿತ ವರ್ಷಕ್ಕೆ ಶ್ರೀ! ಎಮ್. ಜೆ. ಕಾಮತರವರು ಅಧ್ಯಕ್ಷರಾಗಿಯೂ, ಡಾ! ಎಚ್. ಡಿ. ಅಡ್ಯಂತಾಯರವರು ಕಾರ್ಯದರ್ಶಿಯಾಗಿಯೂ ಇರುವರು.

ಶ್ರೀ! ಕೆ. ಪಿ. ಕಸ್ತೂರಿಯವರ ಅಧ್ಯಕ್ಷತೆಯಲ್ಲಿ ಸೇರಿದ ಈ ಸಭೆಯಲ್ಲಿ, ಪ್ರಥಮತಃ, ಕಾರ್ಯದರ್ಶಿ ಶ್ರೀ! ಎಂ. ಬಾಬಪ್ಪೈಯವರು ಗತವರ್ಷದ ವರದಿಯನ್ನೊಪ್ಪಿಸಿದರು. ವರದಿಯಲ್ಲಿ, ರೋಟರಿಕ್ಲಬ್ಬು, ಗತವರ್ಷದಲ್ಲಿ ಗೈದ ಗಣನೀಯ ಸೇವೆಯನ್ನುಲ್ಲೇಖಿಸಲಾಗಿತ್ತು. ಅನಂತರ ಈ ಕೆಳಗಿನಂತೆ ಪದಾಧಿಕಾರಿಗಳಿಗೆ ಅಧಿಕಾರವನ್ನು, ಗತವರ್ಷದ ಅಧಿಕಾರಿಗಳು ಒಪ್ಪಿಸಿದರು: ಕ್ಲಬ್ ಸರ್ವಿಸ್ ಚೆಯರ್ಮನರಾಗಿ ಶ್ರೀ! ಪಿ. ಕಮಲಾಕ್ಷರಾವ್, ವೊಕೇಶನಲ್ ಸರ್ವಿಸ್ ಚೆಯರ್ಮನರಾಗಿ ಶ್ರೀ! ವಿ. ವಿ. ಕುಡ್ವ, ಕಮ್ಯುನಿಟಿ ಸರ್ವಿಸ್ ಚೆಯರ್ಮನರಾಗಿ ಶ್ರೀ! ದಾಮೋದರ ಎಂ. ಪೈ, ಮತ್ತು ಇಂಟರ್ ನೆಶನಲ್ ಸರ್ವಿಸ್ ಚೆಯರ್ಮನರಾಗಿ ಡಾ! ಎಮ್. ಶ್ರೀನಿವಾಸನ್ ರವರು ಅಧಿಕಾರ ವಹಿಸಿದರು.

ಈ ವರ್ಷ ನವಂಬರದಲ್ಲಿ ಶತವಾರ್ಷಿಕೋತ್ಸವವನ್ನು ಆಚರಿಸಲಿರುವ ಮಂಗಳೂರು ಮುನಿಸಿಪಾಲಿಟಿಗೆ ಮಂಗಳೂರು ರೋಟರಿ ಕ್ಲಬ್ಬು ಬಾಲಕರ ಕ್ರೀಡಾಸ್ಥಾನವೊಂದನ್ನು ರಚಿಸಿಕೊಡಲಿದ್ದು, ನಗರಸಭಾ ಸದಸ್ಯರಾಗಿರುವ ರೊಟರಿಯನ್ ಎಸ್. ಎನ್. ಕಿಣಿಯವರು ಈ ಕಾರ್ಯದ ಹಿರಿಯ ಹೊಣೆ ವಹಿಸಿರುವರು ಈ ಕ್ರೀಡಾಸ್ಥಾನಕ್ಕೆ ರೊಟರಿಯನ್ ದಾಮೋದರ ಪ್ರಭುಗಳವರು ರೂ. 1000 ಮತ್ತು ರೊಟರಿಯನ್ ದಾಮೋದರ ಎಂ ಪೈಯವರು ರೂ. 1000/ ಧನಸಹಾಯವಿತ್ತುವನ್ನು ಸಭೆಯಲ್ಲಿ ಸಾರಲಾಯಿತು.

ರೋಟರಿ 317ನೇ ಜಿಲ್ಲೆಯ ಉತ್ತಮ ಕ್ಲಬ್ ಎಂದು ಮಂಗಳೂರು ರೋಟರಿ ಕ್ಲಬ್ಬು, ಕಳೆದ ವರ್ಷ ಢಾಲು ಪಡೆದಿದೆ.

ಸಭಾಂತ್ಯದಲ್ಲಿ ರೊಟರಿಯನ್ ಎಸ್. ಎನ್. ಕಿಣಿಯವರು ಧನ್ಯವಾದಗಳನ್ನಿತ್ತರು.

—೦—

## ನಗರದಲ್ಲಿ ಜನಸಂಘದ ಅಧ್ಯಕ್ಷರು

ಭಾರತೀಯ ಜನಸಂಘದ ಅಧ್ಯಕ್ಷ ಪ್ರೊ! ಬಲರಾಜ್ ಮಧೋಕ್ ರವರು ತಾ 1ರಂದು ಮಂಗಳೂರು ನಗರಕ್ಕೆ ಭೇಟಿಯಿತ್ತಿದ್ದು, ಅಂದು ಸಾಯಂಕಾಲ ಪುರಭವನದಲ್ಲಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡಿದರು. ಶ್ರೀ! ಮಧೋಕರು ತಮ್ಮ ಭಾಷಣದಲ್ಲಿ ಭಾರತ ಸರಕಾರದ ವಿದೇಶ ಧೋರಣೆಯಲ್ಲಿ ಶೀಘ್ರ ಬದಲಾವಣೆಯಾಗಬೇಕಾದುದು ಅತ್ಯವಶ್ಯವೆಂದರು. ಅತ್ಯಧಿಕ ಜನಸಂಖ್ಯೆಯುಳ್ಳ ದೇಶಗಳೊಡನೆ ಸಖ್ಯವಿಟ್ಟುಕೊಂಡು, ನಮ್ಮ ಸಂಸ್ಕೃತಿ, ರೀತಿ ನೀತಿಗಳನ್ನು ಖಂಡಿಸುವವರನ್ನು ದೂರವಿರಿಸಿ, ಮಿಕ್ಕುಳಿದ ರಾಷ್ಟ್ರಗಳೊಡನೆ ನಿರ್ಲಿಪ್ತ ಭಾವದಿಂದಿರುವುದೇ ಉತ್ತಮ ವಿದೇಶ ಧೋರಣೆ ಎಂದು ಅವರು ಸೂಚಿಸಿದರು. ತಿರುಗೊಮ್ಮೆ ಪಾಕ್-ಚೀನಗಳು ಒಂದಾಗಿ ಭಾರತದ ಮೇಲೆ ಬೀಳುವ ಶೀಘ್ರ ಗಂಡಾಂತರದ ಭಯವಿದೆಯೆಂದು ಎಚ್ಚರಿಸಿದ ಅವರು, ಕೊಂಗ್ರೆಸ್ ದುರಾಡಳಿತವನ್ನು ಕೊನೆಗೊಳಿಸುವುದರಲ್ಲಿ ಭಾರತದ ಏಕೈಕ ರಾಷ್ಟ್ರೀಯವಾದಿ ಪಕ್ಷವಾದ ಜನಸಂಘದೊಡನೆ ಸಹಕರಿಸಬೇಕೆಂದು ವಿನಂತಿಸಿದರು. ಸಭಾಧ್ಯಕ್ಷತೆಯನ್ನು ಡಾ! ಎಂ. ಸಿ. ಶಾಸ್ತ್ರಿಯವರು ವಹಿಸಿದ್ದು, ಶ್ರೀ! ಬೋಳ ರಘುರಾಮ ಶೆಟ್ಟಿಯವರು ಸ್ವಾಗತಿಸಿದ್ದರು. 'ವಂದೇ ಮಾತರಮ್' ಗೀತದೊಂದಿಗೆ ಸಭಾಂತ್ಯವಾಯಿತು.

—

(1ನೇ ಪುಟದಿಂದ)

ಡಲು ಅಸಮರ್ಥವಾಗಿದೆ. ಈ ಕೊಂಗ್ರೆ
ಸ್ಸು ಹೋಗಲೇ ಬೇಕು!

"ಇಂದು, ಕೊಂಗ್ರೆಸು, ತನ್ನ ಧೋರಣೆ
ಗಳಿಂದ, ಮಿತ್ರಹೀನವಾಗಿ ನಿಂತಿದೆ.

"ನಿರ್ಲಿಪ್ತತೆಯ ಮಾತೆತ್ತುತ್ತಿದ
ಕೊಂಗ್ರೆಸ್ಸು; ಇಂದು ನಿರ್ಲಿಪ್ತತೆ ಎಲ್ಲಿದೆ
ನಿಮಗೆ ಒಂದೋ ಮಿತ್ರರಿದ್ದಾರೆ, ಇಲ್ಲವೇ
ಶತ್ರುಗಳು! ನಿರ್ಲಿಪ್ತರೆಂಬುದೇ ಇಲ್ಲ
ಎಲ್ಲ ದೇಶಗಳು, ಒಂದಿಲ್ಲ ಒಂದು ವಿಧ
ದಿಂದ ಲಿಪ್ತವಾಗಿಯೇ ಇವೆ, ನಿರ್ಲಿಪ್ತ
ರಾರೂ ಇಲ್ಲ. ನಮ್ಮ ವಿದೇಶೀ ಧೋರಣೆ
ನಮ್ಮ ಮಿತ್ರರಾರು, ಶತ್ರು ಯಾರು ಎಂ
ಬುದನ್ನು ತಿಳಿವುದರಲ್ಲಿದೆ.

"ನಮ್ಮ ಯೋಜನೆಗಳೆಲ್ಲವೂ ನಮ
ನ್ನು ಇಂದು ತೀರ ನಿಕೃಷ್ಟ ಸ್ಥಿತಿಗೆ ತಂದಿ
ಳಿಸಿದುವು.

"ಕೊಂಗ್ರೆಸ್ಸು ಇಂದು ಮುಳುಗುತ್ತ
ಲಿದೆ. ಕೆಳಕೆಳಗೆ ಹೋಗುತ್ತಲಿದೆ. ನಿಮ
ಬೆಂಬಲವನ್ನು ಜನಸಂಘಕ್ಕೆ ಕೊಡಿರಿ
ಜನಸಂಘವೇ ಇಂದು ದೇಶದೊಳಗಿ
ಶಕ್ತ ಪಕ್ಷವಾಗಿದೆ".

(ಶ್ರೀ! ಮಧೋಕರು, ಚೀನೀ ಆಕ್ರ
ಮಣ, ನಾವು ಪಂಡಿತ ನೆಹರುಗಳವರಿ
ಆಗಾಗ್ಗೆ ಆ ಬಗ್ಗೆ ಕೊಟ್ಟ ಎಚ್ಚರಿಕೆ
ಕಾಶ್ಮೀರದ ಭೌಗೋಲಿಕ ವಿವ
ಪಾಕಿಸ್ಥಾನವು ಆಕ್ರಮಿಸಿದ ಪ್ರದೇಶಗ
ವಿವರ— ಇತ್ಯಾದಿಗಳನ್ನು ಚಲೋದಾ
ವಿವರಿಸಿದರು )

ಸುಮಾರು ಒಂದು ಘಂಟೆಗೂ ಹೆ
ನ ಕಾಲ, ಶ್ರೀ! ಮಧೋಕ್ ರವರ
ಸಭಿಕರನ್ನು ತನ್ನ ವಾಗ್ಝರಿಯಲ್ಲಿ ತಲ್ಲೀ
ರಾಗಿ ಮಾಡಿದ್ದರು". ಸಾಯಂ.6-30
ಆರಂಭವಾದ ಸಭೆಯು, 8-30ಕ್ಕೆ ಕೊ
ಗೊಂಡಿತು.

— — —

# ಭಾರತ

## ಚದರ ಮೀಟರಿಗೆ ರೂ. 3501

ಮುಂಬಯಿನಗರದ ಕ್ರೌನ್ ಬೆಕ್ಸ್ ಎಸ್ಟೇಟ್ ಪ್ರದೇಶದ ಕಟ್ಟಡಗಳ ಒಟ್ಟು 1658 ಚದರ ಮೀಟರ್ ಸ್ಥಳವನ್ನು ಮಹಾರಾಷ್ಟ್ರ ಸರಕಾರವು ವಿಕ್ರಯಿಸುತ್ತಿದೆ. ಒಬ್ಬರು, ಚದರ ಮೀಟರಿಗೆ ರೂ. 3501 ದರ ಕೊಟ್ಟಿರುವರೆಂದು ಪ್ರಕಟವಾಗಿದೆ. ಚದರ ಮೀಟರಿಗೆ ರೂ. 3000ದಂತೆ ಇನ್ನೊಬ್ಬರು, ರೂ. 2755ರಂತೆ ಮತ್ತೊಬ್ಬರು — ಹೀಗೆ ನಾನಾ ದರಗಳನ್ನು ಒಪ್ಪಿಸಿದ್ದಾರೆ. ಈ ದರಗಳು, ಇಂದು, ಭಾರತದಲ್ಲೇ ಒಂದು ದೊಡ್ಡ ದಾಖಲೆ.

## ಆರುಮಿಲಿಯ ವಂಕಿಗಳು

ಸಂತತಿಸಂಯಮನದ ಯೋಜನೆಯಲ್ಲಿ, ಸದ್ಯ, ನಗರಪ್ರದೇಶಗಳಲ್ಲಿ ಪ್ರತಿ ಸಾವಿರ ಜನಸಂಖ್ಯೆಗೆ 20, ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಪ್ರತಿ ಸಾವಿರಕ್ಕೆ 10—ಹೀಗೆ ವಂಕಿಗಳನ್ನು ಸಂಯೋಜಿಸಲು ನಿಶ್ಚಯಿಸಲಾಗಿದೆ. ಈ ಲೆಕ್ಕದಲ್ಲಿ ಈಗ ಅರುವತ್ತು ಲಕ್ಷ ವಂಕಿಗಳು ಜೋಡಿಸಲ್ಪಡಲಿವೆ.

## ಕಾಮರಾಜರಿಗೆ ರಾಜಾಜಿ ಆಹ್ವಾನ

“ಕಾಂಗ್ರೆಸ್ ಅಧ್ಯಕ್ಷ ಕಾಮರಾಜರು ರೂಪಾಯಿ ಮೌಲ್ಯ ಛೇದನದ ಅಪಾಯವನ್ನು ಕಂಡವರು. ಅವರು ಸ್ವತಂತ್ರ ಪಕ್ಷವನ್ನೀಗ ಸೇರಬೇಕೆಂದು ನನ್ನ ಕರೆ. ಸೇರಿದ್ದೇ ಆದರೆ, ಈ ಪಕ್ಷದ ನಾಯಕತ್ವವನ್ನು ಅವರಿಗೇ ಕೊಡಲಾಗುವುದು—” ಎಂಬುದಾಗಿ, ರಾಜಾಜಿಯವರು, ವಿರುದುನಗರದಲ್ಲಿ, ಕಳೆದವಾರ, ಸ್ವತಂತ್ರ ಪಕ್ಷದ ದ್ವಿತೀಯ ಜಿಲ್ಲಾ ರಾಜಕೀಯ ಪರಿಷತ್ತಿನಲ್ಲಿ ಭಾಷಣಮಾಡುತ್ತ ಹೇಳಿದರು. ಕಾಮರಾಜರು, ಕಾಂಗ್ರೆಸ್ಸಿನ ಧ್ಯೇಯ—ಧೋರಣೆಗಳಲ್ಲಿ ವಿಶ್ವಾಸವಿಲ್ಲದವರಿಗೂ, ಕಾಂಗ್ರೆಸ್ ಗೊತ್ತುವಳಿಗಳನ್ನೊಪ್ಪದವರಿಗೂ ಕಾಂಗ್ರೆಸ್ಸನ್ನು ತ್ಯಜಿಸಿರಿ ಎನ್ನುತ್ತಾರೆ; ಕಾಂಗ್ರೆಸ್ಸಿನಿಂದ ದೂರವಾದವರಿಗೆ, ಕಾಂಗ್ರೆಸ್ಸಿನೊಳಗೆ ಬನ್ನಿ ಎಂದು ಕರೆಯುತ್ತಿದ್ದಾರೆ. ಈಗ, ರಾಜಾಜಿಯವರು, ಕಾಮರಾಜರಿಗೇ ಸ್ವತಂತ್ರ ಪಕ್ಷ ಸೇರಿರಿ ಎಂದು ಕರೆದಿದ್ದಾರೆ. ಇಬ್ಬರೂ ‘ರಾಜ’ರೇ. ರಾಜಾಜಿ ಅತ್ತ ಹೋಗುವಂತಿಲ್ಲ—ಕಾಮರಾಜ ಇತ್ತ ಬರುವಂತೆಯೂ ಇಲ್ಲ. ಇವೆಲ್ಲವೂ ಕೇವಲ ಆಮಂತ್ರಣಗಳು.

## ಸಂತತಿಸಂಯಮನಕ್ಕೆ ಸುಶಿಕ್ಷಿತ ಸ್ತ್ರೀಯರು

ರೂಪಾಯಿಯ ಮೌಲ್ಯಛೇದನವಾದ ಮೇಲೆ, ಸುಶಿಕ್ಷಿತ ಮಹಿಳೆಯರ ಹೊಣೆಗಾರಿಕೆ ಇನ್ನೂ ಅಧಿಕವಾಗಿದೆ; ಧಾರಣೆಗಳನ್ನು ಸ್ಥಿಮಿತದಲ್ಲಿಡುವಂತೆಯೂ, ಕುಟುಂಬ ಯೋಜನೆಯು ಯಶಸ್ವಿಯಾಗುವಂತೆಯೂ, ಸುಶಿಕ್ಷಿತ ಮಹಿಳೆಯರು ಮುಂದೆಬಂದು ಪ್ರಚಾರಕೈಕೊಳ್ಳಬೇಕು—ಮನೆಮನೆಗಳಿಗೆ ಹೋಗಿ ಸಂತತಿಸಂಯಮನವನ್ನು ಉಪದೇಶಿಸಬೇಕು;—ಎಂಬುದಾಗಿ ಪ್ರಧಾನ ಸಚಿವೆ ಶ್ರೀಮತಿ ಇಂದಿರಾಗಾಂಧಿಯವರು, ಮಹಿಳೆಯರಲ್ಲಿ ವಿನಂತಿಸಿಕೊಂಡಿದ್ದಾರೆ.

## ಕಚ್‌ಪ್ರದೇಶ ವಿವಾದ—ನಕಾಶೆಗಳ ಪರಿಶೀಲನೆ

ಕಚ್—ರಣ್ ಪ್ರದೇಶದ ವಿವಾದಕ್ಕೆ ಸಂಬಂಧಿಸಿದ ಮಾತುಕತೆಗಳ ಪೂರ್ವಭಾವಿಯಾಗಿ, ಆ ಪ್ರದೇಶಕ್ಕೆ ಸಂಬಂಧಿಸಿದ ದಾಖಲೆಪತ್ರಗಳನ್ನೂ ನಕಾಶೆಗಳನ್ನೂ ಪರಿಶೀಲಿಸಲು, ಪಾಕಿಸ್ಥಾನದ ಎಟೊರ್ನಿ ಜನರಲರು ದಿಲ್ಲಿಗೆ ಕಳೆದ ವಾರ ಆಗಮಿಸಿದರು. ಅದರಂತೇ, ಪಾಕಿಸ್ಥಾನವು ತನ್ನಲ್ಲಿಯೂ ದಾಖಲೆಗಳೂ ನಕಾಶೆಗಳೂ ಇವೆಯೆಂದು ಹೇಳಿದುದನ್ನು ನೋಡಿಕೊಂಡು ಬರಲು ಭಾರತದಿಂದಲೂ ನಾಲ್ವರ ಕೂಟವೊಂದು ರಾವಲ್ಪಿಂಡಿಗೆ ತೆರಳಿತು. ಇನ್ನು ಎರಡೂ ರಾಷ್ಟ್ರಗಳು, ನಕಾಶೆ ಮತ್ತು ದಾಖಲೆಪತ್ರಗಳ ಪರಿಶೀಲನೆ ನಂತರ, ಜಿನೆವದಲ್ಲಿನ ಕಚ್ ವಿಚಾರಣಾಸಮಿತಿಗೆ ತಮ್ಮ ವಾದವನ್ನು ಪುಷ್ಟೀಕರಿಸಿ ಇದೇ ಅಗೋಸ್ತು 31ರೊಳಗೆ ವರದಿಯೊಪ್ಪಿಸಬೇಕು. ವಾಗ್ಮೂಲಗಳನ್ನು (ಬಾಯ್ದೆರೆಯಾಗಿ ಹೇಳಿಕೆಗಳನ್ನು) ವಿಚಾರಣಾಸಮಿತಿಯು ಸಪ್ಟಂಬರ ತಾ. 15ರಿಂದ ಕೇಳಲಾರಂಭಿಸುವುದು.

—೦—

# ಪಾಕಿಸ್ಥಾನ

## ಕಾಶ್ಮೀರ ಧ್ಯಾನ

ಚೀನದ ಪ್ರಧಾನಿ ಚೌ-ಇನ್-ಲೈಯವರು ಕಳೆದವಾರ ಪಾಕಿಸ್ಥಾನಕ್ಕೆ (ರಾವಲ್‌ಪಿಂಡಿಗೆ) ಭೇಟಿಯಿತ್ತು, ಅಧ್ಯಕ್ಷ ಅಯೂಬಖಾನರ ಅತಿಥಿಯಾಗಿ, ಅಂತರರಾಷ್ಟ್ರೀಯ ವಿದ್ಯಮಾನಗಳನ್ನು ಚರ್ಚಿಸಿ, ಸ್ನೇಹಸಂವರ್ಧನೆಯ ಯಾತ್ರೆಯೆಂದು ರುಮೇನಿಯಾ ಮತ್ತು ಅಲ್ಬೇನಿಯಗಳ ಕಡೆಗೆ ಹಾರಿದರು. ಅಗ್ನಿಭಕ್ಷಕ ಭುಟ್ಟೋರವರ ನಿರ್ಗಮನಾನಂತರ, ಪಾಕಿಸ್ಥಾನವು ಕೆಂಪುಚೀನದ ವಿಷಯವಾಗಿ ಉದಾಸೀನಭಾವ ತೋರುವುದೆಂದೂ, ಅಮೇರಿಕವನ್ನೊಲಿಸುವ ಸಲುವಾಗಿ ಅಮೇರಿಕದ ಕಡೆ ಹೆಚ್ಚು ವಾಲುವುದೆಂದೂ ಹೇಳಲ್ಪಡುವುದನ್ನು ಸುಳ್ಳಾಗಿ ತೋರಿಸುವ ಸಲುವಾಗಿ—ಚೌ-ಇನ್-ಲೈಯವರು ರಾವಲ್ಪಿಂಡಿಯಿಂದ ಹೊರಟ ಬೆನ್ನಲ್ಲೆ ಪಾಕಿಸ್ಥಾನವು ಹೊರಡಿಸಿದ ಪ್ರಕಟಣೆಯಲ್ಲಿ ಹಳೇ ಮಾತುಗಳೇ ಪುನರಾವರ್ತನಗೊಂಡಿವೆ—“ಪಾಕಿಸ್ಥಾನವು ಚೀನದೊಡನೆ ಸ್ನೇಹದಿಂದಿದೆ; ಕಾಶ್ಮೀರ ವಿಷಯವನ್ನು ಬಿಟ್ಟು ಇನ್ನು ಭಾರತದೊಡನೆ ಮಾತುಕತೆ ಇಲ್ಲ”—ಇತ್ಯಾದಿ.

## ರಷ್ಯದಿಂದ ಯುದ್ಧಹತ್ಯಾರುಗಳಿಲ್ಲ

ಸೋವಿಯತ್ ರಷ್ಯವು ಪಾಕಿಸ್ಥಾನಕ್ಕೆ ಯುದ್ಧಸಾಮಗ್ರಿಗಳನ್ನು ಕೊಡುವುದೆಂಬ ವಾರ್ತೆ ನಿಜವಲ್ಲವೆಂದು, ಮೊಸ್ಕೋ ವಾರ್ತೆಗಳು ತಿಳಿಸುತ್ತಿವೆ. ಪಾಕಿಸ್ಥಾನದಿಂದ ಮಿಲಿಟರಿ ಆಯೋಗವೊಂದು ರಷ್ಯಕ್ಕೆ ತೆರಳಿತ್ತು. ಈ ಆಯೋಗದ ಸಂದರ್ಶನವು ಕೇವಲ ಸದ್ಭಾವನಾ ಪ್ರಕಟಣೆಗಾಗಿಯೇ ಇದೆ ಎನ್ನಲಾಗುತ್ತಿದೆ.

—೦—

# ವಿಯೆತ್ನಾಮ್

## ಚೌರವರ ಕೆನ್ನೆಗೆ ಒಂದೇಟು!

“ಅಮೇರಿಕವು ಉತ್ತರವಿಯೆತ್ನಾಮ್ ಯುದ್ಧವನ್ನು ಕೆರಳಿಸಿ, ಚೀನವನ್ನು ಕೆರಳಿಸಿ ಒಂದು ಕೈ ನೋಡಲಿ” ಎಂಬರ್ಥದಲ್ಲಿ, ಚೀನೀ ಪ್ರಧಾನಿ ಚೌ-ಇನ್-ಲೈಯವರು, ರುಮೇನಿಯಾ ಮತ್ತು ಅಲ್ಬೇನಿಯಾ ಸಂಚಾರಕಾಲದಲ್ಲಿ ಗರ್ವದಿಂದ ಕೆಣಕಿ ಮಾತಾಡಿದರು. ಇದಕ್ಕುತ್ತರವಾಗಿಯೋ ಎಂಬಂತೆ, ಚೌರವರ ಕೆನ್ನೆಗೇ ನೇರಾಗಿ ಹೊಡೆವಂತೆ—ಅಮೇರಿಕದ ವಿಮಾನಗಳು ಧಲ್ಯಕ್ಷ ಜೊನ್ಸನರ ಅಜ್ಞೆಯಂತೆ, ತಾ. 28ರಲ್ಲಿ, ಉತ್ತರವಿಯೆತ್ನಾಮಿನ ಹೆನೊಯ್ ನಗರದ ಮೇಲೇ ಹಾರಿ, ನಗರದ ಬಳಿಯ ತೈಲಸಂಗ್ರಹಗಳಿಗೆ ಬೋಂಬ್ ಎಸೆದು, ಅಲ್ಲಿಯ ಸೇಕಡಾ 80ರಷ್ಟು ತೈಲಸಂಗ್ರಹವನ್ನು ದಹಿಸಿವೆ. ಉತ್ತರ ವಿಯೆತ್ನಾಮಿಗೆ ಚೀನವು ಬಾಯಿಮಾತಿನ ಸಹಾಯವನ್ನೆ ಅಧಿಕವಾಗಿ ಕೊಡುತ್ತಿದೆ. ಸೋವಿಯತ್ ರಷ್ಯದಿಂದ ಕೊಡಲ್ಪಡುವ ಸಹಾಯವು ತನ್ನ ದಾರಿಯಾಗಿ ಹೋಗದಂತೆಯೂ ಕೆಂಪುಚೀನಾ ತಡೆದಿದೆ.

—೦—

# ರಷ್ಯ

## ಡಿ ಗಾಲ್ ರಷ್ಯದಲ್ಲಿ

ಫ್ರಾನ್ಸಿನ ಅಧ್ಯಕ್ಷ ಡಿ ಗಾಲ್‌ರವರು ರಷ್ಯಾ ಸಂಚಾರ ಕೈಕೊಂಡವರು, ಸೋವಿಯತ್ ನಾಯಕರೊಡನೆ ಗೆಳೆತನ ವರ್ಧಿಸಿಕೊಳ್ಳುವ ಯತ್ನದಲ್ಲಿದ್ದಾರೆ. ಫ್ರಾನ್ಸ್ ಮತ್ತು ಯುರೋಪಿನ ಅಭಿವೃದ್ಧಿಗೂ ರಕ್ಷಣೆಗೂ ಪಾಶ್ಚಿಮಾತ್ಯ ರಾಷ್ಟ್ರಗಳ ಮೇಲೇ ಅವಲಂಬಿಸಿರುವುದಕ್ಕಿಂತ ಸೋವಿಯತ್ ರಷ್ಯದಂತಹ ಬಲಿಷ್ಠ ರಾಷ್ಟ್ರದ ಸ್ನೇಹದಿಂದ ಹೆಚ್ಚು ಲಾಭ ಪಡೆಯಬಹುದೆಂದು ಡಿ ಗಾಲ್‌ರವರ ಅಭಿಮತವಾಗಿದ್ದಿರಬೇಕು ಕಳೆದ 2—3 ವರ್ಷಗಳಿಂದ ಡಿ ಗಾಲ್‌ರವರು, ಅಮೇರಿಕಾ—ಬ್ರಿಟ್ಟೆನ್‌ಗಳನ್ನು ಅಲಕ್ಷಿಸುವಷ್ಟು ಲಘುತನ ತೋರಿದ್ದಾರೆ. ಈಗ, ರಷ್ಯಾ ಸಂಚಾರದಲ್ಲಿ ಡಿ ಗಾಲ್‌ರವರು ರಷ್ಯನ್ ನಾಯಕರ ಸ್ನೇಹ—ಪ್ರೇಮಗಳನ್ನು ಧಾರಾಳ ಅನುಭವಿಸುತ್ತಿದ್ದಾರೆ. ಈ ವರೆಗೆ ವಿದೇಶೀ ರಾಜಕಾರಣಿಗಳಿಗಾರಿಗೂ ಪ್ರವೇಶವಿಲ್ಲದಂಥ ರೊಕೆಟ್ ಹಾರಾಟದ ನಿಲ್ದಾಣಕ್ಕೂ ಡಿಗಾಲ್‌ರವರನ್ನು ರಷ್ಯನರು ಕರೆದೊಯ್ದು, ತಮ್ಮ ಅತಿಥಿಗೆ ರೊಕೆಟ್ ಹಾರಾಟವನ್ನೂ ಪ್ರದರ್ಶಿಸಿದ್ದಾರೆ. ರಷ್ಯದ ಶಕ್ತಿಯೆಷ್ಟು ಮತ್ತು ಏನೆಂದು ಡಿ ಗಾಲ್‌ರವರು ಪ್ರತ್ಯಕ್ಷ ಕಾಣುತ್ತಿದ್ದಾರೆ. ಫ್ರಾನ್ಸ್ ಅಧ್ಯಕ್ಷರ ರಷ್ಯನ್ ಪ್ರವಾಸವು ಇದೇ ತಾ. 1ರಲ್ಲಿ ಕೊನೆಗೊಳ್ಳುವುದು.

—೦—

# ಚೀನ

## ಹಿಂದೀ ಬ್ರೊಡ್‌ಕಾಸ್ಟ್

ಕೆಂಪುಚೀನವು, ಭಾರತವಿರೋಧೀ ಪ್ರಚಾರವನ್ನು ಹೆಚ್ಚಿಸಿದೆ. 1959ರಲ್ಲಿ ಚೀನವು ಹಿಂದಿಯಲ್ಲಿ ಬ್ರೊಡ್‌ಕಾಸ್ಟ್ ಮಾಡಲಾರಂಭಿಸಿದಾಗ, ವಾರಕ್ಕೆ ಏಳು ಗಂಟೆಗಳಷ್ಟು ಸಮಯ ವಿನಿಯೋಗಿಸುತ್ತಿತ್ತು. 1960ನೇ ಜೂನ್ ತಿಂಗಳಲ್ಲಿ ವಾರಕ್ಕೆ 14 ಗಂಟೆಗಳಿಗೇರಿಸಲ್ಪಟ್ಟಿತು. ಈಗ ವಾರಕ್ಕೆ 21 ಗಂಟೆಗಳು ಹಿಂದೀ ವಾರ್ತೆಗಳಿಗೆ ಮೀಸಲಾಗಿರಿಸಲ್ಪಟ್ಟಿವೆ.

—೦—

## ಮುಂಬಯಿಯಲ್ಲಿ ವಿಜಯಾ ಬೇಂಕಿನ ಎರಡನೇ ಶಾಖೆ

ಪ್ರಗತಿಪಥದಲ್ಲಿ ಸಾಗುತ್ತಿರುವ ವಿಜಯಾ ಬೇಂಕು, ಮುಂಬಯಿಯ ಗಾಂವದೇವಿಯಲ್ಲಿ, ತನ್ನ ಎರಡನೇ ಶಾಖೆಯನ್ನು ತಾ. 27—6—66ರಲ್ಲಿ ತೆರೆಯಿತು. ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಆಪ್ತರಲ್ಲಿ, ಶ್ರೀ ಕೆ. ಎಮ್. ಮುನ್ಷಿ, ಶ್ರೀಮತಿ ಲೀಲಾವತಿ ಮುನ್ಷಿ, ರಾಜಾ ಸರ್ ಎಮ್. ಎ. ಮುತ್ತಯ್ಯ ಚೆಟ್ಟಿಯಾರರೇ ಮೊದಲಾದವರು ಕೆಲವರು.

ವಿಜಯಾ ಬೇಂಕಿನ ಚೆಯರ್ಮೆನರಾಗಿರುವ ಶ್ರೀ ಎಮ್. ಸುಂದರರಾಮ ಶೆಟ್ಟಿಯವರು, ಈ ವಿಶೇಷ ಸಮಾರಂಭಕ್ಕಾಗಿ ಮುಂಬಯಿಗೆ ಆಗಮಿಸಿದ್ದರು.

ಮುಂಬಯಿಯಲ್ಲಿ ವಿಜಯಾ ಬೇಂಕಿನ ಒಂದು ಶಾಖೆಯು, ಈ ಮೊದಲಿಂದಲೇ, ಪಾರ್ಸಿಬಜಾರ್ ಸ್ಟ್ರೀಟ್‌ನಲ್ಲಿರುವ ಹಸನ್ ಚೇಂಬರ್ಸ್‌ದಲ್ಲಿ ಸೇವೆ ಸಲಿಸುತ್ತಿದೆ. ಈಗ ಮುಂಬಯಿಯಲ್ಲಿ ತೆರೆಯಲ್ಪಟ್ಟಿರುವ ಶಾಖೆಯು ಬೇಂಕಿನ 58ನೇ ಶಾಖೆಯಾಗಿದ್ದು, ಗಾಂವದೇವಿಯಂಥ ಪ್ರಾಮುಖ್ಯ ಕೇಂದ್ರದಲ್ಲಿ ಜನತೆಗೆ ತನ್ನ ಸೇವೆಯೊಪ್ಪಿಸುವುದು.

ವಿಜಯಾ ಬೇಂಕಿನ ಇನ್ನೊಂದು ಶಾಖೆಯು ಕೊಯಮುತ್ತೂರಿನಲ್ಲಿ ಇದೇ ತಾ. 7ರಂದು ತೆರೆಯಲ್ಪಡುವುದು. ಇದು, ಬೇಂಕಿನ 59ನೇ ಶಾಖೆಯಾಗುವುದು.

—೦—

# ವಾರದ (ಅ) ವಿಚಾರ

ಕೆಂಪುಚೀಣಾದಲ್ಲಿ ಪೀಕಿಂಗ್ ಮುನ್ಸಿಪಲ್ ಪಕ್ಷದ ಸಮಿತಿಯ ಮಾಜಿ ಸದಸ್ಯ "ಚಾಂಗ್‌ವೆನ್ ಸುಂಗ್"ರವರು ಉಚ್ಚಾಟಿಸಲ್ಪಟ್ಟರೆಂದು ವರದಿಯಾಗಿದೆ. ಹಿಂದೆ ಮಹಾಭಾರತದ ಕಥೆಯಲ್ಲಿ ನಡೆದಿದ್ದ ಸರ್ಪಯಾಗದಲ್ಲಿ ಅಸಂಖ್ಯಾತ ಸರ್ಪಗಳು ಹೋಮಕುಂಡಕ್ಕೆ ಆಹುತಿಯಾಗಿ ಕೊನೆಗೆ ತಕ್ಷಕ, ವಾಸುಕಿ ಮುಂತಾದ ಕೆಲವೇ ಮಾತ್ರ ಉಳಿದಿದ್ದುವಂತೆ! ಮಾವೋತ್ಸೆ–ತುಂಗರ ಉಚ್ಚಾಟನಾಯಜ್ಞದಲ್ಲಿ ಯಾರೆಲ್ಲ ಆಹುತಿಯಾಗುವರೋ ಎಂದು ಕೆಲವರಿಗೊಂದು ಕುತೂಹಲ! ಅಲ್ಲಿನ ಉಚ್ಚಾಧಿಕಾರಿಗಳ ಜಾತಕ ಸ್ಫುಟ ಮಾಡಿದಾಗ ಲಿಯೋಶಾವೋಚಿಯವರಿಗೆ "ಲಗ್ನದಲ್ಲಿ ಮಾಂದಿ" ಉದಯವಾಗಿದ್ದಾನೆಂದೂ, ಚಾ-ರವರಿಗೆ ರಾಹುವಿನ ವಕ್ರದೃಷ್ಟಿ ಇರುವುದರಿಂದ, ಕಚ್ಚಾಗಿ ಅಂತರ್ರಾಷ್ಟ್ರದಲ್ಲೇ ಸುತ್ತಾಡುತಿದ್ದು, ಅಲ್ಲಲ್ಲಿ ಮುಖಭಂಗವಾಗಿ, ಕೊನೆಗೆ ಅಧಿಕಾರದಿಂದ ಉರುಳಲೂ ಬಹುದೆಂದು ಜ್ಯೋತಿಷಿಯೊಬ್ಬರ ತೀರ್ಮಾನ!

o o o

ಬೆಳಗಾಂವಿ ಜಿಲ್ಲೆಯಲ್ಲಿ ಗಡಿಯ ಕುರಿತಾಗಿ ನಡೆದ ಚಳವಳಿಯಲ್ಲಿ ಅಲ್ಲಿನ ಯುವಕರು "ಮಹಾರಾಷ್ಟ್ರದ ಪುಂಡಾಟಿಕೆಗೆ ಧಿಕ್ಕಾರ! ಏಕಸದಸ್ಯ ಆಯೋಗಕ್ಕೆ ಬಹಿಷ್ಕಾರ!!" ಎಂಬ ಭಿತ್ತಿಪತ್ರ ಪ್ರದರ್ಶಿಸಿದರು. ಅದು ಸರಿಯೆಂದು (ಅ) ವಿಚಾರಿಗಳ ಮತ! ಮಹಾರಾಷ್ಟ್ರದ ಪೀಳಿಗೆಯು, ಪುಂಡಾಟಿಕೆಯು ತಮ್ಮ ಪಿತ್ರಾರ್ಜಿತ ಆಸ್ತಿಯೆಂದೇ ಭಾವಿಸಿಕೊಂಡಿದೆ. ಪರಪೀಡನ ಸಹಿಸದೆ ಪರದೇಶಿವಸ್ತುಗಳಿಗೆ ಬಹಿಷ್ಕಾರಹಾಕಲು ಕಲಿಸಿಕೊಟ್ಟವರು ಗಾಂಧೀಜಿ! ನಮ್ಮ ಯುವಜನ ಆಗ ಅತಿ ಕಿರಿಯರಾಗಿದ್ದರೂ ಅಂದಿನ ಆಂದೋಲನದ ವೀರರಸದ ಹಾಡು ಕೇಳಿಯೇ ನಿದ್ರಿಸಿದವರು. ಅಂತಹರು ಮಹಾರಾಷ್ಟ್ರದ ಪೀಡನೆ ಸಹಿಸದೆ, ಹಿರಿಯರು ಹಾಕಿಕೊಟ್ಟ ದಾರಿಯಲ್ಲೇ ನಡೆದುದೂ ಸರಿಯಲ್ಲವೆ? ಎಂದು ಹಲವರ ಸಮಾಧಾನ!!

o o o

ವಿಯೆಟ್ನಾಮದ ಪೋಲೀಸರು ಸೂಲಗಿತ್ತಿಯರಾಗಿದ್ದಾರೆಂದೂ, ತಿಪ್ಪೆ, ಗುಂಡಿ, ರೈಲ್ವೆದಾರಿ, ಸೇತುವೆಗಳ ಅಡಿಗಳಲ್ಲಿ ಜನಿಸಿದ ಸುಮಾರು 3000 ಶಿಶುಗಳನ್ನು ಅಲ್ಲಿನ ಪೋಲೀಸು ಸೂಲಗಿತ್ತಿಯರು ಸಲಹಿದ್ದಾರೆಂದೂ ವರದಿ! "ಡಾ|| ಹಸ್ಸೀನ್" ಆ ಪೋಲೀಸರಿಗೆ ಸೂಕ್ತ ದಾದಿಶಿಕ್ಷಣ ಕೊಟ್ಟಿದ್ದಾರೆಂದೂ ವಾರ್ತೆ. ಈ ವಿಧಾನವು ನಮ್ಮ ಮೈಸೂರು ಸೀಮೆಗೂ ಸ್ವಾಗತವೆನ್ನಿ! ಇಲ್ಲಿನ ಪೋಲೀಸು ಖಾತೆಯಲ್ಲಿ ಪ್ರಕೃತ ಮಹಿಳಾ ಪೋಲೀಸರು ಇರುವುದರಿಂದ ಈ ಯೋಜನೆ ಇಲ್ಲಿ ಯಶಸ್ವಿಯಾಗುವುದರಲ್ಲಿ ಯಾರಿಗೂ ಸಂದೇಹ ಉಳಿದಿಲ್ಲ!

o o o

ಝು. ಎ. ಭುಟ್ಟೋ ಕರಾಚಿಯಿಂದ ಪ್ರಯಾಣಿಸುತಿದ್ದ ರೈಲನ್ನು ಮಧ್ಯದಲ್ಲಿ ನಿಲ್ಲಿಸಿ ಅಲ್ಲಿನ ವಿದ್ಯಾರ್ಥಿಸಂಘ ಕೈಚುಂಬನ, ಪುಷ್ಪಹಾರಗಳಿಂದ ಗೌರವಿಸಿ ಬೀಳ್ಕೊಡುವಾಗ ಭುಟ್ಟೋರು ಅರಚಿ ಕಣ್ಣೀರು ಮಿಡಿದರೆಂದು ವಾರ್ತೆ! ಅದು ಸ್ವಾಭಾವಿಕವೆಂದು ಕೆಲವರ ಸಮಾಧಾನ! ನಮ್ಮ ಜಿಲ್ಲೆಯ ಅಳಿಯಕಟ್ಟಿನ ಕುಟುಂಬದಲ್ಲಿ ಗಂಡ ಸತ್ತು ಗಂಡನ ಮನೆಯಿಂದ ತವರ್ಮನೆಗೆ ಹೋಗುವ ವಿಧವೆಯು ಕಣ್ಣೀರು ಮಿಡಿಯುವಂತೆ, ಭುಟ್ಟೋರು ಅಧಿಕಾರದಿಂದ ಉರುಳಿಬಿದ್ದು ಅಧಿಕಾರದಿಂದ ಹೊರಗೆ ಹೋಗುವಾಗ, ಕಣ್ಣೀರು ಮಿಡಿಯಲೇ ಬೇಕಲ್ಲವೆ? ಎಂದು (ಅ)ವಿಚಾರಿಗಳ ತೀರ್ಮಾನ! ಈ ಡೊಂಬರಾಟದ ರಹಸ್ಯವೇನು? ಭುಟ್ಟೋರು ಭಾರತ ವಿರೋಧಿಭಾವನೆಯಿಂದ ಬಗುಳುತಿದ್ದು, ವಿರೋಧ ಪಕ್ಷಗಳ ಬೆಂಬಲಪಡೆದು, ಅಯೂಬರನ್ನೇ ಪದಚ್ಯುತಗೊಳಿಸುವ ಸಂಚುಹೂಡಿದ್ದರೆಂದೂ ವಾರ್ತೆ! "ಬಗುಳುವ ನಾಯಿ ಬಾಲ ಅಲ್ಲಾಡಿಸಿತು! ಬಾಲ ನಾಯಿಯನ್ನೇ ಅಲ್ಲಾಡಿಸಿತೆಂದು ವಿನೋದಪಟುವೊಬ್ಬರ ತೀರ್ಮಾನ!! ತಲೆಗಿಂತ ದೊಡ್ಡ ಮುಂಡಾಸಿಟ್ಟರೆ ಪರಿಣಾಮ ಏನೆಂದು ಈಗ ಅಯೂಬರೇ ಉತ್ತರಿಸಲಿ!!

o o o

ಚೈನಾ-ರಷ್ಯ ಸೈದ್ಧಾಂತಿಕ ಮತಭೇದದ ಕುರಿತು ಚರ್ಚಿಸಲು ಭಾರತದ ಎಡಕಮ್ಯೂನಿಸ್ಟ ನಾಯಕರು ಪ್ರಕೃತ ಸಿದ್ಧರಿಲ್ಲವೆಂದು ವರದಿ! ಇದರ ಗುಟ್ಟೇನೆಂದು ಕೆಲವರಲ್ಲಿ ಆತುರ ಮೂಡಿದೆ. ಪ್ರಕೃತ ಚೈನಾದಲ್ಲಿ ಆಡಳಿತೆಯ ಶುದ್ಧೀಕರಣಕ್ಕಾಗಿ ಮಾವೋತ್ಸೆತುಂಗರ ಉಚ್ಚಾಟನಾ ಹೋಮ ಆರಂಭವಾಗಿದೆಯಷ್ಟೆ! ಈ ಹೋಮದ ಅವಭೃತಸ್ನಾನ ಆಗುವಾಗ ಚೈನಾದ ಕಮ್ಯೂನಿಷ್ಟರಲ್ಲಿ ಎಷ್ಟು ಗುಂಪುಗಳಾಗುವುವೆಂದು ನಂಬೂದಿರಿಪಾಡ್, ಎ. ಕೆ. ಗೋಪಾಲನ್, ಬಿ. ಟಿ. ರಣದಿವೆ ಮುಂತಾದ ಎಡಪಕ್ಷದ ಮುಖಂಡರಿಗೂ ತಿಳಿದಿಲ್ಲವಂತೆ! ಅಲ್ಲಿನ ಆಡಳಿತಾಪಕ್ಷದ ತಾಳಕ್ಕೆ ಹೆಜ್ಜೆಹಾಕಿ ಕುಣಿವ ಮಂದಿಗೆ ಸ್ವೇಚ್ಛೆಯಿಂದ ಕುಣಿವ ಹಕ್ಕು ಎಲ್ಲಿದೆ? ಎಂದು ಕೆಲವರ ಸೂಚನೆ! "ಬಸವ ಹೋದಷ್ಟೇ ದೂರ ಬಾಲ ಹೋಗಬೇಕಲ್ಲವೇ?" ಎಂದು (ಅ) ವಿಚಾರಿಗಳ ತೀರ್ಮಾನ!!

o o o

ಗಡಿವಿಂಗಡನೆಯ ಕುರಿತು ರಚಿಸಲಾಗುವ ಏಕಸದಸ್ಯ ಆಯೋಗದ ನಿರ್ಧಾರವನ್ನು ಬದಲಿಸುವಂತಿಲ್ಲವೆಂದು ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರು ಸಾರಿರುವರು. ಇದರಿಂದ ಕನ್ನಡಿಗರ ಎದೆಯು ಕಿಚ್ಚು ಕೆರಳಿ ಅದು ಸತ್ಯಾಗ್ರಹದ ರೂಪ ತಾಳಿದೆಯಷ್ಟೆ! ಇದರ ಪರಿಣಾಮವೇನೆಂದು ನಾಗರಿಕರೊಬ್ಬರ ಪ್ರಶ್ನೆ! ಕವಿವರ್ಯ ರನ್ನನು ಹಾಡಿದಂತೆ "ತ್ರಿದಶನದೀಸುತನಿಂ ತೀ| ರದ ಕಜ್ಜಂ, ಮುನ್ನ ಕಳಶಸಂಭವನಿಂ ತೀ| ರದ ಕಜ್ಜ ಮಿನಜನಿಂ ತೀ| ರದ ಕಜ್ಜಂ ದ್ರೋಣಪುತ್ರನಿಂ ತೀರ್ದಪುದೇ" ಎಂಬಂತೆ ಮಹಾವ್ಯಕ್ತಿ ನೆಹ್ರೂಗಳಿಂದಾಗದ ಕಜ್ಜ, ಮಹಾವಿಶ್ವಾಸಿ ದಿ| ಶಾಸ್ತ್ರಿಯವರಿಂದಾಗದ ಗಡಿವಿಂಗಡನೆಯ ಕಜ್ಜ, ಇಂದಿರಾರ ಏಕಸದಸ್ಯ ಆಯೋಗದಿಂದ ಆದೀತೆ? ಅವ್ಯವಹಾರ್ಯದ ಕಜ್ಜ, ನಡೆದುದೇ ಆದರೆ ಅನಿಷ್ಟಗಳು ತಲೆಎತ್ತಲೇ ಬೇಕಲ್ಲವೆ?

o o o

ಹೊಸತಾಗಿ ವಿವಾಹವಾದವರೊಡನೆ ಕುಟುಂಬಯೋಜನೆ ಕಾರ್ಯಕ್ಕಾಗಿ ಸಂಪರ್ಕಪಡೆಯಲು ಅನುಕೂಲವಾಗುವಂತೆ ವಿವಾಹಗಳ ಕಡ್ಡಾಯ ದಾಖಲಾತಿಗೆ ಕೇಂದ್ರ ಕುಟುಂಬಯೋಜನಾ ಸಂಸ್ಥೆ ಸಲಹೆಮಾಡಿದೆಯೆಂದು ತಿಳಿದುಬಂದಿದೆ! ಇದರಿಂದ ಕೆಲ ತರುಣ-ತರುಣಿಯರು ದಿಗ್ಭ್ರಮೆಗೊಂಡು "ಗಾಂಧರ್ವವಿವಾಹ"ವನ್ನು ಈ ಕಾಯಿದೆಯಿಂದ ಹೊರತುಪಡಿಸಲು ಚಳವಳ ಹೂಡುವರೇ? ಎಂದು ವಿನೋದಪಟುವೊಬ್ಬರ ಸವಾಲು!

...ನ. ಸವ್ಯಸಾಚಿ.

—

## ಕೊಯ್ಲಾ ಕೆಟಲ್ ಫಾರ್ಮ್

ಉಪ್ಪಿನಂಗಡಿ ಸಮೀಪದ ಕೊಯ್ಲಾ ಜಾನುವಾರು ಅಭಿವೃದ್ಧಿ ಕೇಂದ್ರಕ್ಕೆ ಶ್ರೀ ಎಸ್. ಪಿ. ಕುಲಕರ್ಣಿಯವರನ್ನು ಸುಪರಿಂಟೆಂಡೆಂಟ್ ಆಗಿ ನೇಮಕ ಮಾಡಲಾಗಿದೆಯೆಂದು ತಿಳಿಯಲಾಗಿದೆ.

—

# ಇಂಡೋನೇಸ್ಯ

## ಸುಕಾರ್ನೊರ ಕಣ್ಣೀರು.

ಕೆಂಪುಚೀನದೊಡನೆ ಲಲ್ಲೆಯಾಡುತ್ತ, ಭಾರತದ ಸ್ನೇಹಹಸ್ತವನ್ನು ಚೆಲ್ಲಿಕೊಡುತ್ತ, ಮಲೇಶ್ಯದ ಕಡೆಗೆ ಭಲ್ಲೆ ತೋರಿಸುತ್ತ, ಸ್ವಜನರನ್ನು ಕುಣಿಸಿ ದಣಿಸಿ ಚೆಲ್ಲಾಟವಾಡುತಿದ್ದ ಇಂಡೋನೇಸ್ಯದ ಪೂರ್ಣಾಧಿಕಾರಿಯಂತಿದ್ದ ಅಧ್ಯಕ್ಷ ಸುಕಾರ್ನೊ, ಅಲ್ಲಿಯ ಮಿಲಿಟರಿ ನಾಯಕರು ಅಧಿಕಾರ ಹಿಡಿದ ದಿನದಿಂದ ಹುಲ್ಲೆಮರಿಯಂತಾಗಿದ್ದಾರೆ. ಅವರೀಗ ನಾಮಮಾತ್ರಕ್ಕೆ ಅಧ್ಯಕ್ಷರು; ಅಧಿಕಾರವೆಲ್ಲವೂ, ಅಲ್ಲಿಯ ಸೇನಾನಾಯಕ ಲೆಫ್ಟನೆಂಟ್ ಜನರಲ್ ಸುಹಾರ್ತೊರವರ ಹಸ್ತಗತವಾಗಿದೆ. ಕಳೆದ ವಾರ, ಇಂಡೋನೇಸ್ಯದ ಜನತಾ ಕೊಂಗ್ರೆಸ್ ಸರಕಾರದ ಅಧಿಕಾರ ಮಂಡಲಿಯ ನಾಯಕರಾಗಿ ಸುಹಾರ್ತೊರವರನ್ನೆ ಅನುಮೋದಿಸಿತು. ಇನ್ನೊಂದು ಚುನಾವಣೆ ನಡೆದು ಹೊಸ ಆಯ್ಕೆಗಳಾಗುವ ತನಕ ಅಲ್ಲಿಯ ಕೊಂಗ್ರೆಸ್ಸಿನ ಈ ನಿರ್ಣಯವು ಜಾರಿಯಲ್ಲಿರುವುದು. ಕಳೆದ ಮೂರು ವರ್ಷಗಳಿಂದ ಮಲೇಶ್ಯದೊಡನೆ ಇಂಡೋನೇಸ್ಯಕ್ಕೆ ಇರುತಿದ್ದ ಸಮರವು ಕೊನೆಗೊಳ್ಳುವುದು. ಎರಡೂ ದೇಶಗಳು ಸ್ನೇಹ-ಸೌಹಾರ್ದಗಳಿಂದ ಅಭಿವೃದ್ಧಿ ಹೊಂದುವ ಕಾರ್ಯಗಳಿಗೆ ಉತ್ತೇಜನ ನೀಡಲಾಗುವುದು, ಭಾರತದ ಮೇಲಿನ ದ್ವೇಷವು ಇಷ್ಟರೊಳಗೇ ಕೊನೆಗೊಂಡಿದ್ದು, ಸ್ನೇಹಸಂಬಂಧಗಳಿಗಾಗಿ ಯತ್ನಗಳಾಗಿವೆ. ಕೆಂಪು ಚೀನದ ಪ್ರಭಾವವನ್ನು ಆಡಳಿತದಿಂದ ಪೂರ್ಣ ತೆಗೆದುಹಾಕಲಾಗಿದೆ. ಅಲ್ಲಿಯ ಜನಸಾಮಾನ್ಯಕ್ಕೆ ಕೆಂಪುಚೀನದ ಮೇಲೆ ಹೊಗೆಯಾಡುತಿದ್ದ ದ್ವೇಷವು ಕೆಲತಿಂಗಳ ಹಿಂದೆ ಉಜ್ವಲಿಸಿದ್ದಾಗ, ಚೀನದ ರಾಯಭಾರಿ ಕಚೇರಿಗಳು ಪುಡಿಗೈಯಲ್ಪಟ್ಟುದಲ್ಲದೆ, ಚೀನೀ ಶಾಲೆಗಳು ಬಲಾತ್ಕಾರದಿಂದ ಮುಚ್ಚಿಸಲ್ಪಟ್ಟದ್ದುವು. ಇಂಡೋನೇಸ್ಯದ ವಿದೇಶ ಮಂತ್ರಿ ಡಾ|| ಆದಮ್ ಮಾಲಿಕರವರು ಸೋವಿಯತ್ ರಷ್ಯಕ್ಕೆ ಗೆಳೆತನ ಬೆಳೆಸುವ ಸಂದರ್ಶನ ನೀಯಲಿದ್ದಾರೆ. ಜುಲೈ ತಾ 16ಕ್ಕೆ ಮೊಸ್ಕೊಗೆ ತೆರಳುವ ಡಾ|| ಮಾಲಿಕರವರು, ಅಲ್ಲಿಂದ ಕರಾಚಿಗೂ ಮತ್ತೆ ಡೆಲ್ಲಿಗೂ ಭೇಟಿಕೊಡಲಿದ್ದಾರೆ. ಇಂಡೋನೇಸ್ಯದ ರಾಜಕೀಯದಲ್ಲಿ ಪೂರ್ಣ ಬದಲಾವಣೆಯಾಗಿದೆ. ಹಣದ ಉಬ್ಬರವನ್ನು ಇಳಿಸಲೂ ಯತ್ನಗಳಾಗುತ್ತಿವೆ. ಅಧ್ಯಕ್ಷ ಸುಕಾರ್ನೊರವರು, ಕಳೆದ ವಾರ ಜರಗಿದ ಜನತಾ ಕೊಂಗ್ರೆಸ್ಸಿನಲ್ಲಿ 500 ಮಂದಿ ಸದಸ್ಯರ ಮುಂದೆ ಮಾತನಾಡುತ್ತ: ದೇಶಕ್ಕೆ ತನ್ನ ಸೇವೆ ಎಷ್ಟೆಂದು ವಿವರಿಸತೊಡಗಿದರು. ಕೈಯನ್ನು ಎದೆಮೇಲಿಟ್ಟು ಮಾತಾಡುತ್ತ ಈ ವಾಚಾಳಿ, ಕಣ್ಣೀರು ಸುರಿಸುವಲ್ಲಿಗೂ ತಲಪಿದರು. ದೇಹವನ್ನು ಸೆರೆಯಲ್ಲಿಡಬಹುದು; ದೇಹವನ್ನು ಬಿಸುಡಬಹುದು, ದೇಹವನ್ನು ಗುಂಡಿಕ್ಕಿ ಕೆಡವಬಹುದು—ಆದರೆ ಸ್ವಾತಂತ್ರ್ಯದ ಹೇತು—ಅದು ಅಮರ" ಎಂದರು ಒಮ್ಮೆಂದೊಮ್ಮೆ ಇಂಗ್ಲಿಷಿಗೂ ನಾಲಗೆಯನ್ನು ಮಗುಚಿ, "40 ವರ್ಷಗಳಿಂದ—ದೇಶದ ಸ್ವಾತಂತ್ರ್ಯ ಸೇವೆಗೆ ನನ್ನನ್ನು ಅರ್ಪಿಸಿಕೊಂಡಿದ್ದೇನೆ"—ಎಂದೂ ಪ್ರಲಾಪಿಸಿದರು. ಈ ಸಭೆಯಲ್ಲಿ, ವಿದೇಶಿ ರಾಜಕಾರಣಿಗಳನೇಕರಿದ್ದರು, ಚೀನೀ ರಾಯಭಾರಿ ಕಚೇರಿಯವರಾರೂ ಇರಲಿಲ್ಲ. ಅಧಿಕಾರಗಳು ಕಡಿಯಲ್ಪಟ್ಟ ಅಧ್ಯಕ್ಷ ಸುಕಾರ್ನೊ, ಈಗ ತನ್ನ ಬೆನ್ನನ್ನು ತಾನೇ ತಟ್ಟಿಕೊಳ್ಳುವ ಉದ್ಯೋಗಕ್ಕಿಳಿದಂತಾಗಿದೆ.

## ಇನ್ನೂ ಅಧ್ಯಕ್ಷ—ಆದರೆ 'ತಾಜಾ' ಅಧ್ಯಕ್ಷನಲ್ಲ?

ಡಾ|| ಅಹಮದ್ ಸುಕಾರ್ನೊರವರೇ ಈಗಲೂ, ಇಂಡೋನೇಸ್ಯದ ನ್ಯಾಯಬದ್ಧ ಅಧ್ಯಕ್ಷರು—ಎಂಬುದಾಗಿ, ಇಂಡೋನೇಸ್ಯದ ಅಧಿಕಾರವಾಘೆ ಹಿಡಿದ ಅಲ್ಲಿಯ ಸೇನಾಧಿಕಾರಿ ಲೆಫ್ಟನೆಂಟ್ ಜನರಲ್ ಸುಹಾರ್ತೊರವರು, ಕಳೆದ ವಾರ ದೊಡ್ಡ ಸ್ವರದಲ್ಲಿ ಸಾರಿದರು. ಆದರೆ, ಈ ಅಧ್ಯಕ್ಷರಿಗೂ ನೈಜ ಅಧಿಕಾರಕ್ಕೂ ಬಹಳ ಅಂತರವಿದ್ದಂತೆ ತೋರುತ್ತಿದೆ. ಯಾವುದೋ ಒಂದಂಶ ಜನತೆಯ ಸಮಾಧಾನಕ್ಕೆ ಸುಕಾರ್ನೊರವರ ಅಧ್ಯಕ್ಷಸ್ಥಾನ ಪಾಲಿಸಲ್ಪಟ್ಟಿದೆ. ಇಂಡೋನೇಸ್ಯದಲ್ಲಿ ಕಮ್ಯುನಿಸ್ಟ ಪ್ರಭಾವವು ಮುರಿದಿಕ್ಕಲ್ಪಟ್ಟಿದೆ. ಕೆಂಪುಚೀನವು, ತನ್ನವರಿಗೆ ಇಂಡೋನೇಸ್ಯದಲ್ಲನುಭವವಾಗುತ್ತಿರುವ ಅಸೌಕರ್ಯಗಳ ಬಗ್ಗೆ ದೂರಿಡುತ್ತಲೇ ಇದೆ. ಇಂಡೋನೇಸ್ಯದ ರಾಜಧಾನಿ ಜಕರ್ತಾದಲ್ಲಿ, ವಿದ್ಯಾರ್ಥಿಗಳು—"ನಮ್ಮ ರಾಷ್ಟ್ರದಲ್ಲಿ ಕಮ್ಯೂನಿಝಮನ್ನು ಪ್ರತಿಬಂಧಿಸಬೇಕು—" ಎಂದು ಘೋಷಿಸುತ್ತಿದ್ದಾರೆ. ಸುಕಾರ್ನೊ ಆಡಳಿತದಲ್ಲಿ ಹಣದ ಉಬ್ಬರವು, ಜನಸಾಮಾನ್ಯದ ಜೀವನವನ್ನು ಕಷ್ಟತಮವಾಗಿ ಮಾಡಿದೆ. ನಾಡಿನ ಆರ್ಥಿಕ ದುಸ್ಥಿತಿಯನ್ನು ಹೋಗಲಾಡಿಸಲು ನಿರ್ಯಾತ ವ್ಯಾಪಾರವನ್ನು ಶೀಘ್ರದಲ್ಲೆ ವೃದ್ಧಿಗೊಳಿಸಬೇಕೆಂದೂ, ಈ ಬಗ್ಗೆ ಪ್ರತ್ಯೇಕ ಮಂತ್ರಿಮಂಡಲವಾಗಬೇಕೆಂದೂ ಚಳವಳ ನಡೆದಿದೆ.

—

# ನಮ್ಮ ಜಿಲ್ಲೆ

## ಕೊಲೇಜಿನ ಕಟ್ಟಡದ ಉದ್ಘಾಟನೆ

ಕಳೆದ ವರ್ಷ ಪ್ರಾರಂಭಿಸಲ್ಪಟ್ಟ ಮೂಡಬಿದ್ರೆಯ ಶ್ರೀ ಮಹಾವೀರ ಕೊಲೆಜಿನ ನೂತನ ಕಟ್ಟಡದ ಉದ್ಘಾಟನೆಯು ಮೈಸೂರು ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರಿಂದ ಕಳೆದ ತಾ 26ರಂದು ನಡಯಿತು. ಆರಂಭದಲ್ಲಿ ಕೊಲೇಜಿನ ಪ್ರಿನ್ಸಿಪಾಲ್ ಶ್ರೀ ಆರ್. ಎಸ್. ಮಾಧವರಾಯರು ಸಂಕ್ಷಿಪ್ತ ವರದಿ ಹಾಗು ಸಂದೇಶಗಳನ್ನು ಓದಿ ಹೇಳಿದರು. ಡಾ| ಟಿ. ಎಂ. ಎ. ಪೈಯವರು ಸ್ವಾಗತ ಭಾಷಣ ಮಾಡುತ್ತ, ಕೊಲೇಜು ಸ್ಥಾಪಿಸುವಲ್ಲಿ ಮೂಡಬಿದ್ರೆಯ ಜನತೆ ಪ್ರದರ್ಶಿಸಿದ ಉತ್ಸಾಹ, ಕಾರ್ಯಶ್ರದ್ಧೆಗಳಿಗಾಗಿ ಅವರನ್ನು ಅಭಿನಂದಿಸಿದರು ಆಹಾರ ಸಮಸ್ಯೆಯು ಎಲ್ಲೆಲ್ಲೂ ಕರಾಳರೂಪ ತಾಳಿರುವ ಈ ಕಾಲದಲ್ಲಿ ಶಾಸ್ತ್ರೀಯವಾಗಿ ವ್ಯವಸಾಯ ಮಾಡಿ ಕೃಷಿ ಉತ್ಪನ್ನವನ್ನು ಹೆಚ್ಚಿಸಬಲ್ಲ ವ್ಯವಸಾಯ ತಜ್ಞರನ್ನು ಸಿದ್ಧಪಡಿಸಬಲ್ಲ ವಿದ್ಯಾಸಂಸ್ಥೆಗಳು ಹೆಚ್ಚಬೇಕೆಂದು ಶ್ರೀ ನಿಜಲಿಂಗಪ್ಪನವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಹೇಳಿದರು. ಶ್ರೇಷ್ಠ ಮಹಾಪುರುಷನ ಹೆಸರಲ್ಲಿ ಸ್ಥಾಪಿಸಲ್ಪಟ್ಟ ಈ ಕೊಲೇಜು ಪ್ರಗತಿಪಥದಲ್ಲಿ ಸಾಗಿ, ಸ್ಥಳೀಯ ಜನರ ಶೈಕ್ಷಣಿಕ ಆವಶ್ಯಕತೆಗಳನ್ನು ಪೂರೈಸುವಂತಾಗಲೆಂದು ಅಧ್ಯಕ್ಷತೆ ವಹಿಸಿದ್ದ ಮೈಸೂರು ರಾಜ್ಯದ ಅಭಿವೃದ್ಧಿ, ಪಂಚಾಯುತ್ ರಾಜ್ಯ ಮತ್ತು ಪೌರ ಆಡಳಿತ ಸಚಿವ ಶ್ರೀ ಆರ್. ಎಂ ಪಾಟೀಲರು ಹಾರೈಸಿದರು. ಕೊನೆಯಲ್ಲಿ ಶ್ರೀ ಎಸ್. ಡಿ. ಸಾಮ್ರಾಜ್ಯ ಎಂ. ಎಲ್. ಎ ಅವರು ಧನ್ಯವಾದಗಳನ್ನರ್ಪಿಸಿದರು.

## ಲಾಯನ್ಸ್ ಕ್ಲಬ್ಬಿನ ಝೋನಲ್ ಸಮ್ಮೇಳನ

ಉಡುಪಿ ಲಾಯನ್ಸ್ ಕ್ಲಬ್ಬಿನ ಝೋನಲ್ ಸಮ್ಮೇಳನವು ಕಳೆದ ತಾ 27ರಂದು ಉಡುಪಿಯಲ್ಲಿ ನಡೆಯಿತು. ಈ ಸಮ್ಮೇಳನಕ್ಕೆ ಮಂಗಳೂರು, ಮಡಿಕೇರಿ, ಕಾಸರಗೋಡುಗಳಿಂದ ಲಾಯನ್ಸ್ ಪ್ರತಿನಿಧಿಗಳು ಬಂದಿದ್ದು, ಸಮಾರಂಭವು ಉಡುಪಿ ಪಿ. ಡಬ್ಲ್ಯು ಡಿ ಪ್ರವಾಸಿ ಮಂದಿರದಲ್ಲಿ ಜರಗಿತ್ತು.

ಸಮ್ಮೇಳನವನ್ನು ಉದ್ಘಾಟಿಸಿದ ಶ್ರೀ ಟಿ ಎ. ಪೈಯವರು, 'ಜನರ ಜೀವನ ಮಟ್ಟವನ್ನು ಹೆಚ್ಚಿಸುವುದರಿಂದ ಅವರ ಜೀವನಾವಶ್ಯಕತೆಗಳನ್ನು ಶೀಘ್ರ ನೆರವೇರಿಸಿಕೊಡುವುದರಿಂದ ಮಾತ್ರ ಯೋಜನೆಯು ಸಾರ್ಥಕವಾಗಬಲ್ಲುದಲ್ಲದೆ ಕೇವಲ ಯೋಜನೆ ಮತ್ತು ಅಂಕಿ-ಸಂಖ್ಯೆಗಳಿಂದ ನಾವು ಬದುಕಿರಲು ಸಾಧ್ಯವಿಲ್ಲ. ಜನಸಾಮಾನ್ಯರಿಗೆ—ಕೃಷಿಕರಿಗೆ—ಅವರ ಬಳಕೆಯ ವಸ್ತುಗಳು ಮಾರುಕಟ್ಟೆಯಲ್ಲಿ ನ್ಯಾಯ ಬೆಲೆಗೆ ದೊರಕುತ್ತಿವೆಯೇ ಎಂಬುದರ ಕಡೆಗೆ ನಾವು ಗಮನ ಕೊಡಬೇಕು', ಎನ್ನುತ್ತ ಗಡಿಸಮಸ್ಯೆ ರೂಪಾಯಿ ಅಪಮೌಲ್ಯದಿಂದುಂಟಾದ ಪರಿಸ್ಥಿತಿ ಇವುಗಳನ್ನು ಚರ್ಚಿಸಿದರು.

ಟೈಮ್ಸ್ ಆಫ್ ಇಂಡಿಯಾ ಆಂಗ್ಲ ದೈನಿಕದ ಪ್ಯಾರೀಸ್ ಪ್ರತಿನಿಧಿ ಶ್ರೀ ಎಂ. ವಿ. ಕಾಮತರು ಲಾಯನ್ಸ್ ಕ್ಲಬ್ಬಿನವರು ಪ್ರಕಟಿಸಿದ ಸ್ಮಾರಕ ಸಂಚಿಕೆಯನ್ನು ಉದ್ಘಾಟಿಸಿದರು. ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ ರೂಪಾಯಿಯ ಮೌಲ್ಯಛೇದನದ ಗುಣಾವಗುಣಗಳ ಕುರಿತು ಚರ್ಚಿಸಿದುದಲ್ಲದೆ, ಚುನಾವಣೆಗೆ ನಿಲ್ಲತಕ್ಕ ಹುರಿಯಾಳುಗಳಿಗೆ ಎಂಟು ಅಂಶಗಳ ಚುನಾವಣಾ ಘೋಷಣೆಯನ್ನೂ ವಿವರಿಸಿದರು.

ಕಾಸರಗೋಡು ಲಾಯನ್ಸ್ ಕ್ಲಬ್ ಪರವಾಗಿ ಶ್ರೀ ಕೆ. ಪಿ. ಮಾಧವರಾಯರು, ಮಂಗಳೂರು ಲಾಯನ್ಸ್ ಕ್ಲಬ್ ಪರವಾಗಿ ಡಾ| ಬಾಳಪ್ಪ ಶೆಟ್ಟರೂ ಮಾತನಾಡಿದರು.

ಇದೇ ಸಂದರ್ಭದಲ್ಲಿ ಮುಂದಿನ ವರ್ಷಕ್ಕೆ (ಜುಲೈಯಿಂದ) ಉಡುಪಿ ಲಾಯನ್ಸ್ ಕ್ಲಬ್ಬಿನ ಅಧ್ಯಕ್ಷರಾಗಿ ಆಯ್ಕೆಹೊಂದಿದ ಶ್ರೀ ಎಸ್ ವಿ ಕಾಮತರಿಗೆ ಪ್ರಸಕ್ತ ಅಧ್ಯಕ್ಷ ಶ್ರೀ ಯು. ಕೆ. ಕಿಣಿಯವರು ಅಧಿಕಾರ ವಹಿಸಿಕೊಟ್ಟರು.

ಉಡುಪಿ ಎಂ. ಜಿ ಎಂ. ಕೊಲೆಜಿಗೆ ಉಡುಪಿ ಲಾಯನ್ಸ್ ಕ್ಲಬ್ ಮೂಲಕ ದಿ| ಯು. ಎಸ್. ಮಲ್ಯರ ಸ್ಮಾರಕಾರ್ಥ ರೂ. 1000, ಕಟಪಾಡಿ ಎಸ್. ವಿ. ಎಸ್. ಹೈಸ್ಕೂಲಿಗೆ ದಿ| ಪಾಂಗಾಳ ಲಕ್ಷ್ಮೀನಾರಾಯಣ ನಾಯ್ಕರ ಸ್ಮಾರಕಾರ್ಥ ರೂ. 500 ಮತ್ತು ಉಡುಪಿ ಕ್ರಿಶ್ಚನ್ ಹೈಸ್ಕೂಲಿಗೆ ದಿ| ಎಸ್. ಇ. ಸಾಲೀಸ್ ಅವರ ಸ್ಮಾರಕಾರ್ಥ ರೂ. 500ರ ಸ್ಕಾಲರ್ ಶಿಪ್‌ಗಳನ್ನು ಈ ಸಂದರ್ಭದಲ್ಲೇ ವಿತರಣೆ ಮಾಡಲಾಯಿತು.

## ಮೂಡಬಿದ್ರೆ ತಾಲೂಕು ರಚನೆಯ ಕೇಳಿಕೆ

ಮಹಾವೀರ ಕೊಲೇಜಿನ ನೂತನ ಕಟ್ಟಡದ ಉದ್ಘಾಟನೆಗಾಗಿ ಮೂಡಬಿದ್ರೆಗೆ ಆಗಮಿಸಿದ ಮೈಸೂರು ರಾಜ್ಯದ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರಲ್ಲಿ, ಮೂಡಬಿದ್ರೆಯಲ್ಲಿ ಪ್ರತ್ಯೇಕ ತಾಲೂಕು ರಚನೆಯಾಗಬೇಕೆಂಬ ವಿನಂತಿಯನ್ನು ಶ್ರೀ ಎಸ್. ಡಿ. ಸಾಮ್ರಾಜ್ಯ ಎಂ. ಎಲ್. ಎ. ಅವರು ಮಂಡಿಸಿರುವರಾಗಿ ಕೇಳಿಬರುತ್ತದೆ. ಈ ಮೊದಲು ಮೂಡಬಿದ್ರೆಯು ತಾಲೂಕು ಕೇಂದ್ರವಾಗಿದ್ದ ವಿಚಾರ, ಸುಮಾರು 84 ಸಾವಿರಕ್ಕೂ ಮಿಕ್ಕಿ ಜನಸಂಖ್ಯೆಯುಳ್ಳ ಮೂಡಬಿದ್ರೆ ಮತ್ತು ಆಸುಪಾಸಿನ ಗ್ರಾಮಗಳನ್ನು ಸೇರಿಸಿ ಹೊಸ ತಾಲೂಕು ರಚಿಸಬೇಕಾದ ಆವಶ್ಯಕತೆಯನ್ನು ಶ್ರೀ ಸಾಮ್ರಾಜ್ಯರು ಮುಖ್ಯಮಂತ್ರಿಯವರಿಗೆ ಮನಗಾಣಿಸಿರುವರಾಗಿಯೂ ತಿಳಿಯಲಾಗಿದೆ.

## ಸರ್ವ ಪ್ರಥಮ ಉತ್ತೀರ್ಣತೆ

ಮೈಸೂರು ಸರಕಾರದವರು ಕಳೆದ ಏಪ್ರಿಲ್‌ದಲ್ಲಿ ನಡೆಸಿದ ಕಲಾ ಮಧ್ಯಮ ಪರೀಕ್ಷೆಯಲ್ಲಿ ಉಡುಪಿ ಚಿತ್ರ ಕುಟೀರದ ಶ್ರೀ ಶ್ರೀಪತಿರಾಯರು ರಾಜ್ಯದಲ್ಲಿ ಸರ್ವ ಪ್ರಥಮರಾಗಿ ಉತ್ತೀರ್ಣರಾಗಿರುವರು. ಸರಕಾರವು ಕೊಡುವ ಪ್ರೋತ್ಸಾಹಕ ನಗದು ಬಹುಮಾನಕ್ಕೆ ಅವರು ಅರ್ಹರಾಗಿರುವರಾಗಿಯೂ ತಿಳಿಯಲಾಗಿದೆ.


## ಕ್ರೀಡಾ ಸಮಿತಿ ಸಭೆ

ಮಂಗಳೂರು ನಗರ ಸಭೆಯ ಶತಮಾನೋತ್ಸವ ಪಂದ್ಯಾಟ ಸಮಿತಿಯ ಸಭೆಯು ಇತ್ತೀಚೆಗೆ ನಗರಸಭಾಪತಿ ಶ್ರೀ ಜಿ. ಸೋಮಶೇಖರ ರಾಯರ ಅಧ್ಯಕ್ಷತೆಯಲ್ಲಿ ಜರಗಿದಾಗ, ಶತಮಾನೋತ್ಸವಕ್ಕೆ ಸಂಬಂಧಪಟ್ಟ ಕ್ರಿಕೆಟ್, ಫುಟ್ ಬೊಲ್, ಟೆನ್ನಿಸ್, ಕಬಡಿ, ಹೊಕ್ಕಿ, ವೊಲಿಬೊಲ್, ಕೋಕೋ ಮತ್ತು ಥ್ರೋಬಾಲ್ ಪಂದ್ಯಾಟಗಳನ್ನು ಜರಗಿಸುವ ನಿರ್ಣಯವಾಗಿ ವಿಜಯಿ ಪಂಗಡಗಳಿಗೆ ಕೊಡುವ ಪಾರಿತೋಷಕಗಳ ಮತ್ತು ಪರ್ಯಾಯ ಪಾರಿತೋಷಗಳು ನಿಶ್ಚೈಸಲ್ಪಟ್ಟುವು. ಈ ಪಂದ್ಯಾಟಗಳನ್ನು ಏರ್ಪಡಿಸಲು ಅಗತ್ಯವುಳ್ಳ ಕಾರ್ಯಕ್ರಮಗಳನ್ನು ಕೈಕೊಳ್ಳಲು ಈ ಕೆಳಗಿನ ಕ್ರಿಯಾಸಮಿತಿಯೊಂದನ್ನು ರಚಿಸಲಾಯಿತು:

ಸರ್ವಶ್ರೀ ಎ. ಆನಂದ ಶೆಟ್ಟಿ (ಕನ್ವೀನರ್), ಕವ ಲಾಕ್ಷ ಪೈ, ಎಂ. ಲಿಂಗಪ್ಪ, ನಾರಾಯಣ ರಾವ್, ಎನ್. ಪಿ. ಮೆಂಡೆನ್, ಎ. ಜೆ. ಬೆಳಗಾಮಿ, ಶಿವಾನಂದ ಸುವರ್ಣ, ಶ್ರೀಮತಿ ಬೊಲಯನ್ ಪೀಟೊ, ಶ್ರೀಮತಿ ವಾಸಂತಿ, ಶ್ರೀಮತಿ ಸುನಂದಾ ಮತ್ತು ಶ್ರೀ ಗೋಪಾಲಕೃಷ್ಣ.

## ಉಡ್ಪಿನೀರು ಸರಬರಾಜು ಯೋಜನೆ

ಮೈಸೂರು ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಕಳೆದ ತಾ 27ರಂದು ಉಡುಪಿಗೆ ಆಗಮಿಸಿ, ಉಡುಪಿಯ ಮುನಿಸ್ಸಿಪಲ್ ಸದಸ್ಯರೊಡನೆ ಉಡ್ಪಿ ನಗರಸಭೆಯ ನೀರ ಸರಬರಾಯಿ ಯೋಜನೆಯ ಕುರಿತು ಸಮಾಲೋಚನೆ ನಡೆಸಿದರು. ಉಡುಪಿ, ಮಣಿಪಾಲ ಮತ್ತು ಮಲ್ಪೆಯನ್ನು ಸೇರಿಸಿಕೊಂಡೇ ಯೋಜನೆ ಕೈಗೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಯವರು ಸಲಹೆ ಮಾಡಿದ್ದಲ್ಲದೆ, ಉಪ್ಪುನೀರನ್ನು ತಡೆಗಟ್ಟಲು ರಚಿಸಬೇಕಾದ ಕಟ್ಟೆಗಾಗಿ 15 ಲಕ್ಷ ರೂಪಾಯಿ ಸಾಲ ನೀಡುವ ಭರವಸೆಯಿತ್ತಿರುವರು.




## ಜಿಲ್ಲೆಯ ವಾರ್ತಾಸಾರ

ಕಳೆದ ತಾ 21ರಂದು ಮಂಜಾನೆ ಮಂಗಳೂರು ಕದ್ರಿಯ ... ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಜಗಲಿಯಲ್ಲಿ ಸುಮಾರು 1 ತಿಂಗಳ ಪ್ರಾಯದ ಒಂದು ಅನಾಥ ಶಿಶುವು ದೊರೆತಿದ್ದು, ರಿಮಾಂಡ್ ಹೋಮ್‌ದವರು ಅದನ್ನು ಪಡೆದು ಕೋರ್ಟಿನ ಪರವಾನಗಿಯಂತೆ ಮಂಗಳೂರಿನ ಪ್ರಸಿದ್ಧ ಅನಾಥಾಶ್ರಮಗಳಲ್ಲೊಂದಾದ ಸ್ವಾಮಿ ಶ್ರದ್ಧಾನಂದ ಸೇವಾಶ್ರಮಕ್ಕೆ ಒಪ್ಪಿಸಿರುವರಾಗಿ ತಿಳಿಯಲಾಗಿದೆ.

o o o

ಪುತ್ತೂರು ಸೈಂಟ್ ಫಿಲೋಮಿನಾ ಹೈಸ್ಕೂಲಿನಲ್ಲಿ ಶಾಲಾ ವಿದ್ಯಾರ್ಥಿಗಳಿಗಾಗಿ ನಾಟಕ ತರಬೇತಿಯ ಕ್ಲಾಸುಗಳನ್ನು ಹೊಸತಾಗಿ ಆರಂಭಿಸಲಾಗಿದ್ದು, ಶ್ರೀ ಆದ್ಯ ರಂಗಾಚಾರ್ಯರ ನಿರ್ದೇಶನದಲ್ಲಿ ಧಾರವಾಡ ತರಬೇತಿ ಕೇಂದ್ರದಲ್ಲಿ ತರಬೇತುಗೊಂಡು ಬಂದಿರುವ ಶ್ರೀ ಕೆ. ವಿಶ್ವನಾಥ ರೈಗಳು ಅಜಗ್ಗಿ ಶಿಕ್ಷಕರಾಗಿ ನೇಮಕಗೊಂಡಿರುವರಾಗಿ ತಿಳಿಯಲಾಗಿದೆ

o o o

ಕಳೆದ ಸುಮಾರು 22 ವರ್ಷಗಳಿಂದ ವಿದ್ಯಾಕ್ಷೇತ್ರದಲ್ಲಿ ದುಡಿಯುತ್ತಿರುವ ಕಿನ್ನಿಗೋಳಿಯ ಪೊಂಪೈ ಪ್ರೌಢ ಶಾಲೆಯಲ್ಲಿ ಹನ್ನೊಂದನೇ ತರಗತಿ ಉದ್ಘಾಟಿಸುವ ಸಮಾರಂಭವು ಮಂಗಳೂರಿನ ಪೂಜ್ಯ ಬಿಶಪರಾದ ರೆ| ಫಾ| ಬೇಸಿಲ್ ಸಲ್ವಡೋರ್ ಡಿ ಸೋಜಾರವರಿಂದ ನೆರವೇರಿತು. ಮೈಸೂರು ವಿಧಾನಸಭಾ ಸದಸ್ಯ ಶ್ರೀ ಮಣೇಲ ಶ್ರೀನಿವಾಸ ನಾಯ್ಕರು ಸಭಾಧ್ಯಕ್ಷತೆ ವಹಿಸಿದ್ದರು.

o o o

ಮಂಗಳೂರು ಜೂನಿಯರ್ ಚೇಂಬರ್ಸ್‌ರವರು "ಧಾರಣೆ ಮಟ್ಟ ಉಳಿಸಿರಿ" ಎಂಬ ಚಳವಳವನ್ನು ಕಳೆದ ತಾ 23ರಂದು ದ. ಕ. ಜಿಲ್ಲಾಧಿಕಾರಿ ಶ್ರೀ ಎಚ್. ಎಲ್. ನಾಗೇಗೌಡರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾಡಿದ ಭಾಷಣದಲ್ಲಿ ಜಿಲ್ಲಾಧಿಕಾರಿಗಳು ರೂಪಾಯಿ ಮೌಲ್ಯಛೇದನದ ಸರಕಾರೀ ಧೋರಣೆಯನ್ನನುಸರಿಸಿ, ಜೀವನಾವಶ್ಯಕ ಸಾಮಗ್ರಿಗಳ ಬೆಲೆ ಏರಿಸುವ ಪ್ರವೃತ್ತಿಯನ್ನು ತೀವ್ರ ಖಂಡಿಸಿದುದಲ್ಲದೆ, ಅವಶ್ಯ ಬಿದ್ದಲ್ಲಿ ಇಂತಹ ಸಮಾಜಘಾತುಕ ವ್ಯಾಪಾರಿಗಳ ವಿರುದ್ಧ ಉಗ್ರ ಕ್ರಮ ಕೈಗೊಳ್ಳುವುದರ ಕುರಿತೂ ಎಚ್ಚರಿಕೆ ನೀಡಿದರು ಅಧಿಕ ಬೆಲೆ ತೆರಲು ನಿರಾಕರಿಸುವಂತೆ ಗ್ರಾಹಕರನ್ನು ಹುರಿದುಂಬಿಸಲು ಜೂನಿಯರ್ ಚೇಂಬರ್ ಮುಂದೆ ಬಂದುದಕ್ಕೆ ಅವರು ಅಭಿನಂದಿಸಿದರು.

o o o

ಮಂಗಳೂರು ರೋಟರಿ ಕ್ಲಬ್ಬಿನ ಸಾಪ್ತಾಹಿಕ ಸಭೆಯು ತಾ 23ರಂದು ಸಿ. ಜಿ ಸಿ. ಪಿ ಸಿ ಸಭಾಭವನದಲ್ಲಿ ಜರಗಿದಾಗ, ಮಂಗಳೂರಿನ ಬಿಶಪರಾದ ರೆ| ಫಾ| ಬೇಸಿಲ್ ಡಿ. ಸೋಜಾರವರು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಪ್ರಗತಿಯಲ್ಲಿ ಗ್ರಾಮೀಣ ಜನರ ಅಭಿವೃದ್ಧಿಯ ಪಾತ್ರ ಎಂತಹದು ಎಂಬ ವಿಷಯದ ಮೇಲೆ ಯೋಗ್ಯ ಸಲಹಾತ್ಮಕ ಭಾಷಣವಿತ್ತರು.

o o o


ಮಂಗಳೂರಿನ ಪ್ರಮುಖ ಬೇಂಕ್ ಒಂದರಲ್ಲಿ ನೌಕರಿಯಲ್ಲಿದ್ದ 26 ವರ್ಷ ಪ್ರಾಯದ ವೆಂಕಟ್ರಾವ್ ಎಂಬವರ ಮೃತದೇಹವು ಮಂಗಳೂರು ಬಂದರದ ಲಾಂಚ್ ಜೆಟ್ಟಿಯ ಸಮೀಪ ನದಿಯಲ್ಲಿ ತೇಲುತ್ತಿದ್ದುದು ಕಳೆದ ತಾ 22ರಂದು ಅಪರಾಹ್ನ ವರದಿಯಾಗಿದೆ. ಶವದ ಪೋಸ್ಟ್‌ಮಾರ್ಟಮ್ ನಡೆದಿರುವುದು.

## ಹಾಯರ್ ಸೆಕೆಂಡರಿ ಶಾಲೆ ಉದ್ಘಾಟನೆ

ಹೆಜಮಾಡಿಯ ಬೋರ್ಡು ವಿವಿಧೋದ್ದೇಶ ಹಾಯರ್ ಸೆಕೆಂಡರಿ ಶಾಲೆಯ 11ನೇ ತರಗತಿಯ ಉದ್ಘಾಟನೆಯು ಕಳೆದ ತಾ 24ರಂದು ಮೈಸೂರು ವಿಧಾನಸಭಾ ಸದಸ್ಯ ಶ್ರೀ ಮಣೇಲ ಶ್ರೀನಿವಾಸ ನಾಯ್ಕರಿಂದ ನಡೆಯಿತು. ವಿಧಾನ ಪರಿಷತ್ ಸದಸ್ಯ ಶ್ರೀ ಕೆ ಸೂರ್ಯನಾರಾಯಣ ಅಡಿಗರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು

ನಾಟಕ ವಿಮರ್ಶೆ-

# 'ಸಹೋದರಾ'



ಶ್ರೀ ಜೆ ಎನ್. ಸಂಜೀವ

ಐಕ್ಯಕರ್ನಾಟಕ ನಾಟಕಸಂಘವನ್ನು ಹಲವು ವರ್ಷಗಳಿಂದ, ಶಿಸ್ತಿನಿಂದ ನಡೆಸಿಕೊಂಡು ಬರುತ್ತಿರುವರು. ಶ್ರೀ ಸಂಜೀವನವರು ಮಂಗಳೂರು ನಗರಸಭಾಸದಸ್ಯರೂ ಆಗಿರುತ್ತಾರೆ.

ಅಭಿನಯಿಸಿದವರು:

ಐಕ್ಯ ಕರ್ಣಾಟಕ ನಾಟಕ ಸಭಾ.

ಸ್ಥಳ: ಡೊನ್‌ಬೊಸ್ಕೊ ನಾಟಕ ಮಂದಿರ, ಮಂಗಳೂರು.

[ಈ ನಾಟಕ ವಿಮರ್ಶೆಯು "ಪ್ರಭಾತ"ದ ಕಳೆದ ವಾರದ ಸಂಚಿಕೆಗಾಗಿ ಬರೆದುದು, ತಡವಾಗಿ ಕೈಸೇರಿದುದರಿಂದ, ಈ ವಾರದ ಸಂಚಿಕೆಯಲ್ಲಿ ಪ್ರಕಟವಾಗಿದೆ.

ಸಂ| ಪ್ರಭಾತ.]

"ಜಯ ಜಯ ವರ ವೀಣಾಪಾಣಿ......... ಯಶವನೀಡುತ ಪೊರೆಯೆ ತಾಯೆ" ಎಂಬ ಭಕ್ತಿಯುತವಾದ ಸುಶ್ರಾವ್ಯ ಪ್ರಾರ್ಥನೆ ಕೊನೆಗೊಳ್ಳುವುದರೊಂದಿಗೆ ಅಂಕಪರದೆ, ಬದಿಗೆ ಸರಿದು, ಮಂಗಳೂರಿನ ಐಕ್ಯ ಕರ್ನಾಟಕ ಸಂಗೀತ ನಾಟಕ ಸಭಾದವರ "ಸಹೋದರಾ" ನಾಟಕದ ಪ್ರಥಮ ದೃಶ್ಯಕ್ಕೆ ಅನುವುಮಾಡಿಕೊಟ್ಟಿತು

ಐಕ್ಯ ಕರ್ನಾಟಕ ಸಂಗೀತ ನಾಟಕ ಸಭಾದವರ ಪರಂಪರೆ ಉಜ್ವಲವಾದುದು; ಉಲ್ಲೇಖನೀಯವಾದುದು. ಸಮಾಜ ಸೇವಾ ಧುರಂಧರರಾದ ಶ್ರೀ ಜೆ ಯೆನ್. ಸಂಜೀವ, ಇವರ ಮುಂದಾಳುತನದಲ್ಲಿ ಹುಟ್ಟಿಕೊಂಡ ಈ ಸಂಸ್ಥೆ 1949ರಿಂದ ಸುಮಾರು ಹದಿನೇಳಕ್ಕೆ ಮಿಕ್ಕಿದ ನಾಟಕಗಳನ್ನು ನೂರಿಪ್ಪತ್ತಕ್ಕೂ ಹೆಚ್ಚು ಬಾರಿ, ಜಿಲ್ಲೆಯಾದ್ಯಂತ ಮಾತ್ರವಲ್ಲ ಜಿಲ್ಲೆಯ ಹೊರಗೂ ಅಭಿನಯಿಸಿ ಜನಮೆಚ್ಚುಗೆಯನ್ನು ಪಡೆದು, ಮಂಗಳೂರಿಗೆ ಕೀರ್ತಿಯನ್ನು ತಂದಿದೆ. ಮಾತ್ರವಲ್ಲ, ನಾಟಕಸ್ಪರ್ಧೆಗಳಲ್ಲಿ ಇವರ ನಾಟಕಕ್ಕೆ ಎರಡು ಬಾರಿ ಬಹುಮಾನ ಸಿಕ್ಕಿರುತ್ತದೆ. ಉತ್ತಮ ಅಭಿನಯಕ್ಕಾಗಿ, ಉತ್ತಮ ಹಾಡುಗಾರಿಕೆಗಾಗಿ ಈ ಸಂಘದ ನಟರುಗಳಾದ, ಶ್ರೀ ಕೆ. ಸೀತಾರಾಮ ಕರುಣಾಕರ್ ಮತ್ತು ಶ್ರೀ ಜೆ. ಯೆನ್. ಸಂಜೀವ, ಇವರುಗಳು ಅನುಕ್ರಮವಾಗಿ ದ್ವಿತೀಯ ಮತ್ತು ಪ್ರಥಮ ಬಹುಮಾನಗಳನ್ನು ಪಡೆದಿರುತ್ತಾರೆ. ಈ ನಟರುಗಳಲ್ಲದೆ ಇತರ ಅನುಭವೀ ನಟರುಗಳೂ ಇದೇ ಜೂನ್ ತಿಂಗಳ 19ನೇ ತಾರೀಕಿನಂದು ಮಂಗಳೂರಿನ ಡೊನ್‌ಬೊಸ್ಕೋ ಹಾಲ್‌ನಲ್ಲಿ ಅಭಿನಯಿಸಲಾದ "ಸಹೋದರಾ" ನಾಟಕದ ಯಶಸ್ಸಿಗೆ ಕಾರಣರಾದರು.

ಆಧುನಿಕ ಸಂಸಾರಗಳ ಅಭಿವೃದ್ಧಿಗೆ ಆತಂಕವಾಗಿ, ಗೆದ್ದಲೆಯಂತೆ ಪೀಡಿಸುತ್ತಿರುವ ಕೆಲವೊಂದು ಹೇಯ ಸಮಸ್ಯೆಗಳನ್ನು ಬಯಲಿಗೆಳೆದು ಅವುಗಳಿಂದಾಗುವ ಅನಾಹುತಗಳು ಹೇಗೆ ಕೊನೆಯಲ್ಲಿ ವಿವೇಕಿಗಳಿಂದ ಪರಿಹಾರವಾಗಿ, ಸಂಸಾರ ನಿರಾತಂಕವಾಗಿ ಸಾಗುವುದು ಎಂಬುದರ ಚಿತ್ರೀಕರಣ ಈ ನಾಟಕದಲ್ಲಿದೆ. ಅಭಿನಯಿಸಲು ಕಷ್ಟ, ಆದರೂ ನುರಿತ ನಟರಿಂದ ಇದು ಸಾಧ್ಯವಾಗಿದೆ.

ನಾಟಕದಲ್ಲಿ ಕೆಲವು ತಾಂತ್ರಿಕ ದೋಷಗಳಿವೆ ಪ್ರಥಮ ದೃಶ್ಯದಲ್ಲೊಮ್ಮೆ ನಾಟಕದ ಎಲ್ಲಾ ಪಾತ್ರಗಳು ಬರುವಂತೆ ಮಾಡಿ ಕೊನೆಯ ದೃಶ್ಯದಲ್ಲಿ ಅವೇ ಪಾತ್ರಗಳು ಒಂದುಗೂಡುವಂತೆ ಮಾಡುವ, ಲೇಖಕರ ಧ್ಯೇಯದಿಂದಾಗಿ, ಕೆಲವೊಂದು ಅಸ್ವಾಭಾವಿಕ ಘಟನೆಗಳು ಕೊನೆಯ ದೃಶ್ಯದಲ್ಲಿ ಎದ್ದು ತೋರುವಂತಾಗಿದೆ. ಲಲಿತರಗಳೆಯಲ್ಲಿ, ಕೆಲವೊಂದು ಮಾತುಗಳು ಇವೆ. ನಟರು ಇಂತಿಂತ ಮಾತುಗಳನ್ನು ವಿರಳ ವಿರಳವಾಗಿ ಸ್ವರಭಾರದ ಸಮೇತ ಹೇಳಲು ಕೆಲವೆಡೆ ಅಸಮರ್ಥರಾದುದರಿಂದ, ಪ್ರೇಕ್ಷಕರಿಗೆ ಈ ಮಾತುಗಳನ್ನು ತಿಳಿದುಕೊಳ್ಳಲು ತೊಡಕಾಗಿದೆ. ನಟರು ಸ್ವತಂತ್ರ ಮಾತುಗಳ ಅರ್ಥವನ್ನು ಅರಗಿಕೊಂಡಿರಬೇಕು. ಆಗ ಮಾತ್ರ ಇತರರು ತಿಳಿಯುವಂತೆ ಅವರಿಂದ ಮಾತಾಡಲು ಸಾಧ್ಯ.

ನೂರಾರು ನಾಟಕಗಳಲ್ಲಿ ಅಭಿನಯಿಸಿದ ಅನುಭವ ಪುರುಷೋತ್ತಮ ಮೂರೂರು ಇವರದ್ದು. ಯಾವುದೇ ಪಾತ್ರವನ್ನಾಗಲೀ ಯೋಗ್ಯರೀತಿಯಲ್ಲಿ ನಿರ್ವಹಿಸಲು ಸಮರ್ಥರಾದ ಮಂಗಳೂರಿನ ಕೆಲವೇ ನಟರುಗಳಲ್ಲಿ ಶ್ರೀಯುತರೂ ಓರ್ವರು. ಇವರ ಪ್ರತಿಭೆ, ಸಾಮರ್ಥ್ಯ ಶ್ಲಾಘನೀಯವಾದುದು. ಇಡೀ ನಾಟಕವನ್ನು ನಿಯಂತ್ರಣದಲ್ಲಿ ಇಟ್ಟುಕೊಂಡಂತೆ ಈ ನಾಟಕದ 'ಗ್ಯಾರಂಟೀ' ಎಂಬ ಪಾತ್ರವನ್ನು ನಿರ್ವಹಿಸಿರುತ್ತಾರೆ. ಯಾರಾದರೂ ಚಲಚಿತ್ರ ನಿರ್ಮಾಪಕರು ಇವರ ಮೇಲೊಂದು ದೃಷ್ಟಿಯಿರಿಸುವುದರಿಂದ ಕಲಾವಿದನೋರ್ವನಿಗೆ ತಕ್ಕ ಪ್ರೋತ್ಸಾಹ ಕೊಟ್ಟಂತಾಗುವುದು.

ಬಸವರಾಜನ ಪಾತ್ರದಲ್ಲಿ ಸೀತಾರಾಮ ಕರುಣಾಕರ್, ಅಶೋಕನಾಗಿ ಹೆಚ್. ಶ್ಯಾಮರಾವ್, ರಾಜಕುಮಾರನಾಗಿ ಬಿ ವಿಠ್ಠಲರಾವ್, ಲಿಂಗರಾಜ ಮತ್ತು ಸಾಹುಕಾರನಾಗಿ ಬಿ. ರಾಮಪ್ಪ ಕರ್ಕೇರ, ಬಸುವನಾಗಿ ಯಂ. ಆರ್. ಕಾಮತ್, ಸುಧಾಕರನಾಗಿ ಜೆ. ಎನ್. ಸಂಜೀವ, ತೇಜಸ್ವಿಯಾಗಿ ಕುಮಾರ ಪಿ. ವಸಂತ ರಾವ್, ವಿದ್ಯಾರ್ಥಿಯಾಗಿ ಎ. ಪ್ರಕಾಶ ಕುಮಾರ್, ಪೂಜಾರಿಯಾಗಿ ಎ. ಎಂ. ಬಂಗೇರ, ನೀಲಾವತಿಯಾಗಿ ಜಯರಾಮ ಶೆಟ್ಟಿ ಸುಧೇಕರ್, ಕಲಾವತಿಯಾಗಿ ಪೀಟರ್ ಫುರ್ತಾದೋ ಬಾಲಿಯಾಗಿ ಬಿ. ಯಸ್. ಯನ್. ಹೊಳ್ಳ, ಮಾಲತಿಯಾಗಿ ಕುಮಾರಿ ಯಶೋಧರಾ, ಅಭಿನಯಿಸಿರುತ್ತಾರೆ.

ಸೀತಾರಾಮ ಕರುಣಾಕರ್, ಶ್ಯಾಮರಾವ್, ಯಂ. ಆರ್. ಕಾಮತ್, ಜೆ. ಯನ್. ಸಂಜೀವ, ಎ. ಯಂ. ಬಂಗೇರ, ಜಯರಾಮ ಶೆಟ್ಟಿ ಸುಧೇಕರ್—ಇವರ ಅಭಿನಯ ಉತ್ತಮವಾಗಿತ್ತು. ಸುಶ್ರಾವ್ಯವಾಗಿ ಹಾಡಬಲ್ಲ ವಿಠ್ಠಲರಾಯರ ಮುಖದಲ್ಲಿ ಭಾವವ್ಯತ್ಯಾಸಗಳು ಇನ್ನಷ್ಟು ಎದ್ದುತೋರಬೇಕು. ರಾಮಪ್ಪ ಕರ್ಕೇರರ ಅಭಿನಯದಲ್ಲಿ ತುಂಬಾ ಸುಧಾರಣೆಯಾಗಬೇಕು. ಪೀಟರ್ ಫುರ್ತಾದೋ ಇವರ ಉಚ್ಚಾರಣೆ ಕೆಲವೆಡೆ ದೋಷಪೂರಿತವಾಗಿತ್ತು. ಅಭ್ಯಾಸಬಲದಿಂದ ಇದನ್ನು ತಿದ್ದಿಕೊಳ್ಳಲು ಸಾಧ್ಯವಿದೆ. ಹಾವಭಾವಗಳಲ್ಲಿಯೂ ಒಂದಿಷ್ಟು ಸುಧಾರಣೆಯಾಗಬೇಕು. ಹೊಳ್ಳರ ರೂಪು ಬೆಡಗು ಬಿನ್ನಾಣ ಇತರ ಅಭಿನಯ ಆಕರ್ಷಣೀಯವಾಗಿತ್ತು. ಆದರೆ ಮಾತುಗಳನ್ನು ಸ್ಪಷ್ಟವಾಗಿ ನಿರೂಪಿಸುವುದರ ಕಡೆಗೆ ಅವರು ಗಮನವಿತ್ತಂತೆ ತೋರುವುದಿಲ್ಲ. ಹುಚ್ಚಿಯಾದಾಗ ತಲೆಕೂದಲು, ಮುಖ ಮಲಿನವಾಗಿ ಪರಿವರ್ತನೆ ಹೊಂದಿತ್ತು. ಇದರೊಂದಿಗೆ ಉಟ್ಟ ಶೀರೆ ಮಲಿನವಾಗದೆ ಉಳಿದದ್ದು ಆಶ್ಚರ್ಯಕರ. ಕುಮಾರ ಪಿ. ವಸಂತ ರಾವ್ ಇವನು ಉತ್ತಮ ದಿಗ್ದರ್ಶನ ದೊರೆತರೆ ಸುಪ್ರಸಿದ್ಧ ನಟನಾಗಿ ಬೆಳೆದಾನು. ಏಕಮೇವಾದ್ವಿತೀಯ ನಟಿ ಕುಮಾರಿ ಯಶೋಧರಾ ಪ್ರತಿಭಾನ್ವಿತೆ ನಟಿ. ತನ್ನ ಮನಮೋಹಕ ಸೌಂದರ್ಯದಿಂದ, ನಟನಾ ವೈಖರಿಯಿಂದ ನಾಟಕಕ್ಕೆ ಕಳೆಯೇರಿಸಿದ್ದರು. ಕೆಲ ಪ್ರೇಕ್ಷಕರ ಅನಗತ್ಯವಾದ ಪ್ರತಿಕ್ರಿಯೆಯ ಕಡೆಗೆ ತಮ್ಮ ಗಮನವನ್ನು ಹರಿಸದೆ ತನ್ನ ಜವಾಬ್ದಾರಿಯನ್ನರಿತು, ಅಭಿನಯದಲ್ಲಿ ತಲ್ಲೀನೆಯಾಗಿರಬೇಕೆಂದು ಸಲಹೆ

ಜಿಲ್ಲೆಯ ಸುಪ್ರಸಿದ್ಧ ಸಂಗೀತ ವಿದ್ವಾಂಸರಾದ ಮಾಸ್ಟರ್ ಯಂ. ಎ ದೇವಾಡಿಗಾರರ ಸಂಗೀತ ಕರ್ಣಾನಂದಕರವಾಗಿತ್ತು. ಇವರ ಸಾಥಿಯಾಗಿ ಶ್ರೀ ಬಿ. ಎನ್. ಸುವರ್ಣ (ತಬ್ಲಾ) ಶ್ರೀ ಸುಂದರ್ (ಕ್ಲಾರ್‌ನಾಟ್) ತಮ್ಮ ಪಾಲಿನ ಕರ್ತವ್ಯವನ್ನು ಚೆನ್ನಾಗಿ ನಿರ್ವಹಿಸಿದ್ದಾರೆ. ರಂಗಸಜ್ಜಿಕೆಯೂ ತೃಪ್ತಿಕರವಾಗಿತ್ತು.

ಸರ್ವದೃಷ್ಟಿಯಿಂದ ನೋಡುವುದಿದ್ದರೆ, ಸೂಕ್ಷ್ಮದೃಷ್ಟಿಗೆ ಬೀಳಬಹುದಾದ ಮೇಲಿನ ಕೆಲವೊಂದು ಲೋಪದೋಷಗಳನ್ನು ಬಿಟ್ಟರೆ ಈ ನಾಟಕವು ಒಂದು ಶ್ರೇಷ್ಠ ಕಲಾಕೃತಿಯೆಂದು ಧಾರಾಳವಾಗಿ ಹೇಳಬಹುದು ಮಂಗಳೂರಲ್ಲಿ ವರ್ಷಂಪ್ರತಿ ನೂರಾರು ನಾಟಕಗಳಾಗುತ್ತಿವೆ. ಇವುಗಳಲ್ಲಿ ಕೆಲವೇ ನಾಟಕಗಳು ಮಾತ್ರ ಜನಮೆಚ್ಚುಗೆ ಪಡೆಯುತ್ತಿವೆ. ಅಂತಹ ಕೆಲವೇ ನಾಟಕಗಳಲ್ಲಿ ಈ "ಸಹೋದರಾ" ಒಂದು. ಸರ್ವರೂ ನೋಡಿ ಮೆಚ್ಚಲೇಬೇಕಾದ ನಾಟಕ. ಈ ಹಿಂದಿನಂತೆ ಪೇಟೆ, ಪಟ್ಟಣ, ಹಳ್ಳಿಗಳಲ್ಲೆಲ್ಲಾ ಈ ನಾಟಕವನ್ನು ಪ್ರದರ್ಶಿಸಿ ಜನಮೆಚ್ಚುಗೆಯನ್ನು ಪಡೆದು, ತನ್ನ ಉಜ್ವಲ ಪರಂಪರೆಯನ್ನು ಈ ನಾಟಕ ಸಭೆಯು ಉಳಿಸಿಕೊಳ್ಳುವುದರಲ್ಲಿ ಸಂದೇಹವಿಲ್ಲ. ಹಾಗಾಗಲಿ ಎಂದು ಹಾರೈಸುವೆ.

— ಕೀರ್ತಾನ ರಾಮಚಂದ್ರ

----

## ಶ್ರೀ ಮಂಜುನಾಥೇಶ್ವರ ಕೊಲೇಜ್ ಉದ್ಘಾಟನೆ

ಮನೋಹ್ಲಾದಕರವಾದ ವಾತಾವರಣವಿರುವ ಸಿದ್ಧವನದಲ್ಲಿ ಉಜಿರೆ ಮಂಜುನಾಥೇಶ್ವರ ಕೊಲೆಜಿನ ಉದ್ಘಾಟನೆಯು ಕಳೆದ ತಾ 26ರಂದು ಮೈಸೂರು ಮುಖ್ಯ ಮಂತ್ರಿ ಮಾನ್ಯ ಸಿದ್ಧವನ ಹಳ್ಳಿ ನಿಜಲಿಂಗಪ್ಪನವರಿಂದ ನಡೆಯಿತು. ಶ್ರೀ ಭಾಸ್ಕರಂ ಶೇಷಾಚಾರ್ಯರ ಪ್ರಾರ್ಥನೆಯಿಂದ ಕಾರ್ಯಕ್ರಮವು ಆರಂಭವಾಗಿ, ಶ್ರೀ ನರಸಿಂಹ ಭಟ್ಟರು ಕೊಲೇಜಿಗೆ ಸಂಬಂಧಿಸಿದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿಯನ್ನೊದಿದರು. ಶ್ರೀ ಡಿ. ರತ್ನವರ್ಮ ಹೆಗ್ಗಡೆಯವರು ಸ್ವಾಗತ ಭಾಷಣ ಮಾಡುತ್ತ, ಬೆಳ್ತಂಗಡಿ ತಾಲೂಕಿನ ಎಂಟು ಪ್ರೌಢ ಶಾಲೆಗಳಿಂದ ಪ್ರತೀ ವರ್ಷ ಸರಾಸರಿ 200 ವಿದ್ಯಾರ್ಥಿಗಳು ಎಸ್. ಎಸ್. ಎಲ್. ಸಿ ಪಾಸಾಗುತ್ತಿದ್ದು, ಅವರಿಗೆ ಶಿಕ್ಷಣ ಮುಂದುವರಿಸುವರೆ ಈ ಕೊಲೇಜ್ ಸಹಾಯಕವಾಗಲಿದೆಯಾಗಿ ತಿಳಿಸುತ್ತ ಸಂಸ್ಕೃತಾಭ್ಯಾಸ ನಡೆಸುತ್ತಿರುವವರಿಗೆ ಹಾಗೂ ವಿದ್ಯಾರ್ಥಿನಿಯರಿಗೆ ವಿಶೇಷ ಸ್ಕೊಲರ್‌ಶಿಪ್ ನೀಡಲಾಗುವುದೆಂದರು. ಶ್ರೀ ನಿಜಲಿಂಗಪ್ಪನವರು ತಮ್ಮ ಉದ್ಘಾಟನಾ ಭಾಷಣದಲ್ಲಿ, ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರನ ಅನುಗ್ರಹದಿಂದ ಸ್ಥಾಪಿಸಲಾದ ಈ ಕೊಲೇಜಿನಲ್ಲಿ ಕಲಿಯುವ ವಿದ್ಯಾರ್ಥಿಗಳು ತಮ್ಮ ಸಿದ್ಧಿಯನ್ನು ಸಾಧಿಸುವಲ್ಲಿ ಯಶಸ್ವಿಯಾಗಲೆಂದು ಹಾರೈಸಿ, ಕೊಲೇಜುಗಳಿಗಾಗಿ ಭವ್ಯ ಕಟ್ಟಡಗಳಿಗೆ ಹೆಚ್ಚು ಹಣವ್ಯಯ ಮಾಡದೆ, ಉತ್ತಮ ಪುಸ್ತಕ ಭಂಡಾರ ಮತ್ತಿತರ ಉಪಕರಣಗಳನ್ನು ಒದಗಿಸುವ ಕಡೆಗೆ ಹೆಚ್ಚಿನ ಗಮನ ಹರಿಸುವಂತೆ ಸಂಬಂಧಪಟ್ಟವರಲ್ಲಿ ಕೋರಿದರು. ಪಂಚಾಯತ್ ರಾಜ್ಯ ಮತ್ತು ಪೌರ ಆಡಳ್ತ ಸಚಿವ ಶ್ರೀ ಎರ್. ಎಂ. ಪಾಟೀಲರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಈ ಸಮಾರಂಭದಲ್ಲಿ ಶ್ರೀ ಜಿ. ಗೋಪಾಲ ಪೈಯವರು ನಾಲ್ವರು ಸದಸ್ಯರನ್ನೊಳಗೆಂಡ ಸಮಿತಿ ಸಿದ್ಧಪಡಿಸಿದ 'ಸೊವನೀರ್' ಒಂದನ್ನು ಶ್ರೀ ರತ್ನವರ್ಮ ಹೆಗ್ಗಡೆಯವರಿಗೆ ಸಮರ್ಪಿಸಿದರು.

— —

## ನೋಟೀಸು

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. P. No. 18/1966

1. M. ಮೋಹನ ಕಾಮತ್, 2. M. ರಾಧಾಕೃಷ್ಣ ಕಾಮತ್, 3. ರಾಧಾಬಾಯಿ, 4. ರಮಣಿ ಬಾಯಿ, 5. ಸತ್ಯವತಿ ಯಾನೆ ಲಲಿತ, 6 ಶಾಂತಾಬಾಯಿ —ಅರ್ಜಿದಾರರು.

ಮಂಜುನಾಥ ಕಮ್ತಿ, ವೆಂಕಪ್ಪಯ್ಯ ಕಮ್ತಿರ ಮಗ, ಉಡುಪಿ ತಾಲ್ಲೂಕು ಕಳ್ತೂರು ಗ್ರಾಮದ ಸಂತೆಕಟ್ಟೆ ಎಂಬಲ್ಲಿರುವವ — ಎದ್ರಿ.

ಸದ್ರಿ ಎದ್ರಿ ಆದ ನಿಮಗೆ ವ ಯಿತರ ಸಮಸ್ತರಿಗೆ ಈ ಮೂಲಕ ತಿಳಿಸುವುದೇನಂದ್ರೆ—

1ರಿಂದ 5ನೇ ವರೆಗಿನ ಅರ್ಜಿದಾರರ ತಂದೆ ವ 6ನೇ ಅರ್ಜಿದಾರಳ ಗಂಡ ತಾ. 1-2-1964 ರಲ್ಲಿ ಮೃತಪಟ್ಟಿರುವ ಆರಬೆಟ್ಟು ಗಣಪತಿ ಕಮ್ತಿರಿಗೆ ಬರತಕ್ಕ debts ಮತ್ತು securitiesಗಳನ್ನು ವಸೂಲು ಮಾಡುವರೆ 1ನೇ ಅರ್ಜಿದಾರನ ಹೆಸರಿಗೆ ವಾರೀಸು ಸರ್ಟಿಫಿಕೇಟನ್ನು ಕೊಡಿಸಬೇಕಾಗಿ ಅರ್ಜಿದಾರರು ದಾಖಲ್ಲು ಮಾಡಿದ ಸದ್ರಿ ಅರ್ಜಿಯು ತಾ. 14—7—1966ಕ್ಕೆ ಇಟ್ಟಿದೆ. ಆ ಕುರಿತು ಆಕ್ಷೇಪ ಇದ್ದವರು ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ಅವರವರ ಆಕ್ಷೇಪಣೆಗಳನ್ನು ಕೊಡತಕ್ಕದ್ದು. ತಪ್ಪಿದ್ರೆ ಅವರ ಗೈರ ಹಾಜ್ರಿಯಲ್ಲಿ ಅರ್ಜಿ ತೀರ್ಮಾನವಾಗುವುದು ಎಂತ ಕೋರ್ಟು ಹುಕ್ಕುಂ ಪ್ರಕಾರ ತಿಳಿಸಿಯದೆ.

Karkala, 25-6-'66

K. S. KAMATH, Advocate for Petitioners.

— —

# ತುಳು ಗಾದೆಗಳು

— ಸಂಗ್ರಾಹಕ: ಎಂ. ನಾರಾಯಣ —

1480 ಬದ್ರಿಯೆಡ ಒಂಜಿ ಪುಂಡಿ ನುಪ್ಪು, ಸೈತೆಡ ಒರ್ಲ ಬೊನ್ಯ

—ಬದುಕಿದರೆ ಒಂದು ಮುಷ್ಟಿ ಅನ್ನ, ಸತ್ತರೆ ಒಂದು ಮುಷ್ಟಿ ಬೂದಿ.

1481 ಒರ್ಲ ಕೊರ್ದ್ ಇರ್ಲ ದೆತೊಂಡಿ ಲೆಕ್ಕ.

—ಒಂದು ಕೊಟ್ಟು ಎರಡು ತಕ್ಕೊಂಡ ಹಾಗೆ.

1482 ಕಂಡೊನಿಯರೆ ಪೋನಗ ಒರಿ ಪಣ್ತೆಗೆ—ನರಮಾನಿಯನ ಕಣ್ಣ್ ಕಟ್ಟೊಲಿ, ದೇವೆರೆ ಕಣ್ ಕಟ್ಟಿಯೆರೆ ತೀರುವಾ?

—ಕದಿಯಲಿಕ್ಕೆ ಹೋಗುವಾಗ ಒಬ್ಬ ಹೇಳಿದ್ದನಂತೆ—"ಮನುಷ್ಯನ ಕಣ್ಣು ಕಟ್ಟಿಸಬಹುದು, ದೇವರ ಕಣ್ಣು ಕಟ್ಟಿಸಲು ಸಾಧ್ಯವೇ?"

1483. ಎಕ್ಕಾಂದಿ ಮರಕ್ ಎಕ್ಕಲಿ ಲೆಕ್ಕ.

—ಏಟಕದ ಮರಕ್ಕೆ ಎಟಕಲಿಕ್ಕೆ ಕತ್ತು ನೀಡಿದಂತೆ

1484. ತುಪ್ಪೆಡ್ ತಾರಿಗೊರಟ್ ಜಿಂಜಾದ್ ಬೈದಿನಾಯೆ.

—ಕಣಜದಲ್ಲಿ ತಾಳಿಗೊರಟೆಗಳನ್ನು ತುಂಬಿಸಿ ಬಂದವ,

(ಮೇಲಿನ ವ್ಯಂಗ್ಯೋಕ್ತಿ, ಸಾಲ ಮಾಡಿ, ಸಾಲಕೊಟ್ಟವನಿಗೆ ಹಾಗೂ ಧನಿಗೆ ಮೋಸಮಾಡಿ ಓಡಿಬಂದವನಿಗೆ ಅನ್ವಯಿಸಲ್ಪಡುತ್ತದೆ)

1485. ಚೆನ್ನೆನಾಯಿಳು ಮೇಲಗ್ ಬೂರಿಲೆಕ್ಕ.

—ತೋಳಗಳು ಮೈಮೇಲೆ ಹಾರಿದಂತೆ.

(ಕನ್ನಡದಲ್ಲಿ ಸಮಾನಾರ್ಥ ಗಾದೆ: "ಬೇಟೆಗೆ ಹೋದಾಗ ತೋಳ ಸುತ್ತು ಹಾಕಿದಂತೆ.)

1486. ಬೂದಿ ಕಣಯೆರೆ ಪೋನಗ ಗಂಡಗನಕುಳು ಸುತ್ತುಪಾಡಿಲೆಕ್ಕ.

—ಚಿತಾಭಸ್ಮ ತರಲು ಹೋದಾಗ ಪಿಶಾಚಿಗಳು ಸುತ್ತುಹಾಕಿದಂತೆ.

1487. ಪೀಕ ನಾತಲಾ ಗೊತ್ತಿಜಿ, ಪೂಕ ಪರಿಮಳಲಾ ಗೊತ್ತಿಜಿ

—ಹೊಲಸಿನ ನಾತವೂ ಗೊತ್ತಿಲ್ಲ, ಹೂವಿನ ಪರಿಮಳವೂ ಗೊತ್ತಿಲ್ಲ.

1489 ತಂಜಣೊಗು ಎರು ಪತ್ತಿನಾಯಾಗ್ ಕಾರ್‌ಬಾರ್ ದಾಯೆ?

—ತಂಗೂಳಿಗಾಗಿ ಕೋಣಹಿಡಿದವನಿಗೆ (ಉಳುವವನಿಗೆ) ಕಾರುಬಾರು ಏಕೆ?

1489. ಅರ್ಧ ನುಂಗುಂಡ ತೋಜುಂಡು.

—ಅರ್ಧ ನುಂಗಿದರೆ ಕಾಣುವುದು.

1490. ಅರ್ಧ ನಿಂಗಿರೆ ಬಲ್ಲಿ, ನಿಂಗ್‌ಂಡ ಇಡಿಯಾವೆ ನಿಂಗೊಡುಗೆ.

—ಅರ್ಧ ನುಂಗಬಾರದು; ನುಂಗುವುದಾದರೆ ಪೂರ್ಣ ನುಂಗಬೇಕಂತೆ.

(ಇನ್ನೂ ಇದೆ)

—o—

## ಬೇಂಕ್ ನೌಕರರಿಗೆ ತಲಬು ಮತ್ತು ಎಲೊವೆನ್ಸ್‌ಗಳಲ್ಲಿ ಹೆಚ್ಚಳ

ಅಖಿಲಭಾರತ ಬೇಂಕ್ ಉದ್ಯೋಗಸ್ಥರ ಸಂಘ ಮತ್ತು ಇಂಡಿಯನ್ ಮತ್ತು ಎಕ್ಸ್‌ಚೇಂಜ್ ಬೇಂಕುಗಳ ಸಂಘದ ನಡುವೆ ನಡೆದ ಮಾತುಕತೆಗಳ ಫಲವಾಗಿ, ಬೇಂಕ್ ನೌಕರರಿಗೆ ಹೆಚ್ಚು ತಲಬು ಮತ್ತು ಅಧಿಕ ಎಲೊವೆನ್ಸ್ ದೊರೆವುದು. ನೌಕರನಿಗೆ 57 ವರ್ಷಗಳು ತುಂಬುತ್ತಲೇ ಅವನ ಕಾರ್ಯಸಾಮರ್ಥ್ಯವು ಕುಂಠಿತವಾಗಿದೆ ಎಂಬುದು ದೃಢಗೊಂಡರೆ ಎರಡು ತಿಂಗಳ ನೋಟೀಸು ಕೊಟ್ಟು ಅವನನ್ನು ನಿವೃತ್ತಿಗೊಳಿಸಬಹುದು. ಇಲ್ಲವಾದರೆ, 60ನೇ ವರ್ಷದ ತನಕ ನಿವೃತ್ತಿಗೊಳಿಸಬಾರದು. ಕೆಳತರಗತಿಯ ನೌಕರರ ದಿನವಹಿ ಕೆಲಸದ ಅವಧಿ 7ವರೆ ಗಂಟೆ, ಶನಿವಾರ 4ವರೆ ಅದಕ್ಕೂ ಹೆಚ್ಚಿನ ಕೆಲಸವಿದ್ದಾಗ ಪ್ರಥಮದ ಹದಿನೈದು ನಿಮಿಷಗಳನ್ನು ಬಿಟ್ಟು, ಮಿಕ್ಕ ವೇಳೆಗೆ ಮೊದಲನೇ ಅರ್ಧತಾಸಿಗೆ, ಸೇಕಡಾ 100 ಎರಡನೇ ಗಂಟೆಗೆ ಸೇಕಡಾ 150 ಮತ್ತು ಅದಕ್ಕೂ ಹೆಚ್ಚಿನ ವೇಳೆಗೆ ಸೇಕಡಾ 200 'ಓವರ್ ಟೈಮ್' ತಲಬು ಗಣಿಸಲ್ಪಡುವದು. ಮಹಾನಗರಗಳಾದ ಮುಂಬಯಿ, ಕಲ್ಕತ್ತ, ಡಿಲ್ಲಿ, ಮದರಾಸುಗಳಲ್ಲಿ ಕೆಳನೌಕರರಿಗೆ ಮನೆಬಾಡಿಗೆ ಬತ್ತೆ ರೂ 11ರಿಂದ 25ರ ವರೆಗೆ, ಇತರ ಸ್ಥಳಗಳಲ್ಲಿ ರೂ 9ರಿಂದ 18ರ ವರೆಗೆ ಕೊಡಲ್ಪಡುವದು. ಯೋಜನಾ ಕೇಂದ್ರಗಳಾದ ಬೊಕಾರೋ, ನೆಯ್ವೆಲಿ ಮುಂತಾದ ಕಡೆಗಳಿಗೆ ವರ್ಗಾಯಿಸಿದರೆ ಅಧಿಕ ಭತ್ತೆ ಕೊಡಲ್ಪಡುವುದು. 4000 ಅಡಿ ಎತ್ತರದ ಸ್ಥಳಗಳಲ್ಲಿಯ ಶಾಖೆಗಳಲ್ಲಿ ಕೆಲಸಮಾಡುವವರಿಗೆ ರೂ 10ರಿಂದ ರೂ 15 ಅಧಿಕ; ನೀರಿನ ಅಭಾವ ತೀವ್ರವಾಗಿರುವಂಥ ಸ್ಥಳಗಳಲ್ಲಿ ಕ್ಲಾರ್ಕರಿಗೆ ರೂ 8/- ನೀರಿನ ಎಲೊವೆನ್ಸ್: ಕೆಳತರಗತಿಯವರಿಗೆ ರೂ 6.

—o—

## ಕನ್ನಡ ಸಂಘದ ಮಹಾಸಭೆ

ಕನ್ನಡ ಸಂಘ, ಮಂಗಳೂರು, ಇದರ ಮಹಾಸಭೆಯು ಕಳೆದ ತಾ. 26ರಂದು ಬೆಳಿಗ್ಗೆ ಸ್ಥಳೀಯ ಸರಕಾರೀ ಕೊಲೆಜಿನಲ್ಲಿ ಸಂಘದ ಅಧ್ಯಕ್ಷ ಶ್ರೀ ತೆಕ್ಕುಂಜೆ ಗೋಪಾಲಕೃಷ್ಣಭಟ್ಟರ ಅಧ್ಯಕ್ಷತೆಯಲ್ಲಿ ನಡೆಯಿತು. ಗತವರ್ಷದ ವರದಿ ಮತ್ತು ಲೆಕ್ಕಪತ್ರಗಳನ್ನು ಕಾರ್ಯದರ್ಶಿ ಶ್ರೀ ವಾಸುದೇವ, ಬೋಳೂರು ಇವರು ಓದಿ ಅವು ಮಂಜೂರು ಮಾಡಲ್ಪಟ್ಟವು. ಭಾಷಾವಾರು ಗಡಿವಿವಾದವನ್ನು ಸಂಬಂಧಪಟ್ಟ ಪ್ರಾಂತೀಯ ಮತ್ತು ಕೇಂದ್ರ ಸರಕಾರಗಳು ನ್ಯಾಯಪೂರ್ಣ ರೀತಿಯಲ್ಲಿ ಶೀಘ್ರ ಪರಿಹರಿಸಬೇಕೆನ್ನುವ, ಅಖಿಲ ಭಾರತ ಕೊಂಗ್ರೆಸ್ ಸಮಿತಿಯು ಕಾಸರಗೋಡು ಪ್ರಶ್ನೆಯನ್ನು ಬಗೆಹರಿಸಲು ತೀರ್ಮಾನಿಸಿದುದನ್ನು ಸ್ವಾಗತಿಸುವ ನಿರ್ಣಯಗಳು ಮಂಜೂರು ಮಾಡಲ್ಪಟ್ಟ ಮೇಲೆ ಹೊಸ ವರ್ಷಕ್ಕೆ ಈ ಕೆಳಗಿನ ಕಾರ್ಯಕಾರಿ ಸಮಿತಿಯು ಆಯ್ಕೆಯಾಯಿತು.

ಸರ್ವಶ್ರೀ ತೆಕ್ಕುಂಜೆ ಗೋಪಾಲಕೃಷ್ಣ ಭಟ್-ಅಧ್ಯಕ್ಷ, ಬಿ ಎಂ. ಇದ್ದಿನಬ್ಬ-ಉಪಾಧ್ಯಕ್ಷ, ಎಲ್ಲೂರು ಉಮೇಶರಾವ್ ಕೋಶಾಧಿಕಾರಿ, ಎ ಬಾಲಕೃಷ್ಣ ಶೆಟ್ಟಿ ಪೊಳಲಿ-ಕಾರ್ಯದರ್ಶಿ, ಪಿ. ಕೆ. ನಾರಾಯಣ, ಶಂಕರನಾರಾಯಣ ನಾವಡ, ಬಿ. ವಿ. ಬಾಳಿಗಾ, ಕೀರಾನ ರಾಮಚಂದ್ರ, ಕೃಷ್ಣಗೋಪಾಲ- ಸದಸ್ಯರು, ನರೇಂದ್ರ ಮೆಂಡನ್-ಲೆಕ್ಕಪರಿಶೋಧಕ ಶ್ರೀ ವಾಸುದೇವ ಬೋಳೂರು, ಮನಮೋಹನ್ ಕಾಮತ್, ಶ್ರೀನಿವಾಸ ಉಪಾಧ್ಯಾಯ, ಬ್ರಹ್ಮಾನಂದ-ಕಾರ್ಯಕಾರಿ ಸಭೆಗೆ ವಿಶೇಷ ಆಮಂತ್ರಿತರು.

ಗಡಿವಿವಾದ ಚಳವಳವು ವಿಷಮತೆಗೆ ತಲಪಿ ನಿರಪರಾಧಿ ಜನರ ಮೇಲೆ ಹಲ್ಲೆ ದರೋಡೆ ನಡೆದ ಬಗ್ಗೆ ಸಭೆಯಲ್ಲಿ ಕಳವಳ ವ್ಯಕ್ತಪಡಿಸಲಾಗಿತ್ತು.

ಕಾರ್ಯದರ್ಶಿ ಶ್ರೀ ವಾಸುದೇವ ಬೋಳೂರರು ಅಂತ್ಯದಲ್ಲಿ ಧನ್ಯವಾದಗಳನ್ನರ್ಪಿಸಿದರು.

——

## ಪರೀಕ್ಷೆಗೆ ಹಣಕಟ್ಟಲು ಕೊನೆಯ ದಿನ

1966ನೇ ಸಪ್ಟಂಬರ್ ತಿಂಗಳಲ್ಲಿ ನಡೆಯುವ ವಿಶ್ವವಿದ್ಯಾಲಯಗಳ ಪರೀಕ್ಷೆಗಳಿಗೆ ಹಣ ಕಟ್ಟುವ ಅವಧಿಯನ್ನು ಜುಲೈ ತಾ 15ರ ವರೆಗೆ ಮುಂದುವರಿಸಲಾಗಿದೆ, ದಂಡವನ್ನು ತೆತ್ತು ಜುಲೈ ತಾ 20ರ ವರೆಗೆ ಹಣಕಟ್ಟಬಹುದಾಗಿಯೂ ಪ್ರಕಟಿಸಲಾಗಿದೆ.

——

## 21 ಅಂತಸ್ತುಗಳ ಹೊಟೆಲ್

ಮ್ಯೂನಿಚ್‌ನಲ್ಲಿ ನಡೆಯಲಿರುವ 1972ರ ಒಲಂಪಿಕ್ ಕ್ರೀಡೆಗಳಿಗಾಗಿ ಅನೇಕ ಹೊಟೇಲುಗಳು ಪ್ರಾರಂಭವಾಗುತ್ತಿವೆ ಇವುಗಳಲ್ಲಿ ಅತ್ಯಂತ ದೊಡ್ಡ ಯೋಜನೆಯೆಂದರೆ "ಹೋಟೆಲ್ ಕಾಂಪ್ಲೆಕ್ಸ್" ಕಟ್ಟಡದ ನಿರ್ಮಾಣ. ಇದನ್ನು ಪಟ್ಟಣದ ಸಮೀಪದಲ್ಲಿ ಜೋಗೆನ್ ಹಾಸೆನ್ ಎಂಬಲ್ಲಿ ಕಟ್ಟಲಾಗುವುದು. ಇದಲ್ಲದೆ 20,000 ಜನರಿರುವ ಆಫೀಸುಗಳಗ, 1300 ವಾಸಗೃಹಗಳೂ, ಅಂಗಡಿಗಳೂ, ನೆಲಮಾಳಿಗೆ ಗ್ಯಾರೇಜ್‌ಗಳೂ, ಉದ್ಯಾನವನಗಳೂ, ಶಾಲೆಗಳೂ, ಚರ್ಚ್‌ಗಳೂ, ವೃದ್ಧರುಗಳಿಗಾಗಿ ಭವನವೂ ಕಟ್ಟಿಸಲ್ಪಡುವುವು. "ಅರಿಬೆಲ್ಲಾ ಅಪಾರ್ಟ್‌ಮೆಂಟ್ ಹೋಟೇಲ್" ಅಮೇರಿಕಾ ಹೌಸಿನ ಮಾದರಿಯಲ್ಲಿ ಕಟಲಾಗುವುದು. ಈ ಹೋಟೆಲಿನಲ್ಲಿ ಮ್ಯೂನಿಚ್ ನಗರ ನೋಡಲು ಬರುವ ಜನರಿಗೆ ಮಾತ್ರ ಸ್ಥಳ ಸಿಕ್ಕುವುದು. ಶಾಶ್ವತವಾಗಿ ಇಲ್ಲಿ ನಿಲ್ಲಲು ಅವಕಾಶವಿಲ್ಲ. ಇದು 21 ಅಂತಸ್ತುಗಳಿಂದ ಕೂಡಿದೆ 1600 ಜನರು ಮಾತ್ರ ಈ ಹೋಟೆಲಿನಲ್ಲಿ ಇರಬಹುದು, ಈ ಹೋಟೇಲಿನಲ್ಲಿ ಈಜುವ ಕೊಳಗಳೂ, ಉಪ್ಪರಿಗೆಯ ಮೇಲೆ ವಿಹರಿಸಲು ಜಾಗಗಳೂ, ಹೊರಾಂಗಣದಲ್ಲಿ ಸ್ನಾನ ಮಾಡಲು ಬಿಸಿನೀರಿನ ಸೌಕರ್ಯ, ಇನ್ನೊಂದು ವಿಶೇಷವೆಂದರೆ ಕಾಗದಗಳನ್ನು ಟಪ್ಪಾಲು ಪೆಟ್ಟಿಗೆಗೆ ಹಾಕುವ ತೊಂದರೆಯೇ ಇಲ್ಲ. ಗೋಡೆಗಳಲ್ಲಿರುವ ಪ್ಯಾಕೆಟ್‌ಗಳಿಗೆ ಹಾಕಿದರೆ ಸಾಕು ಅದು ನೇರವಾಗಿ ರಿಸೆಪ್‌ಶನ್ ಕೋಣೆಗೆ ಹೋಗುತ್ತದೆ. ಇದೊಂದು ಜರ್ಮನಿಯ ಅತ್ಯಾಧುನಿಕ ಹೋಟೆಲ್ ಆಗಿದೆ.

——

# ರಾಹು ಫಲ—೩೪

## ಲಗ್ನಭಾವ

— ಎಂ. ಸುಬ್ರಾಯನ್. —

ರೋಗೀ ಸದಾ ದೇವರಿಪೌ ತನುಸ್ಥೇ
ಕುಲಂಚಧಾರೀ ಬಹುಜಲ್ಪ ಶೀಲಃ।
ರಕ್ತೇಕ್ಷಣಃ ಪಾಪರತ ಕುಕರ್ಮ
ರತಃ ಸದಾ ಸಾಹಸಕರ್ಮದಕ್ಷಃ॥
ತನುಸ್ಥಃ ಶಿಖೀ ಬಾಂಧವ ಕ್ಲೇಶಕರ್ತಾ
ತಥಾ ದುರ್ಜನೇಭ್ಯೋ ಭಯಂ
ವ್ಯಾಕುಲತ್ವಮ್।
ಕಲತ್ರಾದಿ ಚಿಂತಾ ಸದೋದ್ವೇಗತಾ ಚ
ಶರೀರೇ ವ್ಯಥಾನೈಕಥಾ ಮಾರುತೀ
ಸ್ಯಾತ್॥
(ಆರ್ಯಗ್ರಂಥಕಾರ)

ಲಗ್ನದಲ್ಲಿ ರಾಹುವಿದ್ದರೆ ಯಾವಾಗಲೂ ರೋಗಯುಕ್ತನೂ, ಕುಲವನ್ನು ಧರಿಸಿರುವ ಅಭಿಮಾನಿಯೂ, ತುಂಬಾ ಮಾತುಳ್ಳವನೂ, ಕೆಂಪಾದ ಕಣ್ಣುಳ್ಳವನೂ, ಪಾಪಾಸಕ್ತನೂ, ಕೆಟ್ಟಕೆಲಸ ಮಾಡುವವನೂ, ಯಾವಾಗಲೂ ಏನಾದರೂ ವಿಷಯದಲ್ಲಿ ಆಸಕ್ತನೂ, ಸಾಹಸಕರ್ಮಗಳನ್ನು ನಡೆಸಲು ಸಮರ್ಥನೂ ಆಗುವನು.

ಕೇತು ಲಗ್ನದಲ್ಲಿದ್ದರೆ ಬಾಂಧವಜನ ಕ್ಲೇಶವನ್ನುಂಟುಮಾಡುವವನೂ, ದುರ್ಜನರಿಂದ ಭಯವನ್ನು ಹೊಂದುವವನೂ, ಮನೋವ್ಯಾಕುಲಯುಕ್ತನೂ, ಹೆಂಡತಿ ಮಕ್ಕಳ ಮೊದಲಾದವರ ಚಿಂತೆಯಿಂದ ಕೂಡಿದವನೂ, ಯಾವಾಗಲೂ ದುಃಖಿತನೂ ಅನೇಕ ಬಗೆಯ ರೋಗಶರೀರದಿಂದ ಕೂಡಿರುವವನೂ, ವಾತರೋಗಪೀಡಿತನೂ ಆಗುವನು.

ಉಚ್ಚಸಂಸ್ಥೇಪಿ ಕೋಣೇತನೌ
ಮಾನವಭೂಪತುಲ್ಯಂ ಸದ್ರವ್ಯಮ್।
ಪ್ರಕುಯಾದಗಃ ಶೇಷಸಂಸ್ಥೋ
ರುಜಾಕ್ಷೀಣದೇಹಂ ಶಠಂ ದುಃಖ-
ಭಾಜಂ ಭಯೇನಾನ್ವಿತಂ ಸಂಭವೇತ್॥
(ಹರಿವಂಶ)

ಉಚ್ಚಗತನಾದ ರಾಹು ತ್ರಿಕೋಣ ಅಥವಾ ಲಗ್ನಭಾವದಲ್ಲಿದ್ದರೆ ಆತನು ರಾಜತುಲ್ಯನೂ, ಧನಿಕನೂ ಆಗುವನು. ಅನ್ಯರಾಶಿಗಳಲ್ಲಿದ್ದು ಲಗ್ನಗತನಾದರೆ ರೋಗದಿಂದ ಕ್ಷೀಣವಾದ ದೇಹವುಳ್ಳವನೂ, ಮೂರ್ಖನೂ, ದುಃಖಯುಕ್ತನೂ, ಭಯಯುಕ್ತನೂ ಆಗುವನು.

ಲಗ್ನದಲ್ಲಿ ರಾಹುವಿದ್ದು ಮೇಷ, ವೃಷಭ ಅಥವಾ ಕರ್ಕಟ ರಾಶಿಗತನಾನಾದರೆ ಎಲ್ಲಾ ದುರಿತಗಳನ್ನು ಹೋಗಲಾಡಿಸುವನು; ಅನ್ಯರಾಶಿಗತನಾದ ರಾಹು ಲಗ್ನದಲ್ಲಿದ್ದರೆ ರಾಜದ್ವೇಷ, ರೋಗ ಅಥವಾ ಸದಾ ಚಿಂತೆಗಳನ್ನುಂಟುಮಾಡುವನು. ಲಗ್ನದಲ್ಲಿ ಕೇತು ವಿದ್ದರೆ ಕೆಟ್ಟ ನಡತೆಯುಳ್ಳವನೂ, ಎಲ್ಲಾ ಕೆಲಸಗಳಲ್ಲಿ ಅಪಯಶಸ್ಸನ್ನು ಹೊಂದುವವನೂ, ವಾಹನಾದಿಗಳಿಂದ ತ್ರಾಸವನ್ನು ಹೊಂದುವವನೂ, ರೋಗಿಯೂ ಆಗುವನೆಂದು ಕೆಲವರು ಹೇಳಿರುವರು. ಲಗ್ನದಲ್ಲಿ ರಾಹುವಿದ್ದರೆ ಗಂಡುಮಕ್ಕಳು ಹುಟ್ಟುವುದಿಲ್ಲ. ಹುಟ್ಟಿದ ಮಕ್ಕಳು ಜೀವಂತವಾಗಿರುವುದಿಲ್ಲ. ಕೇವಲ ಜನನದ ವರೆಗೆ ಶಿಶುವಿಗೆ ಪ್ರಾಣವಿರುವುದು. ಮೇಷ, ವೃಷಭ, ಮಿಥುನ, ಕರ್ಕಟಕ, ಸಿಂಹ, ಕನ್ಯಾ, ಮಕರದ ರಾಹು ರಾಜಯೋಗಕಾರಕವಾಗುವನು ಮಹಾ ಸುಖಸಮೃದ್ಧನೂ ದಯಾಳುವೂ ಆಗುವನು. ಅನ್ಯರಾಶಿಗಳ ರಾಹು ಅತಿ ದುಃಖದಾಯಕನೆಂದು ಇನ್ನು ಕೆಲವರ ಮತ. ಯಾವಾಗಲೂ ದುಃಖದಿಂದ ಕೂಡಿದವನೂ, ಕುರೂಪಿಯೂ, ಆಲಸ್ಯದಿಂದ ತುಂಬಿದವನೂ, ಸ್ವಾರ್ಥಿಯೂ ಮೂರ್ಖನೂ ಆಗುವನೆಂದು ಬೇರೆ ಕೆಲವರು ಹೇಳಿರುವರು.

ಪಾಶ್ಚಾತ್ಯರು ಲಗ್ನದ ರಾಹುವಿಗೆ ಅತಿ ಮಹತ್ವವನ್ನು ಕೊಟ್ಟಿರುವರು. ರಾಹು ಲಗ್ನದಲ್ಲಿದ್ದರೆ ಅತಿ ಕೀಳು ನೆಲೆಯವನನ್ನು ಉನ್ನತಸ್ಥಾನಕ್ಕೆ ಕೊಂಡೊಯ್ಯುವನು. ಜನತೆಯ ಮನಸ್ಸನ್ನು ಲಕ್ಷ್ಯಕ್ಕೆ ಕೊಂಡೊಯ್ಯುವ ಯಾವುದಾದರೂ ವಿಲಕ್ಷಣ ಶಕ್ತಿ ಇರುವುದು. ದೇಹದಲ್ಲಿ ತುಂಬಾ ಚುರುಕುತನ, ಸಾಹಸವರ್ತನೆ, ದೇಹಶಕ್ತಿಗಳಿಂದ ತುಂಬಿರುವಿಕೆಗಳು ಇರುವವು; ಅತಿ ಅಭಿಮಾನಯುಕ್ತನಾಗಿರುವನು; ಬೇಗನೆ ಕೀರ್ತಿಯನ್ನು ಹೊಂದಿಬಿಡುವನು; ಯಾರನ್ನೂ ಲಕ್ಷಿಸದೆ ನೆಲಸುವನು; ವಿದ್ಯಾಭ್ಯಾಸದ ಕಡೆಗೆ ಗಮನವಿರುವುದಿಲ್ಲ; ಸನಾತನ ಸಂಪ್ರದಾಯ ಧರ್ಮಗಳನ್ನು ಸಂಪೂರ್ಣ ಅನುಸರಿಸಿರುವನು; ಆಧುನಿಕ ಸುಧಾರಣಾಪ್ರಪಂಚದ ವಿಚಾರದಲ್ಲಿ ಮನಸ್ಸನ್ನು ಕೊಡಲಾರನು; ಮಾನ್ಯತೆಯನ್ನು ಅದರಲ್ಲಿಡದಿರುವನು. ದೇಹಪ್ರಕೃತಿಯು ಸಾಮಾನ್ಯವಾಗಿರುವುದು; ದೀರ್ಘದೇಹವಾಗಿರುವುದು. ಕೇತು ಲಗ್ನದಲ್ಲಿದ್ದರೆ ಜಡನೂ, ಅನ್ಯರ ಅಧೀನವಿದ್ದು ನಡೆಯತಕ್ಕವನೂ, ಆತನ ಮುಖಕಂಡೊಡನೆ ಅನ್ಯರಿಗೆ ಹೇಸಿಕೆಯಾಗುವುದು.

ಮೃತಪ್ರಸೂತಿಃ। ಮೇಷ ವೃಷಭ
ಕರ್ಕ ರಾಶಿಸ್ಥೇ ದಯಾವಾನ್। ಬಹು
ಭೋಗೀಅಶುಭೇಶುಭದೃಷ್ಟೇಮುಖಲಾಂ
ಛನೇತನುಸ್ಥಲೇ ಯದಾ ರಾಹೌಸ್ವಪಾಕ
ಪರಿಪಾಲಕಃ।ಬಹುದಾರರತಃ ಪುಂಸಾಂ
ಕಾಮಾಧಿಕ್ಯ ಸುವೇಷವಾನ್ ದ್ಯೂನೇ
ಕೇತುಃ ಕಲತ್ರಾದಿ ನ ಕಿಂಚಿತ್ ಸುಖ
ಮಾಪ್ನುಯಾತ್ ಮಾರ್ಗೇ ಚಿಂತಾ
ಜಲೇಭೀತಿ ಸ್ವಗೃಹೇ ಲಾಭದಾಯಕಃ
ದೇಹೇ ಮರುತ್ಮತಾ ಪೀಡಾ ಕಲಹೀ
ವೈಭವೀ ಕ್ಷಯಂ । ಪುತ್ರಮಿತ್ರಾದಿ
ಕಷ್ಟಂ ರಾಹೌಜನ್ಮ ಸಿಲಗ್ನಗೇ॥
(ಅಜ್ಞಾತ)

ಲಗ್ನದ ರಾಹು ಮೃತಸಂತಾನದ ಪ್ರಸೂತಿ ಕೊಡುವನು. ಮೇಷ, ವೃಷಭ, ಕರ್ಕಟಕದಲ್ಲಿ ರಾಹುವಿದ್ದರೆ ದಯಾವಂತನೂ ಬಹುಭೋಗಸಂಪದ್ಯುಕ್ತನೂ ಆಗುವನು. ಅಶುಭ ಶುಭದೃಷ್ಟಿಸಂಬಂಧವಿರುವ ರಾಹು ಲಗ್ನದಲ್ಲಿದ್ದರೆ ಮುಖದಲ್ಲಿ ಏನಾದರೂ ಮಚ್ಚೆಯ ಗುರುತಿರುವುದು. ಲಗ್ನದ ರಾಹು ತನ್ನ ಮಾತನ್ನು ಪರಿಪಾಲನೆಗೊಳಿಸುವನು; ಹೆಚ್ಚು ಹೆಂಡತಿಯರನ್ನು ಹೊಂದುವನು; ಕಾಮಾಧಿಕ್ಯ ಆತನಿಗಿರುವುದು; ಉತ್ತಮ ಉಡುಪುಗೊಳ್ಳುವನು; ಸಪ್ತಮದ ಕೇತು ಹೆಂಡತಿಯಿಂದ ಅಲ್ಪಸುಖವನ್ನೂ ಕೊಡಲಾರನು; ಯಾವಾಗಲೂ ಪ್ರವಾಸದ ಚಿಂತೆಯಿಂದ ಕೂಡಿರುವನು; ಜಲಭೀತಿಯಾಗುವುದು; ತನ್ನ ಮನೆಯಲ್ಲಿದ್ದರೆ ಎಲ್ಲಾ ವಿಧದಿಂದಲೂ ಸುಖಗೊಳ್ಳುವನು; ಲಾಭದಾಯಕನಾಗುವನು; ದೇಹವು ವಾತರೋಗದಿಂದ ಕೂಡಿರುವುದು; ಕಲಹಮಾಡುವವನಾಗುವನು; ವೈಭವಗೊಂಡು ಸಂಪತ್ತು ಹಾಳಾಗುವುದು. ಪುತ್ರಮಿತ್ರಜನರೇ ಮೊದಲಾದವರಿಂದ ಕಷ್ಟವೇ ಉಂಟಾಗುತ್ತದೆ.

(ಸಶೇಷ)

— ೨ —

## ವಾರ್ತಾಸಾರ

ಅಮೇರಿಕವು, ಉತ್ತರ ವಿಯೆಟ್‌ನಾಮಿನ ಹನೋಯ್ ಮತ್ತು ಹೈಫೋಂಗ್ ನಗರಗಳ ಬಳಿಯೇ ಬೋಂಬಿಂಗ್ ಧಾಳಿ ನಡೆಸಲಾರಂಭಿಸಿದುದು, ಜಗತ್ತಿನ ಅನೇಕ ರಾಷ್ಟ್ರಗಳಿಂದ ನಿಷೇಧ ಹೊರಡಿಸಿದೆ. ತಾನು ಶಾಂತ ಜನತೆಯ ನಾಶಕ್ಕೆಳಸಿಲ್ಲ; ದಕ್ಷಿಣದ ಮೇಲೆ ಧಾಳಿ ನಡೆಸುವ ಉತ್ತರದ ಶಕ್ತಿಗುಂದಿಸಲು ಅಲ್ಲಿಯ ತೈಲ ಟ್ಯಾಂಕ್‌ಗಳನ್ನು ನಾಶಪಡಿಸುತ್ತಿರುವುದಾಗಿ ಅಮೇರಿಕ ಹೇಳುತ್ತಿದೆ.

○ ○ ○

ಹುಬ್ಬಳ್ಳಿಯಲ್ಲಿ ಡಾ: ವಿ. ಸಿ. ಪಾವಟಿಯ (ಕೊಂಗ್ರೆಸ್) ವರ ನಿಧನದಿಂದ ಖಾಲಿ ಬಿದ್ದ ವಿಧಾನಸಭಾ ಸ್ಥಾನಕ್ಕೆ ನಡೆದ ಉಪಚುನಾವಣೆಯಲ್ಲಿ, ಜನಸಂಘದ ಹುರಿಯಾಳು ಶ್ರೀ। ವೈ. ಎಸ್. ಪಾಟೀಲರವರು ಕೊಂಗ್ರೆಸ್ಸಿನ ಹುರಿಯಾಳು ಶ್ರೀ। ಎಲ್. ವೈ. ತೊನ್ನೆನರ ಅವರನ್ನು ಸೋಲಿಸಿ, ವಿಜಯಿಗಳಾದರು.

○ ○ ○

ಸೋವಿಯತ್ ರಷ್ಯವು ಪಾಕಿಸ್ಥಾನಕ್ಕೆ ಯುದ್ಧ ಸಾಮಗ್ರಿಗಳನ್ನು ಒದಗಿಸಲು ಒಪ್ಪಿದೆ ಎಂಬ ವಾರ್ತೆ ಹರಡಿದೆ. ಭಾರತ ಸರಕಾರವು ಈ ವಿಷಯದಲ್ಲಿ, ರಷ್ಯದಿಂದ ವಿವರಣೆ ಕೇಳಲಿದೆ.

○ ○ ○

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮತ್ತು ಬೇರೆ ಕಡೆಗಳಲ್ಲಿರುವ ಆನೆಕಾಲು ರೋಗವು ಈಗ ಬೆಂಗಳೂರು ನಗರದಲ್ಲೂ ಕಾಣಿಸಿಕೊಳ್ಳಹತ್ತಿದೆ ಈ ರೋಗವನ್ನು ಹತ್ತಿಕ್ಕುವುದಕ್ಕಾಗಿ ದಕ್ಷಿಣ ಕನ್ನಡಜಿಲ್ಲೆಯಲ್ಲೂ ತಕ್ಕ ಕ್ರಮಗಳನ್ನು ಕೈಕೊಳ್ಳಲಾಗುವಂತೇ-ಬೆಂಗಳೂರಿನಲ್ಲಿಯೂ ಜಾಗರೂಕತೆ ವಹಿಸಿ, ಶೀಘ್ರ ಕ್ರಮ ತೆಗೆದುಕೊಳ್ಳಲಾಗುವುದೆಂದು—ಕಳೆದವಾರ ಬೆಂಗಳೂರಿನಲ್ಲಿ ಸೇರಿದ ಕೊರ್ಪೊರೇಶನ್‌ಗಳ ಮತ್ತು ಮುನಿಸಿಪಾಲಿಟಿಗಳ ಪರಿಷತ್ತಿನಲ್ಲಿ, ಮುಖ್ಯಮಂತ್ರಿ ಶ್ರೀ। ನಿಜಲಿಂಗಪ್ಪನವರು ಹೇಳಿದರು.

○ ○ ○

ಗಜರಾಥ ವಿಶ್ವವಿದ್ಯಾಲಯದ ನಾಲ್ಕು ಮಂದಿ ವಿದ್ಯಾರ್ಥಿನಿಯರು, ಕುಮಾರಿ ನಂದಿನಿ ಪಟೇಲರವರ ನೇತೃತ್ವದಲ್ಲಿ, ಇದೇ ಕಳೆದ ತಾ 25ರಲ್ಲಿ, 21,890 ಅಡಿ ಔನ್ನತ್ಯದ ಗಂಗೋತ್ರಿ ಶಿಖರಾರೋಹಣವನ್ನು ಯಶಸ್ವಿಯಾಗಿ ಪೂರೈಸಿದರು. ಇವರೊಂದಿಗೆ ಮೂರು ಮಂದಿ ಶೆರ್ಪಗಳಿದ್ದರು.

○ ○ ○

ಪ್ರಧಾನ ಸಚಿವೆ ಶ್ರೀಮತಿ ಇಂದಿರಾ ಗಾಂಧಿಯವರು, ಇದೇ ತಾ 12ರಿಂದ 16ರ ವರೆಗೆ ಸೋವಿಯತ್ ರಷ್ಯವನ್ನು ಸಂದರ್ಶಿಸುವರು. ಅವರೊಂದಿಗೆ ವಿದೇಶ ವ್ಯವಹಾರ ಮಂತ್ರಿ ಶ್ರೀ। ಸ್ವರಣಸಿಂಘರವರೂ ತೆರಳಲಿರುವರು. ಶ್ರೀಮತಿ ಇಂದಿರಾ ಗಾಂಧಿಯವರು, ಇದೇ ತಾ. 8ರಂದು ಮುಂಬಯಿಯಿಂದ ವಿಮಾನದಲ್ಲಿ ಹೊರಡುವರು. 8 ಮತ್ತು 9ರಂದು ಕೈರೋದಲ್ಲಿಳಿದು ಇಜಿಪ್ಟಿನ ಅಧ್ಯಕ್ಷ ನಸ್ಸೇರರೊಡನೆ ಮಾತುಕತೆ ನಡೆಸುವರು. ತಾ 10ರಂದು ಅಲ್ಲಿಂದ ಯುಗೋಸ್ಲಾವಿಯಕ್ಕೆ ತೆರಳಿ, ಅಧ್ಯಕ್ಷ ಟಿಟೋರವರನ್ನು ಕಂಡು, ತಾ. 12ರಲ್ಲಿ ಮೊಸ್ಕೋ ನಗರಕ್ಕೆ ಪ್ರಯಾಣ ಬೆಳೆಸಿ, ಅಲ್ಲಿ ತಾ 16ರ ವರೆಗಿದ್ದು ತಾ. 17ರಂದು ಢಿಲ್ಲಿಗೆ ಮರಳುವರು.

○ ○ ○

ಅಮೇರಿಕದ ವಿಮಾನಗಳು ಉತ್ತರ ವಿಯೆಟ್‌ನಾಮಿನ ಹನೊಯ್ ಮತ್ತು ಹೈಫೋಂಗ್‌ಗಳ ಮೇಲೆ ಬೋಂಬ್ ಧಾಳಿಯಿಡುತ್ತಿರುವುದನ್ನು ನೋಡಿ ಕೆಂಪುಚೀನವು ಕೆರಳಿದೆ; ಇನ್ನು ಮುಂದೆ ಉತ್ತರ ವಿಯೆಟ್‌ನಾಮಿಗೆ ಧಾರಾಳ ಸಹಾಯನೀಯುವುದೆಂದು ಏರುಸ್ವರದಲ್ಲಿ ಹೇಳಿ, "ಅಮೇರಿಕವೆಂಬ ವ್ಯಾಘ್ರವು ನಾಲ್ದೆಸೆಗಳಿಂದಲೂ ಬಡಿತತಿಂದು ಸುತ್ತುವರಿಯಲ್ಪಟ್ಟಂತಾಗಿ ತನ್ನ ಸ್ವನಾಶಕ್ಕಾಗಿ ಹೂಡಿದ ಹುಚ್ಚಾಟವಿದು" ಎಂದೂ ಬಯ್ಯತೊಡಗಿದೆ.

○ ○ ○

### ಪತ್ರಿಕಾಗೋಷ್ಠಿಯಲ್ಲಿ ಶ್ರೀ। ಮಧೋಕ್

ಮಂಗಳೂರಲ್ಲಿ ಪತ್ರಿಕಾಗೋಷ್ಠಿಯೊಂದರಲ್ಲಿ ಮಾತನಾಡುತ್ತ ಅಖಿಲ ಭಾರತ ಜನಸಂಘದ ಅಧ್ಯಕ್ಷ ಶ್ರೀ।ಬಲರಾಜ್ ಮಧೋಕ್‌ರವರು ಕಾಶ್ಮೀರ ಪ್ರಶ್ನೆಯ ಕುರಿತು 'ಇದೊಂದು ರಾಜಕೀಯ ಸಮಸ್ಯೆಯಲ್ಲ, ಬದಲು ಮಿಲಿಟರಿ ಸಮಸ್ಯೆಯಾಗಿದೆ. ಕಾಶ್ಮೀರದ ಸುಮಾರು ಮೂರನೇ ಒಂದಂಶವನ್ನು ಅಕ್ರಮವಾಗಿ ಕಬಳಿಸಿದ ಪಾಕಿಸ್ಥಾನದಿಂದ ನೇರ ಯುದ್ಧದ ಮೂಲಕ ಅದನ್ನು ಓಡಿಸಿ, ಕಾಶ್ಮೀರವನ್ನು ಸಂಪೂರ್ಣ ಸ್ವತಂತ್ರವನ್ನಾಗಿ ಮಾಡುವುದೇ ಸಿದ್ಧೋಪಾಯ' ಎಂದರು. ಪ್ರಕೃತ ರಾಜ್ಯದಲ್ಲಿ ನಡೆಯುವ ಭಾಷಾ ಚಳವಳದ ಬಗ್ಗೆ ಅಭಿಪ್ರಾಯ ಕೇಳಿದಾಗ ಅವರು, "ಅದು ದೌರ್ಭಾಗ್ಯದ ವಿಷಯ ದೇಶದಲ್ಲಿ ಅತ್ಯಧಿಕ ಸಂಖ್ಯೆಯ ಜನರು ಅರಿತಿರುವ ಹಿಂದಿಯ ಬೆಳವಣಿಗೆಗೆ ಎಲ್ಲಾ ಬಗೆಯ ಪ್ರಯತ್ನ ಅವಶ್ಯ" ಎಂದರು.

—೦—

# ಈ ವಾರದ ಭವಿಷ್ಯ

ಶ್ರೀ ಎಮ್. ಸುಬ್ರಾಯನ್,
ಸಾಹಿತ್ಯ ಮತ್ತು ಜ್ಯೋತಿಷ್ಯ ಶಿರೋಮಣಿ

ತಾ. 3-7-66ರಿಂದ 9-7-66ರ ವರೆಗೆ.

ಮೇಷ: ಕೈಕೊಂಡ ಕೆಲಸಗಳಲ್ಲಿ ಜಯ ಲಾಭ ಉನ್ನತಿಗಳಿರುತ್ತವೆ. ಸಂಪತ್ತಿನ ಪ್ರಗತಿಯ ಸಂಪರ್ಕವಿರುವುದು. ಬಂಧುಜನರ ವಿಯೋಗವನ್ನು ಹೊಂದಲಿರುವಿರಿ. ರಿಕಾರ್ಡ್ ವ್ಯವಹಾರಗಳು ಮುಂದುವರಿಯುವವು. ಪ್ರಯಾಣವಾಗಲಿದೆ.

ವೃಷಭ: ಸಾಮಾಜಿಕ ವಿಷಯಗಳಲ್ಲಿ ಆಸಕ್ತಿಯಿಂದ ಕೂಡಿದವರಾಗುವಿರಿ. ಧಾರ್ಮಿಕ ಕೆಲಸಗಳನ್ನು ಸಾಧಿಸಲಿರುವ ಯೋಗವಿರುತ್ತದೆ. ಕುಟುಂಬೀಯರ ಅಗಲುವಿಕೆಗಿರುವ ಸಂಘಟನೆ ಇರುತ್ತದೆ. ದೂರ ಪ್ರವಾಸಗಳನ್ನು ಬಯಸುವಿರಿ.

ಮಿಥುನ: ನಿರಂತರ ಕೆಲಸಗಳಿಂದ ಕೂಡಿದವರಾಗಿದ್ದು ವಿರಾಮ ಕಡಮೆಯಾಗಿರುತ್ತದೆ. ಧಾರ್ಮಿಕ ವಿಷಯದಲ್ಲಿ ಆಸಕ್ತಿಯು ಕಂಡುಬರುವುದಾಗಿದೆ. ದೇಹಾರೋಗ್ಯ ವಿಷಯದಲ್ಲಿ ಜಾಗರೂಕರಾಗಿರಬೇಕು.

ಕರ್ಕಟಕ: ಸಾಮಾಜಿಕ ವಿಷಯಗಳಲ್ಲಿ ಆಸಕ್ತಿಯು ಕಂಡುಬರುವುದಾಗಿದೆ. ದೂರಗತ ಬಂಧುಜನರ ಭೇಟಿಯನ್ನು ಹೊಂದಲಿರುವಿರಿ. ವಾಸಸ್ಥಾನದ ಬದಲಾವಣೆಯ ಕಡೆಗೆ ಗಮನವಿರುವುದು.

ಸಿಂಹ: ದೊಡ್ಡ ಮನುಷ್ಯರ ಭೇಟಿ ಸಹಾಯಗಳು ಸಿದ್ಧಿಸಲಿರುತ್ತವೆ. ಸಂಪತ್ತಿನ ಪ್ರಗತಿಯನ್ನು ಹೊಂದಲಿರುವಿರಿ. ಸಂಪತ್ತಿನ ಪ್ರಗತಿಗಿರುವ ಸಂಘಟನೆ ಕಂಡುಬರುವುದಾಗಿದೆ. ಪ್ರಯಾಣವಾಗಲಿದೆ.

ಕನ್ಯಾ: ಮಾನಸಿಕ ಶಾಂತಿಯಿಂದ ಕೂಡಿರುವುದಿಲ್ಲ. ಕುಟುಂಬದಲ್ಲಿ ಆಕಸ್ಮಿಕ ಘಟನೆಗಳು ಕಂಡುಬರುವವು. ರಿಕಾರ್ಡ್ ವ್ಯವಹಾರಗಳು ಸಂಭವಿಸಲಿರುತ್ತವೆ. ವ್ಯಾಪಾರಿಗಳಿಗೆ ಪ್ರಗತಿಕರ.

ತುಲಾ: ಹಲವಾರು ಕೆಲಸಗಳಿಂದ ಕೂಡಿದವರಾಗಿದ್ದು ವಿರಾಮ ಅಲ್ಪವಾಗಿರುವುದು. ಮಾನಸಿಕ ಶಾಂತಿ ಇರುವುದಿಲ್ಲ. ಬಂಧುಜನರ ವಿಯೋಗವನ್ನು ಹೊಂದಲಿರುವ ಯೋಗವಿರುತ್ತದೆ.

ವೃಶ್ಚಿಕ: ನಿಮ್ಮವರೇ ನಿಮಗೆ ವಿರೋಧಿಗಳಾಗಿ ಕಂಡುಬರುವರು. ಧಾರ್ಮಿಕ ವಿಷಯದಲ್ಲಿ ಆಸಕ್ತಿಯು ಕಂಡುಬರುವುದಾಗಿದೆ. ರಿಕಾರ್ಡ್ ವ್ಯವಹಾರಗಳು ಮುಂದುವರಿಯುವವು. ನೌಕರರಿಗೆ ಉನ್ನತಿ ಇದೆ.

ಧನು: ದೂರಗತ ವಿಚಾರಗಳಿಂದ ಕೂಡಿದವರಾಗಿ ಕಂಡುಬರುವಿರಿ. ವಾಗ್ವಾದಗಳು ಸಂಭವಿಸದಂತೆ ಜಾಗರೂಕರಾಗಿರಬೇಕು. ಕುಟುಂಬೀಯರ ಅಗಲುವಿಕೆಯನ್ನು ಹೊಂದಲಿರುವ ಯೋಗ ಕಂಡುಬರುವುದಾಗಿದೆ.

ಮಕರ: ಸಾಮಾಜಿಕ ವಿಷಯದಲ್ಲಿ ಆಸಕ್ತಿಯು ಕಂಡುಬರುವುದಾಗಿದೆ. ದೇಹಾರೋಗ್ಯದ ನೆಲೆಯು ಚೆನ್ನಾಗಿರುವುದಿಲ್ಲ. ಬಂಧುಜನರ ವಿಯೋಗವನ್ನು ಹೊಂದಲಿರುವ ಯೋಗವಿದೆ.

ಕುಂಭ: ಕೆಲಸಗಳೆಲ್ಲಾ ಅಪೂರ್ಣಗಳಾಗಿಯೇ ತೋರಿಬರುವವು. ನಿಮ್ಮ ಬಂಧುಜನರ ವಿಯೋಗಾವಕಾಶವಿರುವುದು. ಸಂಪತ್ತಿನ ಉನ್ನತಿಯನ್ನು ವಾಣಿಜ್ಯದಲ್ಲಿ ಹೊಂದಲಿರುವ ಯೋಗವಿದೆ. ಪ್ರಯಾಣವಾಗಲಿರುವ ಯೋಗವಿದೆ.

ಮೀನ: ಎಲ್ಲಾ ಕೆಲಸಗಳೂ ಸಾವಕಾಶವಾಗುವವು. ಸಂಪತ್ತಿನ ನೆಲೆಯಿಂದ ಪ್ರಗತಿ ಇದೆ. ವಿದ್ಯಾಜೀವನದವರು ಅಭಿವೃದ್ಧಿಯನ್ನು ಹೊಂದಲಿರುವ ಯೋಗವಿದೆ. ವ್ಯಾಪಾರಿಗಳಿಗೆ ಪ್ರಗತಿಯು ಈ ವಾರದಲ್ಲಿದೆ.

# ವಾರದ ಪ್ರಭಾತ ಪಂಚಾಂಗ

ಮಿಥುನ ಆಷಾಢ ಬಹುಳ

| ತಾರೀಕು | ವಾರ | ತಿಥಿ | | ನಿತ್ಯ ನಕ್ಷತ್ರ | ಯೋಗ | ಕರಣ | ವಿಷ | ಅಮೃತ | ಮಹಾನಕ್ಷತ್ರ |
|---|---|---|---|---|---|---|---|---|---|
| | | ಸೌರ | ಚಾಂದ್ರ | | | | | | ಆರ್ದ್ರಾ |
| 3 | ರವಿ | ೧೯ | ಪಾ ೪೯||| | ಪೂಷಾ ೩೩। | ಐ ೪೩। | ಬಾ ೧೮|| | ೫೪||| | ೨೦|| | ೪೭। |
| 4 | ಚಂದ್ರ | ೨೦ | ಬಿ ೫೩ | ಉಷಾ ೩೮ | ವೈ ೪೩। | ತೈ ೨೧। | ೪೯ | ೨೦|| | ೫೧|| |
| 5 | ಕುಜ | ೨೧ | ತ ೫೭। | ಶ್ರ ೪೩||| | ವಿ ೪೪। | ವ ೨೫। | ೫೪||| | ೧೫। | ೫೫||| |
| 6 | ಬುಧ | ೨೨ | ಚೌ ೬೦ | ಧ ೫೦। | ಪ್ರೀ ೪೭। | ಬ ೨೯। | ೦ | ೨೧। | ಪು । |
| 7 | ಗುರು | ೨೩ | ಚೌ ೧ | ಶ ೫೭|| | ಆ ೪೮ | ಬಾ ೧ | ೧೦|| | ೩೭। | ೪|| |
| 8 | ಶುಕ್ರ | ೨೪ | ಪ ೮||| | ಪೂಭ ೬೦ | ಸೌ ೫೦|| | ತೈ ೮|| | ೧೫|| | ೪೨|| | ೮||| |
| 9 | ಶನಿ | ೨೫ | ಪ ೧೪|| | ಪೂಭ ೫ | ಶೋ ೫೨||| | ವ ೧೪|| | ೩೧||| | ೫೮|| | ೧೩। |

## ಎಂ. ಎಲ್. ಸಿ. ಆಗಿ ನೇಮಕ

ಮಂಗಳೂರಿನ ಮಾಜಿ ಎಂ. ಎಲ್. ಎ. ಶ್ರೀ ಕೆ. ದೂಮಪ್ಪ ಅವರನ್ನು ಮೈಸೂರು ಗವರ್ನರರು ರಾಜ್ಯ ವಿಧಾನ ಪರಿಷತ್ತಿನ ಸದಸ್ಯರನ್ನಾಗಿ ನಾಮಕರಣ ಮಾಡಿರುವರು.

## ಶ್ರೀ ನಿಜಲಿಂಗಪ್ಪನವರಲ್ಲಿ ಕಾಸರಗೋಡು ನಿಯೋಗ

ಉಜಿರೆ ಮಂಜುನಾಥೇಶ್ವರ ಕೊಲೇಜಿನ ಉದ್ಘಾಟನೆಗಾಗಿ ಉಜಿರೆಗೆ ಆಗಮಿಸಿದ್ದ ಮೈಸೂರು ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರನ್ನು ಶ್ರೀ ಕೆ. ಮಹಾಬಲ ಭಂಡಾರಿಯವರ ನೇತೃತ್ವದಲ್ಲಿ ಶ್ರೀ ಬಿ. ದಾಮೋದರ ಅಗ್ಗಿತ್ತಾಯ, ಶ್ರೀ ಕೆ. ಕೆ. ರೈ ಮುಂತಾದ 14 ಸದಸ್ಯರನ್ನೊಳಗೊಂಡ ಕಾಸರಗೋಡು ನಿಯೋಗವು ಭೇಟಿಯಾಗಿ, ಗಡಿ ನಿರ್ಣಯದ ಬಗ್ಗೆ ಏಕ ಸದಸ್ಯ ಆಯೋಗ ಹಾಗು ಕಾಸರಗೋಡು ಸಮಸ್ಯೆಯ ಕುರಿತು ಅವರೊಡನೆ ಸಮಾಲೋಚನೆ ನಡೆಸಿತಾಗಿ ತಿಳಿಯಲಾಗಿದೆ.

ಚೀನಾಯಾತ್ರಿಕ

# ಹ್ಯೂವೆನ್‌ತ್ಸಾಂಗ್

(ಲೇಖಕ: ಎಂ. ಎಸ್. ನರಸಿಂಹ ಭಟ್)

ತನ್ನ ಮತಸ್ಥಾಪಕನಾದ ಭಗವಾನ್ ಬುದ್ಧನು ಜನ್ಮವೆತ್ತಿದ ದೇಶವನ್ನು ನೋಡಿ, ಅವನ ಪಾದಧೂಳಿಯಿಂದ ಪವಿತ್ರವಾದ ನಾಡನ್ನು ತಾನ ಪರಿಶೀಲಿಸಿ ಇಹ ಜನ್ಮದಲ್ಲಿ ಮುಕ್ತಿಯನ್ನು ಪಡೆಯಬೇಕೆಂಬ ಒಂದೇ ಹಂಬಲಿನಿಂದ, ಚೀನಾದೇಶದಿಂದ ಕಾಲ್ನಡೆಯಾಗಿ ಭಾರತಕ್ಕೆ ಬಂದನು— ಹ್ಯೂವೆನ್‌ತ್ಸಾಂಗ್. ಅವನಿಗೆ ಚೀನದಿಂದ ಭಾರತಕ್ಕೆ ಬೋಲನ್ ಕಣಿವೆಯ ಮಾರ್ಗವಾಗಿ ಬರುವುದಕ್ಕೆ ಆರುವರೆ ತಿಂಗಳ ಕಾಲ ಹಿಡಿಯಿತು.

ಗೊಂಡಾರಣ್ಯಗಳನ್ನೂ, ನದಿ, ಕೆರೆ, ಕುಂಟೆಗಳನ್ನೂ ದಾಟಿ, ತನ್ನ ರಕ್ಷಣೆಯ ಭಾರವನ್ನೆಲ್ಲ ದೇವರಿಗೊಪ್ಪಿಸಿ, ಏಕಚಿತ್ತದಿಂದ ಧ್ಯಾನಿಸುತ್ತ ಬಂದನು, ಈ ಯಾತ್ರಿಕ. ಅವನಿಗಿಂತಲೂ ಹಿಂದಿನವರು ಆ ದಾರಿಯಾಗಿ ಬರುತ್ತಾ, ಹಸಿವೆ-ನೀರಡಿಕೆಗಳಿಂದಲೂ, ಕಾಡುಮೃಗಗಳೊಡನೆ ಹೋರಾಡಿಯೂ ಸತ್ತುಬಿದ್ದು ಅಲ್ಲಲ್ಲಿ ತಮ್ಮ ಅಸ್ಥಿಗಳನ್ನು ಬಿಟ್ಟಿದ್ದರು. ಹ್ಯೂವೆನ್‌ತ್ಸಾಂಗನು ಇದನ್ನೆಲ್ಲ ಅಲ್ಲಲ್ಲಿ ಕಂಡರೂ, ಕಂಗೆಡಲಿಲ್ಲ; ಅವನ ನಿರ್ಧಾರವು ಸಡಿಲಿಸಲಿಲ್ಲ. ಆ ಅಸ್ಥಿಗಳೂ ತಲೆಬುರುಡೆಗಳೂ ಅವನಿಗೆ ಮಾರ್ಗದರ್ಶಕವಾಗುವ ಗುರುತಿನಂತಾದವು; ಅವುಗಳನ್ನೇ ಆಧಾರವಾಗಿಟ್ಟುಕೊಂಡು ಮುನ್ನಡೆದನು. ಕಾಡುಗಳಲ್ಲಿರುವ ಕಂದಮೂಲಗಳು, ಹಣ್ಣುಹಂಪಲುಗಳು ಮತ್ತು ನದಿಗಳ ನೀರು—ಇವೇ ಅವನ ಆಹಾರ. ಆದರೆ, ಎಲ್ಲಕ್ಕೂ ಮಿಗಿಲಾಗಿ ಅವನಲ್ಲಿದ್ದುದು ಚಿತ್ತೈಕಾಗ್ರತೆ, ದೃಢತೆ. ಶುದ್ಧ ಹೃದಯದಿಂದಲೂ ಮನೋಸ್ಥೈರ್ಯದಿಂದಲೂ ಬಂದವನಾದ ಕಾರಣ, ಅವನು ತನ್ನ ಉದ್ದೇಶವನ್ನು ಸಾಧಿಸಿದನು.

ಹ್ಯೂವೆನ್‌ತ್ಸಾಂಗನು ಚೀನಾದೇಶದ ಕಿಯೊವಾಯಿ ಎಂಬ ಗ್ರಾಮದಲ್ಲಿ ಕ್ರಿ. ಶ. 600ನೇ ಇಸವಿಯಲ್ಲಿ ಜನ್ಮತಾಳಿದನು. ಅವನು ಕ್ರಿ. ಶ. 630ರಿಂದ 644ರ ವರೆಗೆ ನಮ್ಮ ದೇಶದಲ್ಲಿದ್ದು, ಸಂಸ್ಕೃತವನ್ನು ನಾಲಂದಾ ವಿಶ್ವವಿದ್ಯಾಲಯದಲ್ಲಿ ಕಲಿತು, ತನಗೆ ಬೇಕಾದ ಎಲ್ಲ ಸಂಗ್ರಹಗಳನ್ನು ಕಟ್ಟಿಕೊಂಡು, ತಾಮ್ರಲಿಪ್ತಿ ಎಂಬ ಬಂದರದ ಮಾರ್ಗವಾಗಿ ಪುನಃ ಚೀನಾದೇಶಕ್ಕೆ ಮರಳಿದನು. ಇವನನ್ನು ಜನರು ಪ್ರೀತಿಯಿಂದ, "Master of Law" ಮತ್ತು "Present Sakhyamuni" ಎಂದು ಕರೆಯುತ್ತಾರೆ.

ಹ್ಯೂವೆನ್‌ತ್ಸಾಂಗನು ತನ್ನ 20ನೇ ವರುಷ ಪ್ರಾಯದಲ್ಲಿಯೇ ಸನ್ಯಾಸವನ್ನು ಸ್ವೀಕರಿಸಿ, ತನ್ನ ಜೀವನದ ಗುರಿಯನ್ನು ಸಾಧಿಸಿದನು. ಇವನು ಬರುವಾಗ ತಾಷ್‌ಕಂಡ್, ಕಾಶ್‌ಘರ್, ಸಮರ್‌ಖಂಡ್ ಆಗಿ, ಬೋಲಾನ್ ಕಣಿವೆಯ ಮಾರ್ಗವಾಗಿ ನಮ್ಮ ದೇಶದಲ್ಲಿಳಿದಿದ್ದನು. ಕಾಶ್ಮೀರದಲ್ಲಿ ಎರಡು ವರ್ಷಗಳ ಕಾಲವಿದ್ದು, ಅನಂತರ ಬುದ್ಧನ ಜನ್ಮಕ್ಕೆ ಹಾಗೂ ಸಂಚಾರಕ್ಕೆ ಸಂಬಂಧಪಟ್ಟ ಸ್ಥಳಗಳನ್ನು ನೋಡಿ, ಅಲ್ಲಲ್ಲಿ ತನಗೆ ಬೇಕಾದುದನ್ನು ಶೇಖರಿಸಿದನು.

ಕಾಮಪುರದ ರಾಜನಾದ ಕುಮಾರನೂ ಕನೋಜದ ರಾಜನಾದ ಹರ್ಷವರ್ಧನನೂ ಇವನನ್ನು ಸ್ವಾಗತಿಸಿದರು. ಇವನು ಉತ್ತರ ಹಿಂದೂಸ್ಥಾನವನ್ನಲ್ಲದೆ ದಕ್ಷಿಣಪಥವನ್ನೂ ಸಂಚರಿಸಿದ್ದನು ಕ್ರಿ. ಶ. 645ರಲ್ಲಿ ಅವನು ಮರಳಿ ಹೋಗುವಾಗ ಬುದ್ಧನ 150 ಸ್ಮಾರಕ ಅವಶಿಷ್ಟಗಳನ್ನು (Relics) ತನ್ನೊಡನೆ ಒಯ್ದನು. ಬುದ್ಧನ ಪ್ರತಿಮೆಗಳಲ್ಲಿ ಕೆಲವು ಸುವರ್ಣದವು ಮತ್ತೆ ಕೆಲವು ಆನೆಯ ದಂತವು; ಇನ್ನು ಕೆಲವು ಚಂದನದವು — ಇದ್ದವು. ಇಲ್ಲಿಯ ರಾಜರು ಅವನಿಗೆ ಕೊಟ್ಟ ಪಾರಿತೋಷಕಗಳಲ್ಲಿ ಬುದ್ಧನ ಪ್ರತಿಮೆಗಳೇ ಹೆಚ್ಚಾಗಿದ್ದವು.

ಹ್ಯೂವೆನ್‌ತ್ಸಾಂಗನಿಂದ ಬರೆದಿಟ್ಟಿದ್ದ ವಿಷಯಗಳು, ಆಗಿನ ಕಾಲದ ಚರಿತ್ರೆಯ ಮೇಲೆ ಬೆಳಕು ಬೀರುತ್ತವೆ. ಹರ್ಷವರ್ಧನನ ವಿಷಯದಲ್ಲಿ ಹ್ಯೂವೆನ್‌ತ್ಸಾಂಗನು ಬಹಳಷ್ಟು ಬರೆದಿದ್ದಾನೆ: "The account of India left to us Huen Tsang reads like a Gazetteer in the scope of its enquiry and its wealth of details. It gives us copious information on the social, political, economic, religious and administrative aspects of the life of India during the first of the 7th century"— ಎಂದು, ಇತಿಹಾಸಕಾರರಾದ ಡಾ| ಆರ್. ಕೆ. ಮುಖರ್ಜಿಯವರು ಬರೆಯುತ್ತಾರೆ.

ಹ್ಯೂವೆನ್‌ತ್ಸಾಂಗನ ತನ್ನ ಗ್ರಂಥದಲ್ಲಿ, ಭಾರತದ ಕುರಿತು ಹೀಗಿದೆ: "ನಗರಗಳಲ್ಲಿಯೂ ಗ್ರಾಮಗಳಲ್ಲಿಯೂ ಒಳಾಂಗಣಗಳಿವೆ. ಅಲ್ಲದೆ, ಹೆಬ್ಬಾಗಿಲುಗಳು ಭದ್ರವಾಗಿವೆ. ಅಗಲವಾದ ಗೋಡೆಗಳಿವೆ. ಬೀದಿಗಳೂ ಇತರ ದಾರಿಗಳೂ ಶುಚಿರ್ಭೂತವಾಗಿವೆ. ಆದರೆ, ಕೆಲವೊಂದು ಮಾರ್ಗಗಳು ಕೊಳಕಾಗಿವೆ. ಮಾರ್ಗಗಳ ಎರಡು ಬದಿಗಳಲ್ಲೂ ಅಂಗಡಿಗಳ ಸಾಲುಗಳಿವೆ. ವೀಳ್ಯದೆಲೆಯ ಅಂಗಡಿಗಳು ಎಲ್ಲೆಲ್ಲೂ ಕಂಡುಬರುತ್ತಿವೆ. ಕಟುಕರು, ಮೀನುಗಾರರು, ವೇಶ್ಯೆಯರು ಮತ್ತು ನರ್ತಕರು ನಗರದ ಹೊರಗೇ ವಾಸಿಸುತ್ತಿರುವರು; ಅವರ ಮನೆಗಳಿಗೆ ಅಂತಸ್ತುಗಳಿಲ್ಲ. ರಾಜನ ಧೋರಣೆಯು ಕೂಡ ಹಾಗೆಯೇ ಇದೆ. ಗೋಡೆಗಳು ಹೆಚ್ಚಾಗಿ ಇಟ್ಟಿಗೆಗಳಿಂದಲೇ ಕಟ್ಟಲ್ಪಡುತ್ತಿವೆ. ಮನೆಯ ಮಾಡು ಹೆಚ್ಚಾಗಿ ಬಿದಿರುಗಳಿಂದಲೇ ಕಟ್ಟುವುದು ಇಲ್ಲಿ ವಾಡಿಕೆಯಾಗಿದೆ. ಕೆಲವೊಂದು ಕಟ್ಟಡಗಳು ಚೀನಾದೇಶದ ಕಟ್ಟಡಗಳಿಗೆ ಹೋಲುತ್ತಿವೆ. ಸಾಮಾನ್ಯ ಎಲ್ಲ ಕಡೆಗಳಲ್ಲಿ ನೆಲಕ್ಕೆ ಸೆಗಣಿ ಸಾರಿಸುವರು—ಆದರೆ ಚೀನದಲ್ಲಿ ಅದು ನಿಷಿದ್ಧ. ಸಂಘಾರಾಮಗಳು ಪ್ರತಿ ನಗರದಲ್ಲಿಯೂ ಇವೆ. ಇವುಗಳನ್ನು ಜನರು, ಚಂದಾ ವಸೂಲು ಮಾಡಿ ಕಟ್ಟಿಸುತ್ತಾರೆ."—

ಇದೇ ರೀತಿಯಲ್ಲಿ ಹ್ಯೂವೆನ್‌ತ್ಸಾಂಗನು ನಮ್ಮ ದೇಶದ ಕುರಿತು ತುಂಬ ಬರೆದಿದ್ದಾನೆ. ಜನರ ಅಭಿವೃದ್ಧಿಯನ್ನು ಕಂಡು ಹಿರಿ ಹಿರಿ ಹಿಗ್ಗಿದ್ದಾನೆ. ಬಂಗಾರದ ನಾಣ್ಯಗಳು ಚಲಾವಣೆಯಲ್ಲಿರುವುದು ಈ ದೇಶದಲ್ಲಿ ಮಾತ್ರ, ಎಂದು ಅವನು ಜಗತ್ತಿಗೆ ಸಾರಿದ್ದಾನೆ.

ಭಾರತದಲ್ಲಿ ಹೆಂಗಸರಿಗೆ ಪುನರ್ವಿವಾಹವು ಇರಲಿಲ್ಲ. ಆ ಕಾಲದಲ್ಲಿ ಸತಿಸಹಗಮನವು ರೂಢಿಯಲ್ಲಿತ್ತು. ಆದುದರಿಂದ ರಾಣಿಯಾದ ಯಶೋಮತಿಯು, ತನ್ನ ಪತಿ ಪ್ರಭಾಕರ ವರ್ಧನನು ತೀರಿಕೊಂಡಾಗ ಸಹಗಮನ ಮಾಡಿದುದನ್ನು ಹ್ಯೂವೆನ್‌ತ್ಸಾಂಗನು ಬರೆದಿದ್ದಾನೆ.

---

## 'ಕೇರ್' ಅಧಿಕಾರಿಗಳಿಂದ ಪರಿಶೀಲನೆ

ಮಂಗಳೂರು ನಗರದ ಶಾಲೆಯೊಂದರಲ್ಲಿ ಕಳೆದ ತಾ 24ರಂದು 'ಕೇರ್' ಸಂಸ್ಥೆಯಿಂದ ಒದಗಿಸಲಾದ ಉಪ್ಪಿಟ್ಟು ತಿಂದು ಮಕ್ಕಳು ವಾಂತಿ ಮಾಡಿದರೆಂಬ ವರದಿಯನ್ನು ತಿಳಿದ 'ಕೇರ್' ಸಂಸ್ಥೆಯ ಮೈಸೂರು ವಿಭಾಗದ ಕ್ಷೇತ್ರಾಧಿಕಾರಿ ಶ್ರೀ ಕೆ. ಪಿ. ಅಪ್ಪಯ್ಯನವರು ತಾ. 26ರಂದು ಬೆಂಗಳೂರಿನಿಂದ ಮಂಗಳೂರಿಗೆ ಆಗಮಿಸಿ ಅಗತ್ಯವುಳ್ಳ ಪರಿಶೀಲನೆ ನಡೆಸಿರುವರಾಗಿ ತಿಳಿಯಲಾಗಿದೆ. ಶಾಲೆಗೆ 'ಕೇರ್' ಸಂಸ್ಥೆ ಒದಗಿಸಿದ ಆಹಾರ ವಸ್ತುಗಳಲ್ಲಿ ಏನೂ ಕೊರತೆಯಿರುವುದಿಲ್ಲವೆಂದೂ, ಉಪ್ಪಿಟ್ಟು ತಯಾರಿಸಿದ ಸಜ್ಜಿಗೆಯ ಕಟ್ಟುಗಳಿಗೆ ಸೀಮೆಎಣ್ಣೆ ತಾಗಿದ್ದು, ಅದನ್ನು ಅಜಾಗರೂಕತೆಯಿಂದ ಬೇಯಿಸಿ ಉಪ್ಪಿಟ್ಟು ತಯಾರಿಸಿದುದೇ ಮಕ್ಕಳ ವಾಂತಿಗೆ ಕಾರಣವಾಯಿತೆಂದು ಅವರು ಸ್ಪಷ್ಟೀಕರಣ ನೀಡಿರುವರು.

## ಕೆನರಾ ಬೇಂಕಿನ ವಜ್ರೋತ್ಸವ ಸಮಾರಂಭಗಳು

ಪ್ರಗತಿಯಿಂದ ಪ್ರಗತಿಗೆ ಮುನ್ನಡೆದು ಇಂದು ದಕ್ಷಿಣ ಭಾರತದ ಪ್ರಮುಖ ಬೇಂಕಿನ ಸ್ಥಾನಕ್ಕೇರಿರುವ ಕೆನರಾ ಬೇಂಕಿಗೆ ಕಳೆದ ಜುಲೈ ತಾ 1ರಂದ 60 ವರ್ಷಗಳು ತುಂಬಿ, ಅದರ ಸ್ಮಾರಕವಾಗಿ ವಜ್ರಮಹೋತ್ಸವ ಸಮಾರಂಭಗಳು ಆರಂಭವಾಗಿವೆ. ವಜ್ರಮಹೋತ್ಸವದ ಅಂಗವಾಗಿ ಭಾರತದ ನಿರ್ದಿಷ್ಟ ಮುಖ್ಯ ನಗರಗಳಲ್ಲಿ ಸಮಾರಂಭಗಳ ಪಂಕ್ತಿಯನ್ನು ಯೋಜಿಸಲಾಗಿದೆ. 1956ರಲ್ಲಿ ಕೆನರಾ ಬೇಂಕು ತನ್ನ ಸ್ವರ್ಣ ಮಹೋತ್ಸವವನ್ನು ಯಶಸ್ವಿಯಾಗಿ ಅತ್ಯಂತ ವಿಜೃಂಭಣೆಯಿಂದ ಆಚರಿಸಿತ್ತು. 1965ನೇ ದಶಂಬರ 31ರ ಆಯವ್ಯಯ ಪತ್ರ ತೋರಿಸುವಂತೆ, ಬೇಂಕ್ ಠೇವಣಿಯು ರೂ. 98 ಕೋಟಿಗಿಂತ ಹಾಗು ಕಾರ್ಯರೂಪದ ನಿಧಿಯು ರೂ. 110 ಕೋಟಿಗಿಂತ ಮಿಕ್ಕಿದ್ದು, 240 ಶಾಖೆಗಳಿರುವ ಈ ಬೇಂಕಿನಲ್ಲಿ 5,000ಕ್ಕಿಂತ ಹೆಚ್ಚಿಗೆ ಉದ್ಯೋಗಿಗಳಿರುವರು. ಭಾರತೀಯ ಬ್ಯಾಂಕ್ ಉದ್ದಿಮೆಯಲ್ಲಿ ಈ ಬ್ಯಾಂಕು ಒಂದು ಘನ ಸ್ಥಾನ ಹೊಂದಿದ್ದು ಭಾರತದಲ್ಲಿ ಮಾತ್ರವಲ್ಲದೆ ವಿದೇಶಗಳಲ್ಲೂ ಬ್ಯಾಂಕ್ ಹಾಗು ವಾಣಿಜ್ಯ ವೃತ್ತಗಳಲ್ಲಿ ಕೆನರಾ ಬೇಂಕು ಪ್ರತಿಷ್ಠೆ ಗಳಿಸಿದೆ.

---

ಈ ವಾರ

**ಮಂಗಳೂರಿನ ಚಿತ್ರಮಂದಿರಗಳಲ್ಲಿ**

ರೂಪವಾಣಿ 3ನೇ ವಾರ 3 ದೇಖಾವೆ

**ಮೊಹಬ್ಬತ್ ಜಿಂದಗಿ ಹೈ**

(ಹಿಂದಿ)

ರಾಜಶ್ರೀ—ಧರ್ಮೇಂದ್ರ—ಮಾಧವಿ
ನಾಜೀರ್‌ಹುಸೇನ್—ದೇವನ್‌ವರ್ಮಾ
ಮೆಹಮೂದ್

---

ರಾಮಕಾಂತಿ 3 ದೇಖಾವೆ

**ಆನಂದಿ**

(ತಮಿಳು)

S. S. ರಾಜೇಂದ್ರನ್— ವಿಜಯಕುಮಾರಿ
ನಂಬಿಯಾರ್—ನಾಗೇಶ್ ಮನೋರಮ

---

CENTRAL 3 Shows

Frederick Stafford in

**O. S. S. 117**

*MISSION FOR A KILLER*

[Franscope-Eastmancolor]

---

ಜ್ಯೋತಿ 5ನೇ ವಾರ 3 ದೇಖಾವೆ

**ಸೂರಜ್**

(ಟೆಕ್ನಿಕಲರ್ ಹಿಂದಿ)

ರಾಜೇಂದ್ರ ಕುಮಾರ್— ವೈಜಯಂತಿಮಾಲಾ
ಅಜಿತ್ —ಮುಮ್ತಾಜ್—ಜೋನಿವಾಕರ್

---

ನ್ಯೂಚಿತ್ರಾ 3 ದೇಖಾವೆ

**ಷಗೂನ್**

(ಹಿಂದಿ)

ಕಮಲ್‌ಜೀತ್—ವಹಿದಾ ರೆಹಮಾನ್

---

BALAJI 3 Shows

**633 SQUADRON**

[C'scope—Color]

Winged Legend of World war II.

---

ಪ್ರಭಾತ್ 3 ದೇಖಾವೆ

**ನೀಲವಾನಂ**

(ತಮಿಳು)

ಪದ್ಮಶ್ರೀ ಶಿವಾಜಿಗಣೇಶನ್—ದೇವಿಕ
ರಾಜಶ್ರೀ—ಸಹಸ್ರನಾಮಂ
ಸೀತಾಲಕ್ಷ್ಮಿ—ನಾಗೇಶ್



Printed at The Prabhat Printers, Ltd., Mangalore. Edited and Published by K. V. Shenoy at Prabhat Office, Car Street, Mangalore.